ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 29 | ಜುಲೈ 15-21, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅಪಾಯಗಳು




ಕರ್ನಾಟಕದಲ್ಲಿ ಬಿಜೆಪಿಯಿಂದ ಜನತಂತ್ರ ಬುಡಮೇಲು

ಕಾರ್ಮಿಕರಿಗೆ ರೈತರಿಗೆ ವಿಶ್ವಾಸಘಾತ ಮಾಡಿದ ಬಜೆಟ್







ವಿದ್ಯುತ್ ದರ ಏರಿಕೆ: ಮೆಸ್ಕಾಂ ಹಗಲು ದರೋಡೆ

ಅರಣ್ಯ ಕಾಯ್ದೆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು –ಅರಣ್ಯ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

"ಇದು ಕೇಂದ್ರೀಕರಣ, ವ್ಯಾಪಾರೀಕರಣ ಮತ್ತು ಅಪರಾಧೀಕರಣದ ನೀಲನಕ್ಷೆ"



ಅರಣ್ಯ ಕಾಯ್ದೆ, 1927ಕ್ಕೆ ಸರಕಾರ ಸೂಚಿಸಿರುವ ಕರಡು ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅವನ್ನು ಹಿಂತೆದುಕೊಳ್ಳಬೇಕು. ಅದರ ಬದಲಿಗೆ, ಈ ಕಾಯ್ದೆಯನ್ನು ಅರಣ್ಯ ಹಕ್ಕುಗಳ ಕಾಯ್ದೆ ಮತ್ತು ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಚಾರಿತ್ರಿಕ ಅನ್ಯಾಯಗಳನ್ನು, ಈಗ ಒಂದೆಡೆಯಲ್ಲಿ ಅಭಿವೃದ್ಧಿಯ ಹೆಸರಲ್ಲಿ, ಮತ್ತೊಂದೆಡೆಯಲ್ಲಿ ಸಂರಕ್ಷಣೆಯ ಹೆಸರಲ್ಲಿ ಆಧುನಿಕ ಸ್ವರೂಪಗಳಲ್ಲಿ ಎಸಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಲು ಯತ್ನಿಸಿರುವ ಇತರ ಕಾಯ್ದೆಗಳಿಗೆ ಸರಿಹೊಂದುವ ರೀತಿಯಲ್ಲಿ ತರುವುದೇ ಅರಣ್ಯ ಸಂರಕ್ಷಣೆಯ ಹಿತರಕ್ಷಣೆಯ ದೃಷ್ಟಿಯಿಂದ ಉತ್ತಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಿ ಪ್ರಕಾಶ ಜಾವ್ಡೇಕರ್ ಅವರಿಗೆ ಜುಲೈ 9ರಂದು ಬರೆದಿರುವ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಈ ಮಂತ್ರಾಲಯ ಚರ್ಚೆಗೆ ಬಿಡುಗಡೆ ಮಾಡಿರುವುದು ಅರಣ್ಯ ಕಾಯ್ದೆ, 1927ಕ್ಕೆ ತಿದ್ದುಪಡಿಗಳ ಮೊದಲ ಕರಡನ್ನು ಮಾತ್ರವಾದರೂ, ಲೋಕಸಭೆಯಲ್ಲಿ ಜೂನ್ 28ರಂದು ಪ್ರಕಾಶ್ ಜಾವ್ಡೇಕರ್ ಈ ಕುರಿತು ಸಲ್ಲಿಸಿರುವ ಲಿಖಿತ ಹೇಳಿಕೆ ಬಹಳಷ್ಟು ದಾರಿ ತಪ್ಪಿಸುವಂತದ್ದು. "ನೀವು ತಿದ್ದುಪಡಿಗಳನ್ನು ಸಮರ್ಥಿಸಿ ಕೊಂಡಿದ್ದೀರಿ. ಈ ಕಾಯ್ದೆಯಲ್ಲಿರುವ ಅತ್ಯಂತ ದಮನಕಾರಿ ಕ್ರಮಗಳನ್ನು ಅಷ್ಟೇನೂ ಮುಖ್ಯವಲ್ಲ ಎಂದು ಬದಿಗೆ ಸರಿಸುವ ಪ್ರಯತ್ನ ಮಾಡಿದ್ದೀರಿ, ಅದರಲ್ಲೂ ಬುಡಕಟ್ಟು ಸಮುದಾಯಗಳ ಹಕ್ಕುಗಳನ್ನು ದಮನಮಾಡುತ್ತಿರುವುದನ್ನು ಉಪೇಕ್ಷಿಸಿದ್ದೀರಿ. ಆದ್ದರಿಂದ ಈ ತಿದ್ದುಪಡಿಗಳ ಬಗ್ಗೆ ಹೆಚ್ಚು ವಿವರವಾದ ವಿಮರ್ಶೆಯನ್ನು ತಮಗೆ ಕೊಡುವುದು ಅಗತ್ಯ ಎಂದು ನನಗನಿಸಿದೆ. ಇದು ಸಂಸತ್ತಿಗೆ ಒಂದು ಹೆಚ್ಚು ಸರಿಯಾದ ಚಿತ್ರವನ್ನು ಕೊಡಲು ನೆರವಾಗಬಹುದು" ಎಂದು ಈ ಪತ್ರವನ್ನು ಬರೆದಿರುವುದಕ್ಕೆ ಕಾರಣವನ್ನು ತಿಳಿಸುತ್ತ ಬೃಂದಾ ಕಾರಟ್ ಹೇಳಿದ್ದಾರೆ.

1927ರ ಅರಣ್ಯ ಕಾಯ್ದೆ ಬ್ರಿಟಿಶ್ ವಸಾಹತುಶಾಹಿಗಳಿಗೆ ಭಾರತದ ಅರಣ್ಯಗಳ ಮೇಲೆ ಅವರ ಸರಕಾರದ ಒಡೆತನವನ್ನು ಸ್ಥಾಪಿಸುವ ಒಂದು ಸಾಧನವಾಗಿತ್ತು. ಈ ಕಾಯ್ದೆಯ ಮೂಲಕ ಅವರು ಬುಡಕಟ್ಟು ಸಮುದಾಯಗಳು ಅತಿಕ್ರಮಣಕಾರರು ಎಂದು ಸಾರಿದರು. ಈ ಸಮುದಾಯಗಳ ವಿರುದ್ಧ ಚಾರಿತ್ರಿಕ ಅನ್ಯಾಯಗಳಿಗೆ ಈ ಮೂಲಕ ಕಾನೂನಿನ ಮಂಜೂರಾತಿಯನ್ನು ಪಡೆಯಲಾಯಿತು. ಈಗ ಸೂಚಿಸಿರುವ ತಿದ್ದುಪಡಿಗಳು, ಕೆಲವು ಸಂಪೂರ್ಣ ಹೊಸದಾದ ವಿಭಾಗಗಳನ್ನೂ ಹೊಂದಿದ್ದು, ಈ 91 ಅಂಶಗಳು ಅರಣ್ಯ ಸಂರಕ್ಷಣೆಯನ್ನು ಮಿಲಿಟರೀಕರಿಸಿ ಬ್ರಿಟಿಶರನ್ನೂ ಮೀರಿಸಿವೆ, ಅವರು ಧೈರ್ಯ ಮಾಡದಿರುವುದನ್ನೂ ಮಾಡ ಹೊರಟಿದೆ. ಈ ತಿದ್ದುಪಡಿಗಳು ಬುಡಕಟ್ಟು ಬದುಕಿನ ಪ್ರತಿಯೊಂದು ಆಯಾಮವನ್ನೂ ಅಪರಾಧೀಕರಿಸಿವೆ, ಅರಣ್ಯ

ಪುಟ 7 ಕ್ಕೆ

ಮಾನವ ಹಕ್ಕು ಪ್ರತಿಪಾದಕರಿಗೆ ಕಿರುಕುಳ: ಪ್ರತಿಷ್ಠಿತ ನಾಗರಿಕರ ಖಂಡನೆ

ಪ್ರಸಿದ್ಧ ಮಾನವ ಹಕ್ಕು ಪ್ರತಿಪಾದಕರು ಮತ್ತು ಹಿರಿಯ ನ್ಯಾಯವಾದಿಗಳೂ ಆಗಿರುವ ಇಂದಿರಾ ಜೈಸಿಂಗ್ ಮತ್ತು ಆನಂದ ಗ್ರೋವರ್ ಮನೆ ಮತ್ತು ಅವರ 'ಲಾಯರ್ಸ್ ಕಲೆಕ್ಟಿವ್'ನ ಕಚೇರಿಗಳ ಮೇಲೆ ಜುಲೈ 11ರಂದು ಸಿಬಿಐ ದಾಳಿ ನಡೆಸಿದೆ. ಇವರನ್ನು ಬೆದರಿಸಿ ಮಣಿಸುವ ದೀರ್ಘ ಕಾಲದ ಪ್ರಯತ್ನಗಳ ಈ ಹೊಚ್ಚ ಹೊಸ ಪ್ರಕರಣ ಒಂದು ಬೆದರಿಕೆಯ ಪಾಶವೀ ಪ್ರದರ್ಶನ ಮತ್ತು ಅಧಿಕಾರದ ಸಂಪೂರ್ಣ ದುರುಪಯೋಗ ಎಂದು ಪ್ರೊ. ಪ್ರಭಾತ್ ಪಟ್ನಾಯಕ್, ಪ್ರೊ. ಸಿ ಪಿ ಚಂದ್ರ ಶೇಖರ್ ಮುಂತಾದ ಪ್ರಸಿದ್ಧ ಆರ್ಥಿಕತಜ್ಞರು, ವಿವಾನ್ ಸುಂದರಂ, ಎಂ.ಕೆ.ರೈನ ಮುಂತಾದ ಕಲಾವಿದರು ಹಾಗೂ ದೇಶದ ಇನ್ನೂ ನೂರಾರು ಪ್ರತಿಷ್ಠಿತರು ಖಂಡಿಸಿದ್ದಾರೆ. ಇಂದಿರಾ ಜೈಸಿಂಗ್ ಮತ್ತು ಆನಂದ ಗ್ರೋವರ್ ಮನೆ ಮತ್ತು ಅವರ 'ಲಾಯರ್ಸ್ ಕಲೆಕ್ಟಿವ್' ವಿರುದ್ಧ ಈ ಬೆದರಿಕೆ, ಕಿರುಕುಳ ತಕ್ಷಣವೇ ನಿಲ್ಲಬೇಕು, ಮುಂಬೈ ಹೈಕೋರ್ಟ್ ನಿರ್ಧಾರ ಬರುವ ವರೆಗೆ ಅವರ ವಿರುದ್ಧ ಕ್ರಿಮಿನಲ್ ಆರೋಪಗಳನ್ನು ಹಿಂತೆಗೆದುಕೊಳ್ಳಬೇಕು, ಮಾನವ ಹಕ್ಕು ರಕ್ಷಕರ ವಿರುದ್ಧ ಕಾನೂನು ಮತ್ತು ಪ್ರಭುತ್ವಯಂತ್ರದ ದುರ್ಬಳಕೆ ಕೊನೆಗೊಳ್ಳಬೇಕು ಮತ್ತು ರಾಷ್ಟ್ರೀಯ ಮಾನವ ಹಕ್ಕು ಆಯೋಗ ಈ ವಿಷಯವನ್ನು ತಕ್ಷಣವೇ ಗಮನಕ್ಕೆ ತಗೊಂಡು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹಣಕಾಸು ಮಂತ್ರಿಗಳ ಚೊಚ್ಚಲ ಬಜೆಟ್ ಮಹಿಳೆಯರ ನಿಜ ಸಮಸ್ಯೆಗಳತ್ತ ಗಮನ ಹರಿಸಿಲ್ಲ– ಎಐಡಿಡಬ್ಲ್ಯುಎ



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

"ಜಗತ್ತಿನ ಕಲ್ಯಾಣ ಮಹಿಳೆಯರ ಪರಿಸ್ಥಿತಿಯನ್ನು ಉತ್ತಮ ಪಡಿಸದೆ ಸಾಧ್ಯವಿಲ್ಲ. ಹಕ್ಕಿ ಒಂದೇ ರೆಕ್ಕೆಯಿಂದ ಹಾರಲಾರದು" –ಇದು ಸ್ವಾಮಿ ವಿವೇಕಾನಂದರ ವಾಣಿ ಎಂದು ನಿರ್ಮಲಾ ಸೀತಾರಾಮನ್ ತಮ್ಮ ಬಜೆಟ್ ಭಾಷಣದ ಸಂದರ್ಭದಲ್ಲಿ ಹೇಳಿದರು. ತಮ್ಮ ಸರಕಾರ ಮಹಿಳೆಯರ ಅಭಿವೃದ್ಧಿಗೆ ಮತ್ತು ಜೀವನಾಧಾರದ ಅವಕಾಶಗಳನ್ನು ಒದಗಿಸಲಿಕ್ಕೆ ಸಾಕಷ್ಟು ಅವಕಾಶಗಳನ್ನು ಕೊಟ್ಟಿದೆ ಎಂದೂ ಬೆನ್ನು ತಟ್ಟಿಕೊಂಡರು. ಆದರೆ ಪ್ರಸಕ್ತ ವಾಸ್ತವತೆಗಳ ನೆಲೆಯಲ್ಲಿ ನೋಡಿದಾಗ ಇದು ಅರೆಸತ್ಯಗಳಿಂದ ತುಂಬಿರುವ ಟೊಳ್ಳು ಮಾತು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಅವರ ಮೋದಿ–2 ಸರಕಾರದ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್‌ರವರ ಮೊದಲ ಬಜೆಟ್ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿದೆ.

ಇತ್ತೀಚಿನ 'ಶ್ರಮಿಕ ಪಡೆಯ ಸರ್ವೇ'ಯ ಪ್ರಕಾರ ಮಹಿಳಾ ಉದ್ಯೋಗ ಹಿಂದೆಂದೂ ಕಂಡಿರದ ಕೆಳಮಟ್ಟಕ್ಕೆ ಇಳಿದಿದೆ. ಇದು ಮುಖ್ಯವಾಗಿ ದೇಶವನ್ನು ಬಾಧಿಸುತ್ತಿರುವ ಕೃಷಿ ಸಂಕಟದಿಂದಾಗಿ ಉಂಟಾಗಿದೆ. ಆದರೂ 50 ಕೋಟಿಗಿಂತಲೂ ಹೆಚ್ಚು ಜನ ಬರಗಾಲದಿಂದ ಪೀಡಿತರಾಗಿರುವ, ಹಲವು ನಗರಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ಪರದಾಡುತ್ತಿರುವ ಸಮಯದಲ್ಲಿ ಬಂದಿರುವ ಈ ಬಜೆಟ್ ಕೃಷಿ ವಲಯದ ಪುನಶ್ಚೇತನಕ್ಕೆ ಮತ್ತು ಆ ಮೂಲಕ ಕಳೆದುಹೋದ ಮಹಿಳೆಯರ ಜೀವನಾಧಾರಗಳನ್ನು ಮತ್ತೆ ದೊರಕಿಸಿ ಕೊಡಲು ಸಾರ್ವಜನಿಕ ವೆಚ್ಚಗಳನ್ನು ಹೆಚ್ಚಿಸಬೇಕಾಗಿತ್ತು.

ಆದರೆ ಈ ಬಜೆಟಿನಲ್ಲಿ ಸಾರ್ವಜನಿಕ ವೆಚ್ಚ ಈ ಬಾರಿಯೂ ಜಿಡಿಪಿಯ 13.2% ಮಟ್ಟದಲ್ಲೇ ಉಳಿದಿದೆ. **ಮಹಿಳೋನ್ಮುಖ ಸ್ಕೀಮುಗಳಿಗೆ ಹಣ ನೀಡಿಕೆ ಕಳೆದ ವರ್ಷ ಜಿಡಿಪಿಯ 0.66ಶೇ. ಇತ್ತು, ಈ ಬಾರಿ ಅದು 0.64%ಕ್ಕೆ ಇಳಿದಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನೀಡಿರುವ ಹಣದ ಪ್ರಮಾಣ ಕಳೆದ ಬಜೆಟಿನಲ್ಲಿ 5.1% ಇತ್ತು. ಈ ವರ್ಷ ಅದು 4.9%ಕ್ಕೆ ಇಳಿದಿದೆ. ಅಂದರೆ ಈ ಸರಕಾರದ ಸದಾಶಯ ಮಾತಿನಲ್ಲಿ ಮಾತ್ರ, ಕ್ರಿಯೆಯಲ್ಲಿ ಇಲ್ಲ.**

ಹಣಕಾಸು ಮಾರುಕಟ್ಟೆಗಳ 'ಉದಾರೀಕರಣ' ಈ ಬಜೆಟಿನ ಒಂದು ಪ್ರಮುಖ ಅಂಶ. ಇದು ಮಹಿಳೆಯರನ್ನು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ(ಎನ್‌ಬಿಎಫ್‌ಸಿ)ಗಳ ದುರಾಸೆಗೆ ಒಡ್ಡುತ್ತದೆ. ಈ ಸಂಸ್ಥೆಗಳು ಹೆಚ್ಚಿನ ಬಡ್ಡಿದರದಲ್ಲಿ ಸಾಲ ಕೊಟ್ಟು ಮಹಿಳೆಯರ ಮೇಲೆ ಸಾಲದ ಹೊರೆ ಹೇರಿಸಿದ್ದು ಇದುವರೆಗಿನ ಅನುಭವ. ಈ ಸಂಸ್ಥೆಗಳಿಗೆ ಮಹಿಳೆಯರು ಒಂದು ಫಲವತ್ತಾದ ಮಾರುಕಟ್ಟೆ ಎಂದಿರುವ ಈ ಬಜೆಟ್ ಪ್ರತಿಯೊಂದು ಸ್ವಸಹಾಯ ಗುಂಪಿನ ಒಬ್ಬ ಮಹಿಳೆಗೆ 1 ಲಕ್ಷರೂ. ಮುದ್ರಾ ಸಾಲ ಕೊಡಲಾಗುವುದು ಎಂದು ಪ್ರಕಟಿಸಿದೆ. ಇವನ್ನು ಅದೇ ಎನ್‌ಬಿಎಫ್‌ಸಿಗಳ ಮೂಲಕ ನಡೆಸಲಾಗುತ್ತದೆ. ಇನ್ನೊಂದೆಡೆಯಲ್ಲಿ ಸ್ವಸಹಾಯ ಗುಂಪುಗಳಿಗೆ ಬಡ್ಡಿ ರಹಿತ ಸಾಲ ಒದಗಿಸುವ ಮಾತಿಲ್ಲ. ಮಹಿಳೆಯರಿಗೆ ಸಾಲ ಕೊಡಲು ಅನುಕೂಲವಾಗುವಂತೆ ಈ ಎನ್‌ಬಿಎಫ್‌ಸಿಗಳಿಗೆ ಬಂಡವಾಳ ಒದಗಿಸುವುದಾಗಿ ಹೇಳಲಾಗಿದೆ. ಈ ಮೂಲಕ ಈ ಬಜೆಟ್ ಒಂದರ್ಥದಲ್ಲಿ ಮಹಿಳೆಯರನ್ನು ಹಣಕಾಸು ಮಾರುಕಟ್ಟೆಯ ಒಳಕ್ಕೆ ಸಮಗ್ರೀಕರಿಸುವ ಒಂದು ಹೊಸ ಹಂತವನ್ನು ಆರಂಭಿಸಿದಂತಾಗಿದೆ ಎಂದು ಎಐಡಿಡಬ್ಲ್ಯುಎ ವಿಶ್ಲೇಷಿಸುತ್ತ, ಇದು ಮಹಿಳೆಯರನ್ನು ಕಾರ್ಪೊರೇಟ್ ತಿಮಿಂಗಿಲಗಳಿಗೆ ಆಹಾರವಾಗಿಸುವ ಅಪಾಯವಿದೆ ಎಂದು ಹೇಳಿದೆ. ಸಂಕಟದಲ್ಲಿರುವ ರೈತ ಕುಟುಂಬಗಳ ಮರುವಸತಿಗೆ ನೆರವಾಗಬೇಕಿದ್ದ ಬಜೆಟ್, ಅದರ ಬದಲು ಈ ಮಹಿಳೆಯರನ್ನು ಶೋಷಿಸಲು ಕಿರು ಹಣಕಾಸು ಸಂಸ್ಥೆಗಳಿಗೆ ಉತ್ತೇಜನೆ ನೀಡಿದೆ ಎಂದು ಎಐಡಿಡಬ್ಲ್ಯುಎ ಖೇದ ವ್ಯಕ್ತ ಪಡಿಸಿದೆ.

ಮಹಿಳೆಯರ ಭದ್ರತೆ ತಮ್ಮ ಆದ್ಯತೆ ಎನ್ನುವ ಈ ಸರಕಾರದ ಬಜೆಟ್ ನಿರ್ಭಯಾ ನಿಧಿ ಮತ್ತು ರಾಷ್ಟ್ರೀಯ ಮಹಿಳಾ ಸಬಲೀಕರಣ ಮತ್ತು ರಕ್ಷಣಾ ಮಿಶನ್‌ಗೆ ಬಜೆಟ್ ಮೊತ್ತಗಳಲ್ಲಿ ಕಡಿತ ಮಾಡಿದೆ. ರಾಷ್ಟ್ರೀಯ ಹೆಣ್ಣುಮಕ್ಕಳ ಶಿಕ್ಷಣ ಯೋಜನೆಗೂ ಹಣಕಡಿತವಾಗಿದೆ.

ಸಾರ್ವತ್ರಿಕ ಚುನಾವಣಾ ನಂತರದ ಮೊದಲ ಬಜೆಟ್ ಹೊಸ ಸರಕಾರದ ನಿಸ್ವರೂಪವನ್ನು ತೋರಿಸಿದೆ–ಕಾರ್ಪೊರೇಟ್ ತೆರಿಗೆ ದರಗಳನ್ನು ಇಳಿಸಿ ಅವರಿಗೆ ಪೋಷಣೆ ನೀಡಲಾಗಿದೆ, ಆದರೆ ಗ್ರಾಮೀಣ ಮಹಿಳೆಯರಿಗೆ ಮಾತ್ರವಲ್ಲ, ನಗರಪ್ರದೇಶದ ಮಧ್ಯಮ ವರ್ಗದ ಮಹಿಳೆಯರಿಗೂ ಯಾವ ಪರಿಹಾರವನ್ನೂ ಒದಗಿಸಿಲ್ಲ, ಬದಲಾಗಿ ಪೆಟ್ರೋಲ್, ಡೀಸೆಲ್ ಮೇಲೆ ಸುಂಕಗಳನ್ನು ಹೆಚ್ಚಿಸಿ ಮತ್ತಷ್ಟು ಹೊರೆ ಹಾಕಲಾಗಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ. ಹೊಸ ಸರಕಾರದ ಈ ಸ್ವರೂಪವನ್ನು ಬಯಲಿಗೆಳೆಯಬೇಕು, ಅಂತಹ ನವ–ಉದರವಾದಿ ಧೋರಣೆಗಳಿಗೆ ಪ್ರತಿರೋಧವನ್ನು ಕಟ್ಟಿ ಬೆಳೆಸಬೇಕು ಎಂದು ಅದು ಪ್ರಜಾಪ್ರಭುತ್ವ ಮನೋಭಾವದ ಎಲ್ಲರಿಗೂ ಕರೆ ನೀಡಿದೆ.

ಪತ್ರಕರ್ತರ ಪ್ರವೇಶಕ್ಕೆ ಹಣಕಾಸು ಮಂತ್ರಾಲಯದ ನಿರ್ಬಂಧ–ಪತ್ರಕರ್ತರ, ಸಂಪಾದಕರ ಖಂಡನೆ

"ಸುಳ್ಳುಗಾರರು, ದಗಲ್‌ಬಾಜಿಗಳು ಬಹಳಷ್ಟು ಸಂಗತಿಗಳನ್ನು ಮರೆಮಾಚಬೇಕಾಗುತ್ತದೆ"–ಯೆಚುರಿ

ಮೋದಿ ಸರಕಾರದ ಹಣಕಾಸು ಇಲಾಖೆ ತನ್ನ ಕಚೇರಿಗಳಿಗೆ ಪತ್ರಕರ್ತರ ಪ್ರವೇಶದ ಮೇಲೆ ನಿರ್ಬಂಧಗಳನ್ನು ಹಾಕಲು ನಿರ್ಧರಿಸಿದೆ. ಅವರನ್ನು ಇಲಾಖೆಯ ಮುಖ್ಯ ಕಚೇರಿ ಇರುವ ನಾರ್ಥ್ ಬ್ಲಾಕಿನ ಒಂದು ನಿರ್ದಿಷ್ಟ ಜಾಗಕ್ಕೆ ಮಾತ್ರ ಸೀಮಿತಗೊಳಿಸಿದೆ. ಇದನ್ನು ಪ್ರೆಸ್ ಕ್ಲಬ್ ಆಫ್ ಇಂಡಿಯಾ, ಪ್ರೆಸ್ ಅಸೋಸಿಯೇಷನ್ ಮತ್ತು ಇಂಡಿಯನ್ ವಿಮೆನ್ ಪ್ರೆಸ್ ಕೋರ್ ಜಂಟಿ ಹೇಳಿಕೆಯೊಂದರಲ್ಲಿ ಖಂಡಿಸಿವೆ. ಇದು ಸ್ವೇಚ್ಛಾಚಾರದ ಕ್ರಮ ಮಾತ್ರವೇ ಅಲ್ಲ, ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಕ್ರಮ ಎಂದು ಅವು ವರ್ಣಿಸಿವೆ. ಸುದ್ದಿ ಮತ್ತು ಮಾಹಿತಿ ಕಲೆ ಹಾಕುವುದು ಪತ್ರಕರ್ತರ ಮೂಲಭೂತ ಕರ್ತವ್ಯ. ಅದನ್ನು ಮಾಡದಂತೆ ತಡೆಯುವುದು ಅವರ ವೃತ್ತಿಕರ್ತವ್ಯವನ್ನು ಮಾಡದಂತೆ ತಡೆಯುವ ಕ್ರಮವಾಗುತ್ತದೆ. ಆದ್ದರಿಂದ ಪತ್ರಕರ್ತರ ಮುಕ್ತ ಓಡಾಟಗಳ ಮೇಲೆ ಹಾಕಿರುವ ಈ ನಿರ್ಬಂಧವನ್ನು ಹಿಂತೆಗೆದುಕೊಳ್ಳಬೇಕು ಅವು ಆಗ್ರಹಿಸಿವೆ.

ಭಾರತದ ಸಂಪಾದಕರ ಗಿಲ್ಡ್ ಕೂಡ ಹಣಕಾಸು ಮಂತ್ರಾಲಯದ ಈ ಕ್ರಮವನ್ನು ಖಂಡಿಸಿದೆ. ಇದು ಮಾಧ್ಯಮ ಸ್ವಾತಂತ್ರ್ಯದ ಮೇಲಿನ ನಿರ್ಬಂಧ, ಇದರಿಂದಾಗಿ ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಶ್ರೇಯಾಂಕದಲ್ಲಿ ಭಾರತದ ಸ್ಥಾನ ಇನ್ನೂ ಕೆಳಕ್ಕೆ ಬೀಳುತ್ತದೆ ಎಂದು ಅದು ಎಚ್ಚರಿಸಿದೆ. ಪತ್ರಕರ್ತರು ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು ಎಂಬುದರ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಅದಕ್ಕೆ ಪ್ರವೇಶ ನಿರ್ಬಂಧ ಉತ್ತರವಲ್ಲ ಎಂದು ಅದು ಹೇಳಿದೆ.

"ಸುಳ್ಳು ಹೇಳುವವರು, ಮಾಹಿತಿಗಳಲ್ಲಿ ದಗಲ್‌ಬಾಜಿ ನಡೆಸುವವರು ಬಹಳಷ್ಟು ಸಂಗತಿಗಳನ್ನು ಮರೆಮಾಚಬೇಕಾಗುತ್ತದೆ. ಪಾರದರ್ಶಕತೆ ಸಾಮಾನ್ಯ ಸಂಗತಿಯಾಗಿರಬೇಕಾದ ಯುಗದಲ್ಲಿ ಈ ಸರಕಾರ ಪತ್ರಕರ್ತರಿಗೆ ಪ್ರವೇಶ ನಿರಾಕರಿಸ ಬಯಸುತ್ತದೆ. ಮಾಹಿತಿ ಹಕ್ಕನ್ನು ಧ್ವಂಸ ಮಾಡಲು ಈ ಸರಕಾರ ಪ್ರತಿ ಹೆಜ್ಜೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡುವುದರಲ್ಲಿ ಆಶ್ಚರ್ಯವೇನಿಲ್ಲ" ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಬಜೆಟಿನಲ್ಲಿನ ಅಂಕಿ–ಅಂಶಗಳ ಋಜುತ್ವದ ಬಗ್ಗೆ ಹಲವಾರು ಸಂದೇಹಗಳು ಹೊರಬಿದ್ದಿರುವ ಹಿನ್ನೆಲೆಯಲ್ಲಿ ಸರಕಾರದ ಈ ಕ್ರಮವನ್ನು ನೋಡಬೇಕಾಗಿದೆ ಎಂದು ಹೇಳಲಾಗುತ್ತಿದೆ.

ಸಂಪಾದಕೀಯ

ನುರಿತ ಡಾಕ್ಟರ್ ನೇತೃತ್ವದಲ್ಲಿ ಆರನೇ ಆಪರೇಷನ್ ?

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಅದನ್ನು ಅಸ್ಥಿರಗೊಳಿಸಿ, ಪದಚ್ಯುತ ಗೊಳಿಸಲು ನರೇಂದ್ರ ಮೋದಿ ಮತ್ತು ಶಾ ನೇತೃತ್ವದ ಬಿಜೆಪಿ ಪ್ರಯತ್ನ ಪಡುತ್ತಲೇ ಇದೆ. ಇದೀಗ ಕಾಂಗ್ರೆಸ್ ಜೆಡಿಎಸ್ ಸರ್ಕಾರವನ್ನು ಉರುಳಿಸಲು ಬಿಜೆಪಿ 6ನೇ ಸಲದ ಪ್ರಯೋಗಕ್ಕೆ ಮುಂದಾಗಿದೆ. ಈ ಹಿಂದಿನ ಪ್ರಯೋಗಗಳಲ್ಲಿ ಸ್ಥಳೀಯ ಮುಖಂಡರಾದ ಯಡಿಯೂರಪ್ಪ, ಆರ್. ಅಶೋಕ್, ಶ್ರೀರಾಮುಲು ಮೊದಲಾದವರು ಮುಂಚೂಣಿಯಲ್ಲಿದ್ದರು. ಆಪರೇಷನ್ ಗಳು ಯಶಸ್ವಿಯಾಗಿರಲಿಲ್ಲ. ಈ ಸಲ ಹಾಗಾಗಲು ಬಿಡಬಾರದೆಂದು ಹೈಕಮಾಡ್ ನಿರ್ದೇಶಿಸಿದೆ. ದೆಹಲಿಯ ನುರಿತ ಡಾಕ್ಟರುಗಳು ಆಪರೇಷನ್ ನೇತೃತ್ವ ವಹಿಸಿದ್ದಾರೆ. ರೋಗಿಯನ್ನು ಸಾಯಿಸಿ ಆಪರೇಷನ್ ಯಶಸ್ವಿಗೊಳಿಸಲು ಅವರು ನಿರ್ಧರಿಸಿದಂತೆ ಕಾಣುತ್ತದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಬಿಜೆಪಿ ಹೇಗೆ ಮತಗಳನ್ನು ಪಡೆಯುತ್ತದೆ, ಹೇಗೆ ಸ್ಥಾನಗಳನ್ನು ಗೆಲ್ಲುತ್ತದೆ, ಹೇಗೆ ಅಧಿಕಾರಕ್ಕೆ ಬರುತ್ತದೆ ಎಂಬುದು ಸಹ ಇಷ್ಟರಲ್ಲಿ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಬೇರೆ ಪಕ್ಷಗಳಲ್ಲಿರುವ ಅಧಿಕಾರ ದಾಹಿಗಳನ್ನು, ಅತೃಪ್ತರನ್ನು ಗುರುತಿಸಿ, ಅವರಿಗೆ ಆಸೆ ಆಮಿಷಗಳನ್ನುವೊಡ್ಡಿ ತಮ್ಮ ಬುಟ್ಟಿಗೆ ಹಾಕಿಕೊಳ್ಳುವುದರಲ್ಲಿ ಅವರದು ಎತ್ತಿದ ಕೈ. ಇದನ್ನು ಮನಗಂಡ ಕಾಂಗ್ರೆಸ್ ಮತ್ತು ಜೆಡಿಎಸ್ ಪರಸ್ಪರ ಕೈಜೋಡಿಸಿ ಮೈತ್ರಿ ಸರ್ಕಾರವೊಂದನ್ನು ತಂದು ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವಲ್ಲಿ ಯಶಸ್ವಿಯಾದರು. ಕರ್ನಾಟಕದ ಚರಿತ್ರೆಯಲ್ಲಿ ಇದೊಂದು ದಾಖಲಾರ್ಹವಾದ ವಿದ್ಯಮಾನ. ಇದರ ಕೀರ್ತಿ ಕಾಂಗ್ರೆಸ್ಸಿಗೆ ಮತ್ತು ಮುಖ್ಯವಾಗಿ ಅದರ ಅಖಿಲ ಭಾರತ ನಾಯಕತ್ವಕ್ಕೆ ಸಲ್ಲುತ್ತದೆ.

ಬಿಜೆಪಿ ಟಿಕೆಟ್ ಪಡೆದು ಗೆದ್ದ ಶಾಸಕರು ಬಹುತೇಕ ಆರೆಸ್ಸೆಸ್ಸಿನ ಹಿನ್ನೆಲೆಯುಳ್ಳವರಾಗಿದ್ದರು ಅಥವಾ ಹಿಂದುತ್ವ ಸಿದ್ಧಾಂತದ ಬಗ್ಗೆ ಒಲವು ಉಳ್ಳವರು. ರಾಜ್ಯ ವಿಧಾನ ಸಭೆಯಲ್ಲಿ ಬಿಜೆಪಿ ಬಹುದೊಡ್ಡ ಪಕ್ಷವಾಗಿದ್ದರೂ ಕಾಂಗ್ರೆಸ್-ಜೆಡಿಎಸ್ ಜನಾದೇಶಕ್ಕೆ ವಿರುದ್ಧವಾಗಿ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಮೈತ್ರಿ ಸರ್ಕಾರದ ವಿರುದ್ಧ ಕತ್ತಿ ಮಸಿಯುತ್ತಿದ್ದರು. ಕಾಂಗ್ರೆಸ್-ಜೆಡಿಎಸ್ ಶಾಸಕರಿಗಂತೂ ಯಾವ ಸಿದ್ಧಾಂತವೂ ಇರಲಿಲ್ಲ. ಮಂತ್ರಿ ಸ್ಥಾನ ದಕ್ಕಿಸಿಕೊಂಡವರು ದುಡ್ಡುಗಳಿಸುತ್ತಾ ನೆಮ್ಮದಿಯಿಂದಿದ್ದರು. ಮಂತ್ರಿ ಪದವಿ ಸಿಗದಿದ್ದವರು ಅತೃಪ್ತರಾದರು. ಬಿಜೆಪಿಯ ಅಪಾಯವನ್ನು ಮನಗಾಣದ ಇವರು ಬಿಜೆಪಿ ಹತ್ತಿರಕ್ಕೆ ಹೋದರು. ಬಿಜೆಪಿ ಬೀಸಿದ ಬಲೆಗೆ ಸಿಕ್ಕಿಹಾಕಿಕೊಂಡರು.

ಬಿಜೆಪಿ ಮಾತುಗಳಿಗೆ ಮರಳಾಗಿ ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿದ ಕಾಂಗ್ರೆಸ್-ಜೆಡಿಎಸ್ ಶಾಸಕರನ್ನು ಮತ್ತು ಇಬ್ಬರು ಸ್ವತಂತ್ರ ಶಾಸಕರನ್ನು ಬಿಜೆಪಿಯವರು ಒಂದು ವಿಶೇಷ ವಿಮಾನದಲ್ಲಿ ಮುಂಬೈಗೆ ಕೊಂಡೊಯ್ದು ರೆನಾಸೈನ್ಸ್ ಪಂಚತಾರ ಹೋಟೆಲಲ್ಲಿ ಸಕಲ ಭದ್ರತೆ ಹಾಗೂ ಸೌಕರ್ಯಗಳೊಂದಿಗೆ ಒಂದು ತೆರನಾದ ಗೃಹ ಬಂಧನದಲ್ಲಿಟ್ಟರು. ಹೊರಗಿನವರು ಯಾರೂ ಅವರನ್ನು ಸಂಪರ್ಕಿಸುವಂತಿರಲಿಲ್ಲ. ಮಹಾರಾಷ್ಟ್ರ ಬಿಜೆಪಿ ಅತೃಪ್ತರನ್ನು ತೃಪ್ತಿಪಡಿಸಲು ಎಲ್ಲ ವ್ಯವಸ್ಥೆ ಮಾಡಿದ್ದರು.

ರಾಜೀನಾಮೆ ನೀಡಿದ ಶಾಸಕರಲ್ಲಿ ಕೆಲವರ ರಾಜನಾಮೆ ಪತ್ರಗಳು ಕ್ರಮಬದ್ಧವಾಗಿರಲಿಲ್ಲ. ಅವುಗಳನ್ನು ಕ್ರಮಬದ್ಧಗೊಳಿಸಿ ಮರಳಿ ಸಲ್ಲಿಸುವಂತೆ ಸ್ಪೀಕರ್ ನಿರ್ದೇಶನ ನೀಡಿದರು. ಇಷ್ಟಕ್ಕೆ ಬಿಜೆಪಿ ಸಲಹೆ ಹಾಗೂ ಸಹಾಯ ಪಡೆದ ಅತೃಪ್ತರು ಸುಪ್ರೀಂಕೋರ್ಟ್ ಮೆಟ್ಟಲೇರಿ, ಸ್ಪೀಕರ್ ತಮ್ಮ ರಾಜೀನಾಮೆಗಳನ್ನು ಅಂಗೀಕರಿಸಲು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುತ್ತಿದ್ದಾರೆ ಎಂದು ದೂರು ಸಲ್ಲಿಸಿ ಕೂಡಲೇ ಅಂಗೀಕರಿಸುವಂತೆ ಸ್ಪೀಕರ್‌ಗೆ ನಿರ್ದೇಶನ ನೀಡಲು ಮನವಿ ಮಾಡಿದರು. ಜುಲೈ 11 ರ ಸಂಜೆ 6 ಗಂಟೆ ಒಳಗೆ ಸ್ಪೀಕರನ್ನು ಕಂಡು ತಮ್ಮ ರಾಜೀನಾಮೆಗಳನ್ನು ಕ್ರಮಬದ್ಧವಾಗಿ ಸಲ್ಲಿಸಲು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಬಿಜೆಪಿ ಒದಗಿಸಿದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿದ ಶಾಸಕರು ಸ್ಪೀಕರ್‌ರನ್ನು ಕಂಡು ರಾಜೀನಾಮೆ ಸಲ್ಲಿಸಿದರು ಮತ್ತು ಆ ಬಳಿಕ ವಿಮಾನದಲ್ಲಿ ವಾಪಾಸಾದರು.

ಮರಳಿ ಸಲ್ಲಿಸಲಾದ ರಾಜೀನಾಮೆ ಪತ್ರಗಳು ಕ್ರಮ ಬದ್ಧವಾಗಿವೆ ಎಂದ ಸ್ಪೀಕರ್ ಅವುಗಳನ್ನು ಕೂಡಲೇ ಪರಿಶೀಲಿಸಲು ಸಾಧ್ಯವಾಗದೆಂದು ಸುಪ್ರೀಂಕೋರ್ಟಿಗೆ ಮನವಿ ಸಲ್ಲಿಸಿದರು. ನ್ಯಾಯಾಲಯ ಅತೃಪ್ತ ಶಾಸಕರ ಮತ್ತು ಸ್ಪೀಕರ್ ಅವರ ಅರ್ಜಿಗಳನ್ನು ಪರಿಶೀಲಿಸಿ ಜುಲೈ 18 ರವರೆಗೆ ಯಥಾಸ್ಥಿತಿ ಕಾಪಾಡಲು ಸೂಚಿಸಿತು. ಈ ನಡುವೆ ಮೊದಲೇ ನಿಗದಿಯಾದಂತೆ ಜುಲೈ 12 ರಂದು ಬಜೆಟ್ ಅಧಿವೇಶನ ಆರಂಭವಾಯಿತು. ಅಧಿವೇಶನ ಹನ್ನೊಂದು ದಿನಗಳ ಕಾಲ ನಡೆಯಬೇಕಾಗಿದ್ದರೂ ತಾನು ಸದನದ ವಿಶ್ವಾಸ ಮತ ಕೋರಲು ಬಯಸುವುದಾಗಿ ಮುಖ್ಯಮಂತ್ರಿ ಕುಮಾರಸ್ವಾಮಿ ಪ್ರಕಟಿಸಿದರಲ್ಲದೆ ಸಮಯ ನೀಡುವಂತೆ ಸ್ಪೀಕರ್ ಅವರಲ್ಲಿ ಮನವಿ ಮಾಡಿದರು. ಮುಂದಿನ ಬೆಳವಣಿಗೆಗಳನ್ನು ಕಾದು ನೋಡಬೇಕಾಗಿದೆ.

ಈ ಎಲ್ಲಾ ಬೆಳವಣಿಗೆಗಳು ಪ್ರಜ್ಞಾವಂತ ನಾಗರಿಕರಲ್ಲಿ ತೀವ್ರ ಬೇಸರವನ್ನು ಉಂಟುಮಾಡಿವೆ. ಅಹಿತಕರ ಬೆಳವಣಿಗೆಗೆ ಯಾರು ಕಾರಣ? ತೆರೆ ಮರೆಯಲ್ಲಿ ಎಲ್ಲವನ್ನೂ ಮಾಡುತ್ತಾ ಅಧಿಕಾರಕ್ಕಾಗಿ ಪರಿತಪಿಸುತ್ತಿರುವ ಬಿಜೆಪಿ ತನ್ನ ಪಾತ್ರ ಏನು ಇಲ್ಲ ಎನ್ನುತ್ತಿದೆ. ಅತೃಪ್ತ ಶಾಸಕರು ಬಿಜೆಪಿಯವರಲ್ಲ. ಅವರ ಪರವಾಗಿ ಸುಪ್ರೀಂಕೋರ್ಟ್ ಮೆಟ್ಟಿಲೇರಿರುವುದು,. ರಾಜ್ಯಪಾಲರಿಗೆ ದೂರು ಸಲ್ಲಿಸುವುದು, ಅತೃಪ್ತರನ್ನು ವಿಶೇಷ ವಿಮಾನದಲ್ಲಿ ಮುಂಬೈಗೆ ಕರೆದೊಯ್ದು ಪಂಚತಾರಾ ಹೋಟೆಲಲ್ಲಿಟ್ಟು ಆರೈಕೆ ಮಾಡುವುದು, ಶಾಸಕರನ್ನು ಬೇಟಿಯಾಗಲು ಬಂದಿದ್ದ ಸಚಿವ ಡಿ.ಕೆ.ಶಿವಕುಮಾರ್ ಅವರನ್ನು ಬಂಧಿಸಿ ವಾಪಸ್ ಕಳುಹಿಸುವುದು ಇದೆಲ್ಲವೂ ಬಿಜೆಪಿಯ ಸಮಾಜ ಸೇವೆಯೇ? ಅತೃಪ್ತರ ಬಗ್ಗೆ ಅಷ್ಟೊಂದು ಕಾಳಜಿ ಯಾಕೆ? ಕಾಂಗ್ರೆಸ್-ಜೆಡಿಎಸ್ ಅತೃಪ್ತ ಶಾಸಕರ ರಾಜೀನಾಮೆ ಕೊಡಿಸಿ ಸರ್ಕಾರದ ಪತನಕ್ಕೆ ಸೂತ್ರ ಹೆಣೆದಿರುವ ಬಿಜೆಪಿಯ ನಾಯಕರು ಇದ್ಯಾವುದೂ ತಮಗೆ ಸಂಬಂಧವಿಲ್ಲ ಎನ್ನುತ್ತಾರೆ. ಅತೃಪ್ತರು ಕೊಟ್ಟಿರುವ ರಾಜೀನಾಮೆಗಳು ಸ್ವಿಚ್ಛೆಯಿಂದ, ನೀಡಿದ ಯತಾರ್ಥ ರಾಜನಾಮೆಗಳಲ್ಲ, ಈ ಸಲದ ಆಪರೇಷನ್ ಕಮಲಕ್ಕೆ ಸೋಲಾಗದಂತೆ ನೋಡಿಕೊಳ್ಳಲು ಪ್ರಧಾನಿ ಮೋದಿ, ಪಕ್ಷದ ಅಧ್ಯಕ್ಷ ಅಮಿತ್ ಶಾ ನಿದ್ದೆ ಬಿಟ್ಟು ಶ್ರಮಿಸುತ್ತಿದ್ದಾರೆ. ಇವರ ದುರಾಡಳಿತದಿಂದಾಗಿ ದೇಶದ ಪ್ರಜಾಪ್ರಭುತ್ವ ಕ್ಷೀಣಿಸುತ್ತಾ ಸಾಗುತ್ತಿರುವುದು ಆತಂಕದ ವಿಷಯವಾಗಿದೆ.

ಜನವಿರೋಧಿ ಬಜೆಟ್ ದೇಶಕ್ಕೆ ಮಾರಕ- ವಸಂತ ಆಚಾರಿ



ಎರಡನೆಯ ಬಾರಿಗೆ ದೇಶದ ಅಧಿಕಾರದ ಗದ್ದುಗೆಯನ್ನೇರಿದ ನರೇಂದ್ರ ಮೋದಿ ನೇತ್ರತ್ವದ ಕೇಂದ್ರ ಸರಕಾರವು ಇಡೀ ದೇಶದಲ್ಲಿ ಭಾರೀ ಭ್ರಮೆಯನ್ನು ಸೃಷ್ಟಿಸಿ ದೇಶದ ಅಭಿವೃದ್ದಿಯೇ ತನ್ನ ಮೊದಲ ಆದ್ಯತೆ ಎಂದು ಬೊಗಳೆ ಬಿಟ್ಟು ಮಂಡಿಸಿದ ಬಜೆಟ್, ಎಲ್ಲಾ ಹಂತಗಳಲ್ಲೂ ವಿಫಲತೆಯನ್ನು ಕಾಣುವ ಜನವಿರೋಧಿ ಬಜೆಟ್ ಎಂದು ಸಾಬೀತಾಗಿದೆ. ದುಡಿಯುವ ಕೈಗಳಿಗೆ ಉದ್ಯೋಗ ನೀಡಬೇಕಾದ ಕೇಂದ್ರ ಸರಕಾರವು ಉದ್ಯೋಗ ಸೃಷ್ಟಿಗೆ ಯಾವುದೇ ಯೋಜನೆಗಳಿಲ್ಲದೆ ನಿರುದ್ಯೋಗ ಸಮಸ್ಯೆ ಇನ್ನಷ್ಟು ಭೀಕರತೆಯನ್ನು ಕಾಣುವಂತಾಗಿದೆ. ಇದರಿಂದಾಗಿ ಇಡೀ ದೇಶದ ಅರ್ಥ ವ್ಯವಸ್ಥೆಯೇ ನಾಶವಾಗಲಿದ್ದು ದೇಶಕ್ಕೆ ಮಾರಕವಾಗಿ ಪರಿಣಮಿಸಲಿದೆ' ಎಂದು ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಅಭಿಪ್ರಾಯ ಪಟ್ಟರು.

ಅವರು ಜಪ್ಪಿನಮೊಗರು ಗ್ರಾಮ ಯುವಕ ಮಂಡಲದಲ್ಲಿ ಜರುಗಿದ 54ನೇ ಜಪ್ಪಿನಮೊಗರು ವಾರ್ಡ್ ಮಟ್ಟದ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ಹಾಗೂ ಹಿತೈಷಿಗಳ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ, ಈ ಮಾತುಗಳನ್ನು ಹೇಳಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, 'ಸ್ವತಂತ್ರ ಭಾರತದ ಇತಿಹಾಸದಲ್ಲೇ ಈ ಲೋಕಸಭಾ ಚುನಾವಣೆಗೆ ಖರ್ಚಾದಷ್ಟು ಹಣ ಯಾವತ್ತೂ ಆಗಿರಲಿಲ್ಲ. ಇಡೀ ಚುನಾವಣೆಗೆ 60,000 ಕೋಟಿ ರೂ.ಖರ್ಚಾಗಿದ್ದರೆ, ಅದರಲ್ಲಿ 29,000 ಕೋಟಿ ರೂ. ಕೇವಲ ಬಿಜೆಪಿ ಪಕ್ಷವೊಂದೇ ಖರ್ಚು ಮಾಡಿದೆ. ಇಷ್ಟೊಂದು ಅಗಾಧವಾದ ಹಣವನ್ನು ದೇಶದ ಗುತ್ತೇದಾರಿ ಬಂಡವಾಳಶಾಹಿಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡಲು ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ನೀಡಿರುವುದು ಜಗಜ್ಜಾಹೀರವಾಗಿದೆ. ವಾಸ್ತವತೆ ಹೀಗಿರುವಾಗ ತಮ್ಮ ಎದುರಾಳಿಗಳನ್ನು ಚುನಾವಣೆಯಲ್ಲಿ ಗೆಲ್ಲದಂತೆ ವ್ಯವಸ್ಥಿತ ಪಿತೂರಿ ಹೆಣೆಯಲಾಗಿದೆ. ಯಾವುದೇ ಕಾರಣಕ್ಕೂ ಕಮ್ಯುನಿಸ್ಟ್ ಪಕ್ಷಗಳು ಸಂಸತ್ತಿನಲ್ಲಿ ಇರಕೂಡದೆಂದು ಜಾಗತಿಕ ಬಂಡವಾಳ ಶಾಹಿಗಳೂ ಕೂಡ ಜೊತೆಗೂಡಿರುವುದು ಸಾಬೀತಾಗಿದೆ. ಇಂತಹ ಭ್ರಷ್ಟಾಚಾರದ ಕೂಪವಾಗಿರುವ ಚುನಾವಣೆಯಲ್ಲಿ ತಾತ್ಕಾಲಿಕ ಹಿನ್ನಡೆ ಕಂಡಿರುವ ಕಮ್ಯುನಿಸ್ಟ್ ಪಕ್ಷಗಳು ಸಂಸತ್ತಿನ ಹೊರಗಡೆ ಪ್ರಬಲವಾದ ಜನಚಳುವಳಿಯನ್ನು ಕಟ್ಟುವ ಮೂಲಕ ದೇಶವನ್ನಾಳುವ ಫ್ಯಾಸಿಸ್ಟರಿಗೆ ತಕ್ಕ ಪಾಠವನ್ನು ಕಲಿಸಲಿದ್ದಾರೆ' ಎಂದು ಹೇಳಿದರು.

ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿಯವರು, 'ಸ್ವಾತಂತ್ರ್ಯ ಪೂರ್ವದಿಂದಲೇ ಜಪ್ಪಿನಮೊಗರು ಗ್ರಾಮದಲ್ಲಿ ಬೆಳೆದು ಬಂದ ರೈತ ಕಾರ್ಮಿಕರ ಹೋರಾಟದ ಪರಂಪರೆಯನ್ನು ವಿವರಿಸುತ್ತಾ, ಜಪ್ಪಿನಮೊಗರು ಗ್ರಾಮ ಪಂಚಾಯತಿನಲ್ಲಿ ಅಧಿಕಾರ ನಡೆಸಿದ ಕಮ್ಯುನಿಷ್ಟರು, ಬಳಿಕ ನಗರಪಾಲಿಕೆ ಚುನಾವಣೆಯಲ್ಲಿಯೂ 2 ಬಾರಿ ಗೆಲ್ಲುವ ಮೂಲಕ ಜಪ್ಪಿನಮೊಗರು ವಾರ್ಡ್ ನಲ್ಲಿ ಸರ್ವ ವಿಭಾಗದ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಲು ಸಾಧ್ಯವಾಗಿದೆ.ಮುಂದಿನ ದಿನಗಳಲ್ಲಿ ಇನ್ನಷ್ಟು ಕೆಲಸಕಾರ್ಯಗಳನ್ನು ಮಾಡುವ ಮೂಲಕ ಮತ್ತೊಮ್ಮೆ ದುಡಿಯುವ ವರ್ಗದ ಕಣ್ಮಣಿಯಾಗಿ ಜಪ್ಪಿನಮೊಗರು ವಾರ್ಡ್ ಪ್ರಜ್ವಲಿಸಬೇಕೆಂದು' ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಯುವ ನಾಯಕರಾದ ಉದಯಚಂದ್ರ ರೈ, ವಹಿಸಿದ್ದರು. ಸಿಪಿಐ(ಎಂ) ಜಿಲ್ಲಾ ನಾಯಕರಾದ ಜಯಂತಿ ಬಿ.ಶೆಟ್ಟಿ, ದಿನೇಶ್ ಶೆಟ್ಟಿ, ಸಿಪಿಐ(ಎಂ) ಸ್ಥಳೀಯ ನಾಯಕರಾದ ಮನೋಜ್ ಶೆಟ್ಟಿ, ಚಂದ್ರಹಾಸ ಜೆ, ಜಯಲಕ್ಷ್ಮೀ ಮುಂತಾದವರು ಉಪಸ್ಥಿತರಿದ್ದರು.

-ಮನೋಜ್ ಶೆಟ್ಟಿ

ರೆಸಾರ್ಟ್ ರಾಜಕಾರಣಕ್ಕೆ ಜನವಾದಿ ಖಂಡನೆ

ಪ್ರಜಾಪ್ರಭುತ್ವದ ಅಣಕ ನಡೆಯುತ್ತಿದೆ. ರಾಜ್ಯದಲ್ಲಿ ಆಡಳಿತ ಪಕ್ಷದ ಶಾಸಕರು ರಾಜೀನಾಮೆ ನಾಟಕದಲ್ಲಿ ನಿರತರಾಗಿದ್ದಾರೆ. ಪ್ರಮುಖ ವಿರೋಧ ಪಕ್ಷ, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷ ನಾಚಿಕೆಗೆಟ್ಟ ತೆರೆಯ ಮರೆಯ ಸೂತ್ರದಾರನ ಕೆಲಸ ಮಾಡುತ್ತಿದೆ. ಜನ ಭೀಕರ ಬರಗಾಲದಿಂದ ತತ್ತರಿಸಿದ್ದಾರೆ. ಮಹಿಳೆಯರು ಮಕ್ಕಳ ಮೇಲೆ ಅತ್ಯಾಚಾರ,ದೌರ್ಜನ್ಯ ಗಳು ಅವ್ಯಾಹತವಾಗಿ ನಡೆಯುತ್ತಿವೆ.

ಬೆಲೆ ಏರಿಕೆ, ನಿರುದ್ಯೋಗ, ಅನಾರೋಗ್ಯದಿಂದ ಜನ ಪರದಾಡುತ್ತಿರುವಾಗ ಜನರ ಸಂಕಷ್ಟಕ್ಕೆ ನೆರವಾಗಲು ತಾಯಿಯಂತೆ ಧಾವಿಸಬೇಕಿದ್ದ ಶಾಸಕರು ತಮ್ಮದೇ ಸರ್ಕಾರವನ್ನು ಅಭದ್ರಗೊಳಿಸಲು ಮುಂದಾಗಿರುವುದು ಖಂಡನೀಯ. ಭೀಕರ ಬರಗಾಲ, ಕುಡಿಯುವ ನೀರಿಗೂ ತತ್ವಾರ, ಜಾನುವಾರುಗಳು ಸಾಯುತ್ತಿವೆ. ಕೈ ಕೊಟ್ಟ ಮುಂಗಾರಿನಿಂದಾಗಿ ರೈತರು ಕಂಗಾಲಾಗಿದ್ದಾರೆ.

ಆದರೆ ಇದ್ಯಾವುದೂ ತಮಗೆ ಸಂಬಂಧವೇ ಇಲ್ಲವೆಂಬಂತೆ ಸಚಿವ ಸ್ಥಾನಕ್ಕಾಗಿ ಹಂಬಲಿಸಿ ತಮ್ಮದೇ ಸರಕಾರವನ್ನು ಬೀಳಿಸ ಹೊರಟ ಶಾಸಕರನ್ನು ಮತದಾರರು ತರಾಟೆಗೆ ತೆಗೆದುಕೊಳ್ಳುವ ಹೊತ್ತು ಇದು.

ಪ್ರಜಾಪ್ರಭುತ್ವ ದಲ್ಲಿ ಪ್ರಜೆಯೇ ಪ್ರಭು. ಆದರೆ ಚುನಾವಣೆಯ ಸಂದರ್ಭದಲ್ಲಿ ಕೈ ಮುಗಿದು ಕಾಲು ಹಿಡಿದು ಮತಯಾಚಿಸುವ ಇವರು ಗೆದ್ದು ಬಂದ ಕೂಡಲೇ ಗದ್ದುಗೆಯ ಆಸೆಗೆ ಎಲ್ಲವನ್ನೂ ಬಿಟ್ಟು ನಿಲ್ಲುವ ಸ್ಥಿತಿಯಂತಹ ಅಸಹ್ಯ ಇನ್ನೊಂದಿರಲು ಸಾಧ್ಯವೇ??

ಇದು ಕ್ಷೇತ್ರದ ಜನರಿಗೆ ಮತದಾರರಿಗೆ ಮಾಡುತ್ತಿರುವ ಅನ್ಯಾಯ ಮತ್ತು ಅವಮಾನ. ಶಾಸಕರ ಈ ನಡೆಯನ್ನು ಖಂಡಿಸುತ್ತಲೇ ಪ್ರಜಾಪ್ರಭುತ್ವದ ನೆಲೆಯಲ್ಲಿ ಚುನಾವಣೆಯಲ್ಲಿ ಗೆದ್ದು ಕೇಂದ್ರದಲ್ಲಿ ಸರ್ಕಾರ ನಡೆಸುತ್ತಿರುವ ಬಿ.ಜೆ.ಪಿ.ರಾಜ್ಯದಲ್ಲಿ ಮಾಡುತ್ತಿರುವುದು ಹೇಯ ರಾಜಕೀಯ.

ಜನರ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಸದನದಲ್ಲಿ ಪ್ರಸ್ತಾಪಿಸಿ ಚರ್ಚಿಸಿ ಪರಿಹಾರಕ್ಕೆ ಸರ್ಕಾರ ಮುಂದಾಗುವಂತೆ ಒಂದು ಪ್ರಬುದ್ಧ ವಿರೋಧ ಪಕ್ಷವಾಗಿ ತಮ್ಮ ಜವಾಬ್ದಾರಿ ಮರೆಯುವ ಬದಲು ರಾಜ್ಯದಲ್ಲಿ ವಿಧಾನ ಸಭಾ ಚುನಾವಣೆ ಫಲಿತಾಂಶ ಬಂದ ದಿನದಿಂದಲೇ ಅತ್ಯಂತ ಕೀಳು ಮಟ್ಟದ ರಾಜಕಾರಣ ಮಾಡುತ್ತಿರುವ ಬಿ.ಜೆ.ಪಿ.ಯ ನಡೆ ಪ್ರಜಾಪ್ರಭುತ್ವ ವಿರೋಧೀ ನಡೆಯಾಗಿದೆ.

ಇಂತಹ ಸಂದರ್ಭದಲ್ಲಿ ಪ್ರಜೆ ಯೇ ಪ್ರಭುವಾಗಬೇಕು. ಎದ್ದು ನಿಂತು ಗುದ್ದಬೇಕು. ಸಮಾನ ಮನಸ್ಕ ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲ ಬೀದಿಗಿಳಿಯಬೇಕು. ಪ್ರಜೆಗಳ ಅಧಿಕಾರವನ್ನು ಉಳಿಸಿಕೊಳ್ಳಬೇಕು.

ಸಾಮೂಹಿಕ ಅತ್ಯಾಚಾರದ ವಿರುದ್ಧ ಪ್ರತಿಭಟನೆಗಳು

ವರದಿ: **ವಾ.ಉ.**

ಪುತ್ತೂರಿನ ಕಾಲೇಜೊಂದರಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯೊಬ್ಬಳನ್ನು ಅದೇ ಕಾಲೇಜಿನ 5 ಜನ ವಿದ್ಯಾರ್ಥಿಗಳು 3 ತಿಂಗಳ ಹಿಂದೆ ಅಜ್ಞಾತ ಸ್ಥಳದಲ್ಲಿ ಅತ್ಯಾಚಾರವೆಸಗಿದ ವಿಷಯವನ್ನು ಅದೇ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳಲ್ಲಿ ಈಗ 2 ವಾರದ ಹಿಂದೆಯಷ್ಟೇ ಹರಿಯಬಿಟ್ಟುದರಿಂದ, ಈ ಕುಕೃತ್ಯ ಬಯಲಾಗಿದೆ. ಜಿಲ್ಲೆಯ ಪೊಲೀಸು ಅಧಿಕಾರಿಗಳು ಸಿಬ್ಬಂದಿ ಕ್ಷಿಪ್ರ ಕ್ರಮಕೈಗೊಂಡು ಆರೋಪಿಗಳನ್ನು ಬಂಧಿಸಿದ್ದಾರೆ. ಅತ್ಯಾಚಾರಿ ವಿದ್ಯಾರ್ಥಿಗಳು ಎಬಿವಿಪಿ ಸಂಘಟನೆಗೆ ಸೇರಿದವರಾಗಿದ್ದರೂ, ಸಂಘಪರಿವಾರ ಮತ್ತು ಎಬಿವಿಪಿ ಅದನ್ನು ನಿರಾಕರಿಸಿದೆ. ಆ ವಿದ್ಯಾರ್ಥಿಗಳು ಲೋಕಸಭಾ ಚುನಾವಣೆ ವೇಳೆ ಸ್ಥಳೀಯ ಶಾಸಕರು ಹಾಗೂ ಬಿಜೆಪಿ ಕಾರ್ಯಕರ್ತರೊಂದಿಗೆ ಓಡಾಡಿದ್ದರೂ, ಸಂಘಪರಿವಾರ ಮತ್ತು ಎಬಿವಿಪಿ ಸಂಘಟನೆಗಳು ಈ ಬಗ್ಗೆ ಪ್ರತಿಭಟನೆ ನಡೆಸುವ ಕಪಟ ನಾಟಕವಾಡುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸೆಕ್ಯುಲರ್ ಪಕ್ಷಗಳು, ಪ್ರಗತಿಪರ ಸಂಘಟನೆಗಳು ಅತ್ಯಾಚಾರ ಮಾಡಿದ ವಿದ್ಯಾರ್ಥಿಗಳ ಕುಕೃತ್ಯದ ಬಗ್ಗೆ ಪ್ರತಿಭಟನೆ ಏರ್ಪಡಿಸಿದ್ದಲ್ಲದೆ, ಅವರನ್ನು ಪೊಲೀಸ್ ಇಲಾಖೆ



ಕಾನೂನು ಕ್ರಮಕ್ಕೆ ಒಳಪಡುವಂತೆ ಆಗ್ರಹಿಸಿದೆ. ಎರಡು ನಾಲಗೆಯಲ್ಲಿ ಮಾತನಾಡುವ ಎಬಿವಿಪಿ ಹಾಗೂ ಸಂಘಪರಿವಾರದ ನಾಯಕರ ಮಾತುಗಳನ್ನು ಖಂಡಿಸಿವೆ.

ಸಿಪಿಐ(ಎಂ), ಸಿಪಿಐ ಮತ್ತು ಜನತಾದಳ(ಎಸ್)ಗಳ ನೇತೃತ್ವದಲ್ಲಿ ಜುಲಾಯಿ 8ರಂದು ದ.ಕ. ಜಿಲ್ಲಾಧಿಕಾರಿಗಳ ಕಚೇರಿ ಎದುರಿನಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ವಿ.ಕುಕ್ಯಾನ್, ಜನತಾದಳ (ಎಸ್) ಜಿಲ್ಲಾ ಮುಖಂಡ ಎಂ.ಬಿ.ಸದಾಶಿವ ಮಾತನಾಡಿದರು. ಪ್ರತಿಭಟನಾ ಪ್ರದರ್ಶನದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಯಾದವ ಶೆಟ್ಟಿ, ವಾಸುದೇವ ಉಚ್ಚಿಲ, ಮುನೀರ್ ಕಾಟಿಪಳ್ಳ, ಸಿಪಿಐ ಜಿಲ್ಲಾ ಮುಖಂಡರಾದ ಎಚ್.ವಿ.ರಾವ್, ಕರುಣಾಕರ, ಸುರೇಶ್, ಶೇಖರ್, ಶಿವಪ್ಪ ಕೋಟ್ಯಾನ್ ಭಾಗವಹಿಸಿದ್ದರು.

ಡಿವೈಎಫ್ಐ ಹಾಗೂ ಸಮಾನ ಮನಸ್ಕ ಸಂಘಟನೆಗಳು ಒಟ್ಟು ಸೇರಿ ಜುಲಾಯಿ 5 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದವು. ಮಾದಕ ದ್ರವ್ಯ ಮಾರಾಟ ಜಾಲ ವಿದ್ಯಾರ್ಥಿ ಯುವಜನರ ಮಧ್ಯೆ ಜಿಲ್ಲಾದ್ಯಂತ ಇದ್ದು, ಅದನ್ನು ಕೂಡಾ ನಿಗ್ರಹಿಸಬೇಕೆಂದು ಆಗ್ರಹಿಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ರಾಷ್ಟ್ರೀಯ ವಿಚಾರವಾದಿ ಒಕ್ಕೂಟದ ಅಧ್ಯಕ್ಷ ಪ್ರೊ. ನರೇಂದ್ರ ನಾಯಕ್, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ.ದೇವದಾಸ್ ಮಾತನಾಡಿದರು. ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ದಸಂಸ ಜಿಲ್ಲಾ ಸಂಚಾಲಕ ರಘು ಎಕ್ಕಾರು, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಡಾ.ಕೃಷ್ಣಪ್ಪ ಕೊಂಚಾಡಿ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಶೆಟ್ಟಿ, ಎಸ್ಎಫ್ಐ ಕಾರ್ಯದರ್ಶಿ ಮಾಧುರಿ ಬೋಳಾರ್, ಯುವತಿಯರ ಉಪಸಮಿತಿಯ ಆಶಾ ಬೋಳೂರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಳ್ಳಾಲ ವಲಯ ಡಿವೈಎಫ್ಐ ಸಂಘಟನೆಯ ವತಿಯಿಂದ ಘಟನೆ ಪತ್ರಿಕೆಯಲ್ಲಿ ವರದಿಯಾದ ದಿನವೇ ದೇರಳಕಟ್ಟೆ ಜಂಕ್ಷನ್‌ನಲ್ಲಿ ಪ್ರತಿಭಟನಾ ಸಭೆಯನ್ನು ಜುಲಾಯಿ 4 ರಂದು ನಡೆಸಲಾಯಿತು. ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಉಳ್ಳಾಲ ವಲಯ ಕಾರ್ಯದರ್ಶಿ ರಜಾಕ್ ಮೊಂಟೆಪದವು, ಅಶ್ರಫ್ ಕೆ.ಸಿ. ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಜಯಂತ ನಾಯಕ್, ರಫೀಕ್ ಹರೇಕಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ■

ಮಾತೆಯ ಮೇಲೆ ಅತ್ಯಾಚಾರ– ನರೇಂದ್ರ ನಾಯಕ್

ಗೋ ಮಾತೆಯ, ಭಾರತ ಮಾತೆಯ ರಕ್ಷಣೆ ಮಾಡುವವರು ಮಾತೆಯ ಮೇಲೆ ಅತ್ಯಾಚಾರ ಮಾಡಿದ್ದಾರೆ. ದ್ವಿಮುಖ ನೀತಿಯನ್ನು ಹೊಂದಿದ್ದಾರೆ. ತಮ್ಮದೆ ಸಂಘಪರಿವಾರದ ಸಂಘಟನೆಯವರು ಅತ್ಯಾಚಾರ ಮಾಡಿದಾಗ ಈ ಪ್ರಕರಣದ ಬಗ್ಗೆ ಚಕಾರ ಎತ್ತುತ್ತಿಲ್ಲ ಎಂದು ವಿಚಾರವಾದಿ ನರೇಂದ್ರ ನಾಯಕ್ ಹೇಳಿದರು.

ಪುತ್ತೂರಿನಲ್ಲಿ ದಲಿತ ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಖಂಡಿಸಿ, ಜಿಲ್ಲೆಯಲ್ಲಿ ಮಾದಕ ದ್ರವ್ಯಗಳ ಹಾವಳಿ ತಡೆಗಟ್ಟಲು ಆಗ್ರಹಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೆ ಒತ್ತಾಯಿಸಿ, ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಸಮಾನ ಮನಸ್ಕ ಸಂಘಟನೆಗಳಿಂದ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಗೋಮಾತೆಯ ರಕ್ಷಣೆಗೆ ಹೊರಡುವವರು ಮನುಷ್ಯ ಮಾತೆಯ ರಕ್ಷಣೆಗೆ ಬರುವುದಿಲ್ಲ. ಅತ್ಯಾಚಾರ ಮಾಡಿದವರು ನಮ್ಮ ಸದಸ್ಯರಲ್ಲ ಎಂದು ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡುತ್ತಾರೆ. ಕಿಸೆಯಲ್ಲಿ ಬೆಂಕಿಪೊಟ್ಟಣ್ಣಿ ಇಟ್ಟುಕೊಳ್ಳುವ ಸಂಸದರು ಇಲ್ಲ. ಏಕೀ ಮಿನಿಟ್ ಅನ್ನುವವರು ಪಾರ್ಲಿಮೆಂಟಿನಲ್ಲಿ ಏಕೀ ಸೆಕೆಂಡ್ ಎಂದು ಈ ವಿಷಯ ಮಾತಾನಾಡುತ್ತಾರೊ ನೋಡಬೇಕು ಎಂದರು.

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ. ದೇವದಾಸ್ ಮಾತನಾಡಿ, ಇದು ಮಾನವ ಸಮಾಜ ತಲೆತಗ್ಗಿಸುವ ಘಟನೆ. ಹಿಂದೂ ಬಂಧು ಒಂದು ಎನ್ನುವವರು ಅವರ ಕಾರ್ಯಕರ್ತೆಯ ಮೇಲೆ ಅತ್ಯಾಚಾರ ಮಾಡುತ್ತಾರೆ. ಗಂಟಲು ಹರಿಯುವಂತೆ ಮಾತನಾಡುವ ಶೋಭಾರವರು ಈಗ ಯಾಕೆ ಮಾತನಾಡುತ್ತಿಲ್ಲ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ದೇವದಾಸ್ ಹೇಳಿದರು.

ಪ್ರತಿಭಟನೆಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಆದಿವಾಸಿ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಡಾ. ಕೃಷ್ಣಪ್ಪ ಕೊಂಚಾಡಿ, ದಲಿತ ಸಂಘರ್ಷ ಹೋರಾಟ ಸಮಿತಿಯ ಜಿಲ್ಲಾ ಸಂಚಾಲಕ ರಘು ಎಕ್ಕಾರು, ಎಸ್. ಎಫ್. ಐ. ನ ಜಿಲ್ಲಾ ಕಾರ್ಯದರ್ಶಿ ಮಾಧುರಿ ಬೋಳಾರ್, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಬಿ. ಶೆಟ್ಟಿ, ಯುವತಿಯರ ಉಪ ಸಮಿತಿಯ ಆಶಾ ಬೋಳೂರು ಮುಂತಾದವರು ಉಪಸ್ಥಿತರಿದ್ದರು. ■

ಬುಡಕಟ್ಟು ಸಮುದಾಯದ ಮೇಲೆ ನಿರಂತರ ಧಾಳಿ
– ಡಾ. ಕೃಷ್ಣಪ್ಪಕೊಂಚಾಡಿ

ನಮ್ಮದೇಶದ ಸಂವಿಧಾನವು ಬುಡಕಟ್ಟು ಸಮುದಾಯದ ಬದುಕು ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಸಂರಕ್ಷಿಸಿ ಪೋಷಿಸುವ ಭರವಸೆ ನೀಡಿದ್ದರೂ ವಾಸ್ತವಿಕವಾಗಿ ಪ್ರಭುತ್ವ ಪ್ರಾಯೋಜಿತ ವಿವಿಧ ಯೋಜನೆಗಳಿಂದ ಗಣಿಗಾರಿಕೆ, ಅರಣ್ಯ ಕಾನೂನು, ವಿವಿಧ ವನ್ಯಜೀವಿ ಯೋಜನೆಗಳಿಂದ ಭೂಮಾಲೀಕರು, ಲೇವಾದೇವಿಗಾರರು, ಅರಣ್ಯ ಗುತ್ತಿಗೆದಾರರಿಂದ ಬಹುಸ್ವರೂಪದಲ್ಲಿ ಬದುಕುವ ಹಕ್ಕಿನ ಮೇಲೆ ನಿರಂತರ ಧಾಳಿ ಮುಂದುವರಿಯುತ್ತಿದೆ ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಸಹ ಸಂಚಾಲಕರಾದ ಡಾ. ಕೃಷ್ಣಪ್ಪ ಕೊಂಚಾಡಿಯವರು ಹೇಳಿದರು.



ಅವರು ದಿನಾಂಕ 07 ಜುಲೈ 2019 ರಂದು ಇರುವೈಲುವಿನಲ್ಲಿ ಜರುಗಿದ ಆದಿವಾಸಿ ಮರಾಠಿ ನಾಯ್ಕ ಸಮುದಾಯದ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ಪಾರಂಪರಿಕ ಅರಣ್ಣ ಹಕ್ಕು ಕಾಯ್ದೆಗೆ ಸಂಬಂಧಿಸಿದ ಇತ್ತೀಚಿನ ತೀರ್ಪು ದೇಶದ ಆದಿವಾಸಿ ಬುಡಕಟ್ಟು ಸಮುದಾಯದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಈಗಾಗಲೇ ಭೂಮಿಯ ಹಕ್ಕಿನಿಂದ ವಂಚಿತರಾದ ಶೋಷಣೆಗೆ ಒಳಗಾದ ಆದಿವಾಸಿ ಬುಡಕಟ್ಟು ಸಮುದಾಯದ ಲಕ್ಷಾಂತರ ಕುಟುಂಬಗಳು ಅರಣ್ಯ ಸಂಬಂಧಿಸಿ ಬದುಕಿನಿಂದ ವಂಚಿತರಾಗಿ ಬೀದಿಗೆ ಬೀಳಲಿದ್ದು ಈಗಾಗಲೇ ಆರ್ಥಿಕ, ಶಿಕ್ಷಣ ಮತ್ತು ಆರೋಗ್ಯದ ಸಮಸ್ಯೆಯಿಂದ ನಲುಗಿರುವ ಸಮುದಾಯಗಳು ನಿರ್ಗತಿಕರಾಗುವ ಅಪಾಯವಿದೆ. ನಮ್ಮನ್ನಾಳುವ ಸರಕಾರಗಳು ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿಲ್ಲ ಎಂದು ಹೇಳಿದರು.

ಸಭೆಯನ್ನು ಉದ್ದೇಶಿಸಿ ಕಾರ್ಮಿಕ ಮುಂದಾಳು ಸದಾಶಿವದಾಸ್ ಮಾತನಾಡುತ್ತಾ, ಸಂಘಟಿತ ಹೋರಾಟದಿಂದ ಮಾತ್ರ ಬುಡಕಟ್ಟು ಸಮಯದಾಯದ ಸಮಸ್ಯೆಗಳು ಪರಿಹಾರ ಕಾಣಲು ಸಾಧ್ಯ ಎಂದು ಹೇಳಿದರು.

ಸ್ಥಳೀಯ ರೈತ ಸಂಘದ ಮುಂದಾಳು ವೇದಿಕೆಯಲ್ಲಿದ್ದರು. ಸಭೆಯ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರು ವಹಿಸಿದ್ದರು. ಪ್ರಾರಂಭದಲ್ಲಿ ಕಾರ್ಯದರ್ಶಿ ಶೀನ ನಾಯ್ಕ್ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

– ಜಯಕುಮಾರ

ಡಿವೈಎಫ್ಐ ನೇತೃತ್ವದಲ್ಲಿ ಅಲೆಮಾರಿ (ಶಿಳ್ಳೆಕ್ಯಾತ) ಸಮುದಾಯದ ಹಕ್ಕೊತ್ತಾಯ ಸಮಾವೇಶ

ಮಂಗಳೂರಿನಲ್ಲಿ ಮತ್ತು ಆಸುಪಾಸಿನಲ್ಲಿ ಎರಡು ದಶಕಗಳಿಗೂ ಮೀರಿ ಕೆಲವು ಅಲೆಮಾರಿ ಶಿಳ್ಳೆಕ್ಯಾತ ಸಮುದಾಯದವರು ವಾಸವಾಗಿದ್ದು, ಮಂಗಳೂರಿನ ಎರಡೂ ದಿಕ್ಕುಗಳಲ್ಲಿರುವ ನೇತ್ರಾವತಿ ಮತ್ತು ಫಲ್ಗುಣಿ ನದಿಗಳಲ್ಲಿ ಮೀನು ಹಿಡಿದು ಜೀವನ ಮಾಡುತ್ತಿದ್ದಾರೆ. ತಮ್ಮ ವೃತ್ತಿಗೆ ಅನುಕೂಲವಾಗುವಂತೆ ನದಿ ಸಮೀಪದಲ್ಲಿ ಲಭ್ಯ ಸರಕಾರೀ ಜಮೀನಿನಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸವಾಗಿರುವ ಈ ಕುಟುಂಬಗಳು ಮಂಗಳೂರಿನಲ್ಲಿಯೇ ವಾಸವಾಗಿದ್ದು, ಎಂದಾದರೊಮ್ಮೆ ತಮ್ಮ ಊರಿಗೆ ಹೋಗಿ ವಾಪಾಸಾಗುತ್ತಾರೆ. ಸ್ವಂತದ್ದಾದ ನಿವೇಶನವಾಗಲೀ, ಮನೆಯಾಗಲೀ, ರೇಶನ್ ವ್ಯವಸ್ಥೆಯಾಗಲೀ ಇವರಿಗಿಲ್ಲ. ಸರಿಯಾದ ದಾಖಲೆಗಳಿಲ್ಲದೆ ಮಕ್ಕಳ ಶಿಕ್ಷಣ ಹಾಗೂ ಆರೋಗ್ಯ ಚಿಕಿತ್ಸೆಗಾಗಿ ಪರದಾಡುವ ಪರಿಸ್ಥಿತಿ ಇದೆ. ಡಿವೈಎಫ್ಐ ಜಿಲ್ಲಾ ಮುಖಂಡರ ಗಮನಕ್ಕೆ ಇವರ ಪರಿಸ್ಥಿತಿ ಬಂದು ಅವರಿಗೆ ಸವಲತ್ತುಗಳನ್ನು ಸರಕಾರವನ್ನು ಆಗ್ರಹಿಸಲು ಪ್ರಯತ್ನ ನಡೆಯುತ್ತಿದೆ. ಇದರ ಭಾಗವಾಗಿ ಜುಲಾಯಿ 8 ರಂದು ಮಂಗಳೂರಿನಲ್ಲಿ ಕರಾವಳಿ ವೃತ್ತಿನಿರತ ಅಲೆಮಾರಿ ಸಮುದಾಯದ ಹಕ್ಕೊತ್ತಾಯ ಸಮಾವೇಶವನ್ನು ಡಿವೈಎಫ್ಐ ಮಾರ್ಗದರ್ಶನದಲ್ಲಿ ನಡೆಸಲಾಯಿತು.

ಈ ಸಮಾವೇಶವನ್ನು ಕರ್ನಾಟಕ ಅಲೆಮಾರಿ ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಯುವಜನ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಮಲ್ಲಿಕಾರ್ಜುನ ಮಾರ್ಪಡೆ ಉದ್ಘಾಟಿಸಿದರು. ಅಲೆಮಾರಿ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿ, ಅವರನ್ನು ಸಮಾಜ ಗುರುತಿಸುವಂತಾಗಲು ರಾಜ್ಯದಲ್ಲಿ ಅಲೆಮಾರಿ ಆಯೋಗ ರಚನೆಯಾಗಬೇಕೆಂದು ಅವರು ಆಗ್ರಹಿಸಿದರು.

ಸಮಾವೇಶವನ್ನುದ್ದೇಶಿಸಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕ ಡಾ. ಕೃಷ್ಣಪ್ಪ ಕೊಂಚಾಡಿ, ಡಿವೈಎಫ್ಐ ರಾಜ್ಯ ಸಮಿತಿಯ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್ ಮಾತನಾಡಿದರು., ಶಿಳ್ಳೆಕ್ಯಾತ ಸಮುದಾಯದ ರಾಜ್ಯ ಮುಖಂಡರು ಹಾಗೂ ಮಂಗಳೂರಿನಲ್ಲಿ ಏಳು ಕಡೆ ಟೆಂಟುಗಳಲ್ಲಿ ಜೀವನ ಸಾಗಿಸುತ್ತಿರುವ ಕುಟುಂಬಗಳ ಪ್ರಮುಖರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಸಮಾವೇಶದ ಕೊನೆಗೆ ಈ ಕೆಳಕಂಡಂತೆ ಹಕ್ಕೊತ್ತಾಯ ನಿರ್ಣಯವನ್ನು ಅಂಗೀಕರಿಸಲಾಯಿತು.

* ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟೆಂಟ್ ಗಳಲ್ಲಿ ವಾಸಿಸುವ ಅಲೆಮಾರಿ ಸಮುದಾಯಗಳ ಸಮೀಕ್ಷೆ ನಡೆಸಬೇಕು.
* ಪ್ರತಿ ಕುಟುಂಬಕ್ಕೂ ಮನೆ, ನಿವೇಶನ ಒದಗಿಸಬೇಕು.
* ರೇಷನ್ ಕಾರ್ಡ್, ಆರೋಗ್ಯ ಕಾರ್ಡ್, ಮತದಾರರ ಗುರುತು ಚೀಟಿ, ಜಾತಿಪ್ರಮಾಣ ಪತ್ರ ಸಹಿತ ಎಲ್ಲಾ ದಾಖಲೆಗಳನ್ನು ಒದಗಿಸಬೇಕು.
* ರಾಜ್ಯದಲ್ಲಿ ಅಲೆಮಾರಿ ಆಯೋಗ, ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು.
* ದೌರ್ಜನ್ಯಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.
* ಅಲೆಮಾರಿ ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ■

ವಿದ್ಯುತ್ ದರ ಏರಿಕೆ: ಮೆಸ್ಕಾಂನ ಹಗಲು ದರೋಡೆ



'ರಾಜ್ಯ ಸರಕಾರವು ಯಾವುದೇ ಮುನ್ಸೂಚನೆ ನೀಡದೆ ವಿದ್ಯುತ್ ದರವನ್ನು ವಿಪರೀತವಾಗಿ ಏರಿಸಿರುವುದರಿಂದ ಜನಸಾಮಾನ್ಯರು ಭಾರೀ ಸಂಕಷ್ಟವನ್ನು ಎದುರಿಸುವಂತಾಗಿದೆ. ಕಳೆದ ಹಲವು ವರ್ಷಗಳ ಹಿಂದೆ ರಾಜ್ಯ ಸರಕಾರವು ವಿದ್ಯುತ್ ದರವನ್ನು ಏರಿಸುವಾಗ ಜನತೆಗೆ ಬಹಿರಂಗವಾಗಿ ತಿಳಿಸುತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ವರ್ಷಕ್ಕೆ 2 ಬಾರಿ ವಿದ್ಯುತ್ ದರವನ್ನು ವಿಪರೀತವಾಗಿ ಏರಿಸಿದ್ದಾರೆ. ಮಾತ್ರವಲ್ಲದೆ ಹೆಚ್ಚುವರಿ ಡಿಪಾಸಿಟ್ ಸಂಗ್ರಹ ಹಾಗೂ ತಪ್ಪು ಲೆಕ್ಕಾಚಾರಗಳ ಮೂಲಕ ಜನರನ್ನು ಹಗಲು ದರೋಡೆ ನಡೆಸುತ್ತಿರುವ ಮೆಸ್ಕಾಂ ಹಾಗೂ ರಾಜ್ಯ ಸರಕಾರದ ವಿರುದ್ದ ಪ್ರಬಲ ಹೋರಾಟ ನಡೆಸಬೇಕೆಂದು' ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಕರೆ ನೀಡಿದರು.

ಅವರು ಉರ್ವಾಸ್ಟೋರಿನಲ್ಲಿ ಜರುಗಿದ 25ನೇ ದೇರೆಬೈಲ್ ಪಶ್ಚಿಮ ವಾರ್ಡ್ ಮಟ್ಟದ ಸಿಪಿಐ(ಎಂ) ಕಾರ್ಯಕರ್ತರ ಹಾಗೂ ಹಿತೈಷಿಗಳ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮುಂದುವರಿಸುತ್ತಾ ಅವರು, 'ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಭಿವ್ರದ್ದಿ ಹೆಸರಿನಲ್ಲಿ ಹಾಗೂ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕೋಟಿಗಟ್ಟಲೆ ಹಣವನ್ನು ಗುಳುಂ ನಡೆಸಿದ್ದಾರೆಯೇ ಹೊರತು ಎಲ್ಲಿಯೂ ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ. ನಗರದ ಹೃದಯ ಭಾಗದಲ್ಲೇ ಒಳಚರಂಡಿ ವ್ಯವಸ್ಥೆಯು ಅವ್ಯವಸ್ಥೆಗಳ ಆಗರವಾಗಿದೆ. ಮಳೆಗಾಲ ಪ್ರಾರಂಭಗೊಂಡರೂ ನಗರದ ಹಲವೆಡೆ ಇನ್ನೂ ಕುಡಿಯಲು ನೀರಿಲ್ಲ.ಮಳೆನೀರು ಹರಿದಾಡಲು ರಸ್ತೆಯ ಪಕ್ಕದಲ್ಲಿ ಚರಂಡಿಗಳ ವ್ಯವಸ್ಥೆಗಳಿಲ್ಲದೆ ನೀರು ರಸ್ತೆಗಳಲ್ಲೇ ಹರಿದಾಡುತ್ತಿದೆ. ಒಟ್ಟಿನಲ್ಲಿ ಇಡೀ ನಗರದ ಅಭಿವೃದ್ಧಿಗೆ ತೊಡಕಾಗಿರುವುದು ನಗರಪಾಲಿಕೆ ಕಚೇರಿಯಲ್ಲಿ ನಡೆಯುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರವೇ ಮೂಲಕಾರಣವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡುತ್ತಾ, 'ಮೋದಿ ಮತ್ತೊಮ್ಮೆ' ಎಂಬ ಭ್ರಮೆಯನ್ನು ಸೃಷ್ಟಿಸಿ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರವನ್ನು ನಡೆಸಿ ಮತ್ತೊಮ್ಮೆ ಅಧಿಕಾರಕ್ಕೇರಿದ ನರೇಂದ್ರ ಮೋದಿ ನೇತ್ರತ್ವದ ಸರಕಾರವು ಮುಂದಿನ ದಿನಗಳಲ್ಲಿ ಜನರ ಪರವಾಗಿ ಕಾರ್ಯ ನಿರ್ವಹಿಸದೆ ಕೇವಲ ಕಾರ್ಪೊರೇಟ್ ಕಂಪೆನಿಗಳ ಹಿತಾಸಕ್ತಿಯನ್ನು ಕಾಪಾಡುತ್ತಾರೆಂಬುದಕ್ಕೆ ಇತ್ತೀಚಿಗೆ ಮಂಡಿಸಿದ ಬಜೆಟ್ ಜ್ವಲಂತ ಉದಾಹರಣೆಯಾಗಿದೆ' ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ನ ಯುವನಾಯಕರಾದ ಮನೋಜ್ ಉರ್ವಾಸ್ಟೋರ್ ರವರು ವಹಿಸಿದ್ದರು. ವೇದಿಕೆಯಲ್ಲಿ ಸಿಪಿಐ(ಎಂ) ಮುಖಂಡರಾದ ಪ್ರದೀಪ್, ಕಿಶೋರ್, ಪ್ರಶಾಂತ್ ಎಂ.ಬಿ, ಗಂಗಾಧರ್, ಇಕ್ಬಾಲ್ ಮುಂತಾದವರು ಉಪಸ್ಥಿತರಿದ್ದರು.

–ಪ್ರದೀಪ್



ಮೆಸ್ಕಾಂ ವಿದ್ಯುತ್ ದರ ಏರಿಕೆ ವಿರುದ್ಧ ಡಿವೈಎಫ್ಐ ಪ್ರತಿಭಟನೆ

ನಿರಂತರ ವಿದ್ಯುತ್ ದರ ಹೆಚ್ಚಳ ಹೆಚ್ಚುವರಿ ಡಿಪಾಸಿಟ್ ವಸೂಲಿ ವಿರುದ್ದ ಗ್ರಾಹಕರರಿಂದ ಡಿವೈಎಫ್ಐ ಕಾವೂರು ವಿಭಾಗ ಸಮಿತಿ ನೇತ್ರುತ್ವದಲ್ಲಿ ಕಾವೂರು ಮೆಸ್ಕಾಂ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಇಮ್ತಿಯಾಝ್ ಬಿ.ಕೆ ಸರಕಾರವು ಕೆ.ಇ.ಬಿ ಯನ್ನು ಕೆಪಿಟಿಸಿಎಲ್, ಮೆಸ್ಕಾಂ ಮುಂತಾಗಿ ವಿಂಗಡನೆ ಮಾಡಿ ಇದು ಭ್ರಷ್ಟಾಚಾರ ಖಾಸಗೀಕರಣ, ನಿರಂತರ ಬೆಲೆ ಏರಿಕೆಗೆ ಕಾರಣವಾಗಿದೆ. ಮೆಸ್ಕಾಂ ಲಾಭದಲ್ಲಿದ್ದರೂ ನಿರಂತರ ಗ್ರಾಹರನ್ನು ಸುಲಿಯುತ್ತಿದೆ ಸದ್ಯಕ್ಕೆ ಹೆಚ್ಚಳ ಮಾಡಿರುವ ಬೆಲೆಯನ್ನು ಕೂಡಲೇ ಇಳಿಸಬೇಕೆಂದು ಒತ್ತಾಯಿಸಿದರು. ಪಂಜಿಮೊಗರು ಕಾರ್ಪೊರೇಟರ್ ದಯಾನಂದ ಶೆಟ್ಟಿ ಮಾತನಾಡಿ ಪ್ರತೀ ವರ್ಷ ಮನಸೋ ಇಚ್ಛೆ ವಿದ್ಯುತ್ ದರ ಹೆಚ್ಚಳ ಒಂದೆಡೆಯಾದರೆ ಹೆಚ್ಚಿದ ಬಿಲ್ ಮೊತ್ತದ ಆಧಾರದಲ್ಲಿ ಮತ್ತೆ ಮತ್ತೆ ಡಿಪಾಸಿಟ್ ಬಿಲ್ ಕಳುಹಿಸಲಾಗುತ್ತಿದೆ. ಇದು ಹಗಲು ದರೋಡೆಯಾಗಿದೆ. ವಿದ್ಯುತ್ ಇಲ್ಲದೆ ಬದುಕಲು ಸಾಧ್ಯವಿಲ್ಲ ಎನ್ನುವ ವಿಷಯವನ್ನು ಬಂಡವಾಳ ಮಾಡಿಕೊಂಡಿರುವ ಮೆಸ್ಕಾಂ ಇಲಾಖೆ ಬಡವರ ಗಾಯದ ಮೇಲೆ ಬರೆ ಎಳೆದಿದೆ. ಈ ಸಮಸ್ಯೆಗಳ ಮೇಲೆ ಮಾತನಾಡಬೇಕಾದ ಶಾಸಕರನ್ನು, ಸಂಸದರನ್ನು ಇನ್ನು ರೆಸಾರ್ಟ್‌ಗಳಲ್ಲಿ ಹುಡುಕಬೇಕಾಗಬಹುದು. ಹೆಚ್ಚಿಸಿರುವ ವಿದ್ಯುತ್ ದರ ಹಾಗೂ ಹೆಚ್ಚುವರಿ ಡಿಪಾಸಿಟ್ ವಿರುದ್ದ ಜನತೆಯ ಹೋರಾಟ ತೀವ್ರಗೊಳ್ಳಬೇಕಾಗಿದೆ ಎಂದರು.

ಡಿವೈಎಫ್ಐ ವಲಯ ಸಮಿತಿಯ ನೌಶಾದ್ ಪಂಜಿಮೊಗರು, ಅನಿಲ್ ಡಿಸೋಜ, ಪ್ರವೀಣ್ ಕೊಂಚಾಡಿ, ಪ್ರಮೀಳಾ, ಸಿಪಿಐ(ಎಂ) ಮುಖಂಡರಾದ ರವಿಚಂದ್ರ ಕೊಂಚಾಡಿ, ತಿಮ್ಮಯ್ಯ ಕೊಂಚಾಡಿ, ದಯಾನಂದ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳು ಸಮಾಜವನ್ನು ಅರಿಯುವ ಪ್ರಯತ್ನ ಮಾಡಬೇಕು: ನಿತೀಶ್ ನಾರಾಯಣನ್

ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕು ಜನರನ್ನು ಅರಿಯುವ ಅಭ್ಯಾಸ ನಮ್ಮದಾಗಬೇಕು. ಸಮಾಜವನ್ನು ಅರಿಯುವ ಅಭ್ಯಾಸವಾಗಬೇಕು ಮತ್ತು ವಿದ್ಯಾರ್ಥಿಗಳು ಸಮಾಜವನ್ನು ಅರಿಯುವ ಪ್ರಯತ್ನ ಮಾಡಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.)ನ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ನಿತೀಶ್ ನಾರಾಯಣನ್ ಹೇಳಿದರು.

ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ, ವಿದ್ಯಾರ್ಥಿಗಳ ಪ್ರಜಾಸತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮತ್ತು ವಿದ್ಯಾರ್ಥಿಗಳ ಐಕ್ಯತೆಗಾಗಿ ನಡೆದ ಎಸ್.ಎಫ್.ಐ.ನ ಎರಡು ದಿನದ ಜಿಲ್ಲಾ ಮಟ್ಟದ ಸಂಘಟನಾ ಕಾರ್ಯಗಾರದ ಸಮಾರೋಪ ಸಮಾರಂಭದಲ್ಲಿ ಮಾತಾನಾಡಿದ ಅವರು, ಅಭ್ಯಾಸ ಮತ್ತು ಹೋರಾಟದ ಹಾದಿಯಲ್ಲಿ ನಾವು ಮುನ್ನಡೆಯೋಣ. ವಿದ್ಯಾರ್ಥಿ ಚಳುವಳಿಯನ್ನು ಬಲಿಷ್ಟಗೊಳಿಸೋಣ ಎಂದರು.

ಅಧ್ಯಕ್ಷತೆ ವಹಿಸಿ ಮಾತಾನಾಡಿದ ಮಾಧುರಿ ಬೋಳಾರ್, ಈ ಜಿಲ್ಲೆಯಲ್ಲಿ ವಿದ್ಯಾರ್ಥಿ ಐಕ್ಯತೆ ಉಳಿಸುವ ನಿಟ್ಟಿನಲ್ಲಿ, ವಿದ್ಯಾರ್ಥಿಗಳ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ನಾವು ಹೋರಾಡಬೇಕು. ಕೋಮು ವಿಂಗಡನೆ ಮಾಡಲು ಬಯಸುವ ಶಕ್ತಿಗಳ ವಿರುದ್ಧ ನಿಲ್ಲಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕಳೆದ ಹಲವು ವರುಷಗಳಿಂದ ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಎಸ್.ಎಫ್.ಐ. ನ ಮಾಜಿ ನಾಯಕರುಗಳಾದ ಮಯೂರಿ ಬೋಳಾರ್, ಹಂಝ ಕಿನ್ಯಾ, ಹನುಮಂತ್ ಪಂಜಿಮೊಗರು ಮತ್ತು ಚರಣ್ ಶೆಟ್ಟಿಯವರನ್ನು ಶುಭಕೋರಿ ವಿದ್ಯಾರ್ಥಿ ಸಮಿತಿಯಿಂದ ಬಿಡುಗಡೆಗೊಳಿಸಲಾಯಿತು.

ಈ ಸಂದರ್ಭದಲ್ಲಿ ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ಎಸ್.ಎಫ್.ಐ.ನ ಜಿಲ್ಲಾ ಕಾರ್ಯದರ್ಶಿ ವಿಕಾಸ್ ಕುತ್ತಾರ್, ಚರಣ್ ಶೆಟ್ಟಿ ಪಂಜಿಮೊಗರು ಉಪಸ್ಥಿತರಿದ್ದರು.

ಎಸ್.ಎಫ್.ಐ.ನ ನೂತನ ಜಿಲ್ಲಾ ಸಮಿತಿ

ಜಿಲ್ಲಾ ಮಟ್ಟದ ಸಂಘಟನಾ ಕಾರ್ಯಗಾರದಲ್ಲಿ ಎಸ್.ಎಫ್.ಐ.ನ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ನೂತನ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಮಾಧುರಿ ಬೋಳಾರ್, ಕಾರ್ಯದರ್ಶಿಯಾಗಿ ವಿಕಾಸ್ ಕುತ್ತಾರ್ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಚಸ್ಮಿತ, ಶಮಾಝ್, ಸಿನಾನ್ ಬೆಂಗ್ರೆ ಮತ್ತು ಜೊತೆ ಕಾರ್ಯದರ್ಶಿಗಳಾಗಿ ಸಂಜಯ್ ಬಜಾಲ್, ಸಾಗರ್ ಹಾಗೂ ಒಟ್ಟು 23 ಸದಸ್ಯರ ನೂತನ ಸಮಿತಿಯನ್ನು ರಚಿಸಲಾಯಿತು.







ಮಾಧುರಿ ಬೋಳಾರ್ ವಿಕಾಸ್ ಕುತ್ತಾರ್

ಶಾಲಾ ಮಕ್ಕಳ ವಾಹನ ಚಾಲಕರ ಅನಿರ್ದಿಷ್ಟಾವಧಿ ಮುಷ್ಕರ ಹಿಂದೆಗೆತ



ಶಾಲಾ ಮಕ್ಕಳ ವಾಹನ ಚಾಲಕರ ಮೇಲಿನ ಧಾಳಿಯನ್ನು ವಿರೋಧಿಸಿ ಕಳೆದ 2 ದಿನಗಳಿಂದ ನಡೆಯುತ್ತಿದ್ದ ಸ್ವಯಂಪ್ರೇರಿತ ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ಪಾಲ್ಗೊಂಡ ವಾಹನ ಚಾಲಕರ ಸಂಕಷ್ಟಕ್ಕೆ ಕೂಡಲೇ ಸ್ಪಂದಿಸುವುದಾಗಿ ಮಂಗಳೂರು ದಕ್ಷಿಣ ಶಾಸಕರಾದ ಡಿ.ವೇದವ್ಯಾಸ್ ಕಾಮತ್ ರವರು ಭರವಸೆ ನೀಡಿರುವ ಹಿನ್ನೆಲೆಯಲ್ಲಿ ದ.ಕ. ಜಿಲ್ಲಾ ಶಾಲಾ ಮಕ್ಕಳ ವಾಹನ ಚಾಲಕರ ಸಂಘವು ಕರೆ ನೀಡಿದ್ದ ಸ್ವಯಂಪ್ರೇರಿತ ಮುಷ್ಕರವನ್ನು ವಾಪಸ್ ಪಡೆಯಲಾಗಿದೆ. ಶನಿವಾರದಂದು ಎಂದಿನಂತೆ ಶಾಲಾ ವಾಹನ ಸಂಚಾರ ನಡೆಯಲಿದೆ ಎಂದು ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ರವರು ನಗರದಲ್ಲಿ 12 ಜುಲೈ 2019 ರಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮುಂದುವರಿಸುತ್ತಾ ಅವರು, ಇತ್ತೀಚಿಗೆ ರಾಜ್ಯದ ಉಚ್ಚ ನ್ಯಾಯಾಲಯವು ಸರಕು ಸಾಗಾಟ ವಾಹನಗಳಲ್ಲಿ ಕಾರ್ಮಿಕರನ್ನು ಸಾಗಿಸಬಾರದೆಂದು ಕಟ್ಟುನಿಟ್ಟಿನ ಆದೇಶವನ್ನು ಹೊರಡಿಸಿದ್ದು, ಅದರ ಜೊತೆಗೆ ಶಾಲಾ ಮಕ್ಕಳನ್ನು ಸಾಗಿಸುವಂತಹ ವಾಹನಗಳಲ್ಲಿ ಮಿತಿಗಿಂತ ಜಾಸ್ತಿ ಮಕ್ಕಳನ್ನು ಹಾಕದಂತೆ ನಿಗಾವಹಿಸಬೇಕೆಂದು ತಿಳಿಸಿದೆ. ಅದರಂತೆ ಪೋಲಿಸ್ ಇಲಾಖೆಯು ಇದನ್ನು ಜಾರಿಗೊಳಿಸುವ ನೆಪದಲ್ಲಿ ಶಾಲಾ ಮಕ್ಕಳನ್ನು ಸಾಗಿಸುವ ವಾಹನಗಳನ್ನೇ ಕೇಂದ್ರೀಕರಿಸಿ ಕಳೆದ ಒಂದು ತಿಂಗಳಿನಿಂದ ನಿರಂತರ ಕೇಸ್ ಹಾಗೂ ವಿಪರೀತ ದಂಡ ವಸೂಲಿ ಮಾಡಲಾಗುತ್ತಿದೆ. ಮಾತ್ರವಲ್ಲದೆ ಶಾಲಾ ವಾಹನಗಳನ್ನು ತಡಗಟ್ಟಿ ವಾಹನ ಚಾಲಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೇಸ್ ಹಾಕುವ ಮೂಲಕ ಮಕ್ಕಳು ಸರಿಯಾದ ಸಮಯಕ್ಕೆ ಶಾಲೆಗಳಿಗೆ ಹೋಗಲು ಅಗುತ್ತಿಲ್ಲ. ಮಿತಿಗಿಂತ ಕಡಿಮೆ ಮಕ್ಕಳಿದ್ದರೂ ಕೇಸ್ ಹಾಕಿರುವುದು, ಲೈಸನ್ಸ್ ರದ್ದು ಸೇರಿದಂತೆ ನಿರಂತರವಾಗಿ ಶಾಲಾ ಮಕ್ಕಳ ವಾಹನ ಚಾಲಕರ ಮೇಲೆ ನಡೆಸಿರುವ ದೌರ್ಜನ್ಯ ತೀರಾ ಅಮಾನವೀಯವಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಜಿಲ್ಲಾ ಮುಖಂಡರಾದ ಮೋಹನ್ ಕುಮಾರ್ ಅತ್ತಾವರ, ಕಿರಣ್ ಲೇಡಿಹಿಲ್, ಸತೀಶ್ ಪೂಜಾರಿ, ಶಂಕರ್ ಶೆಟ್ಟಿ,ಲೋಕೇಶ್ ಸುರತ್ಕಲ್, ರೆಹಮಾನ್ ಖಾನ್, ದೇವರಾಜ್, ಗಂಗಾಧರ ರೈ, ಬೆಂಜಮಿನ್,ಸುಕೇಶ್,ಚರಣ್,ಮುನ್ನಾ ಪದವಿನಂಗಡಿ, ಚಿತ್ತರಂಜನ್ ಸುವರ್ಣ ಮುಂತಾದವರು ಉಪಸ್ಥಿತರಿದ್ದರು.

ಅತಿಥಿ ಅಂಕಣ



ಡಾ. ವಿನಯ ಒಕ್ಕುಂದ

ಈ ಗುಪ್ತ ಪಕ್ಷಾಂತರಗಳಲ್ಲಿ, ರಾಜೀನಾಮೆ ಪರ್ವಗಳಲ್ಲಿ ಶಾಸಕರುಗಳು, ಮಂತ್ರಿಗಳು ಮಾತ್ರ ಮಾರಾಟವಾಗುವುದಿಲ್ಲ. ಮತದಾರರನ್ನು ಮಾರಾಟ ಮಾಡಿಕೊಳ್ಳುತ್ತಾರೆ. ಒಪ್ಪಿಗೆಯನ್ನು ಹೇರುತ್ತಾರೆ. ಹೀಗೆ ವೈಯಕ್ತಿಕ ಈರ್ಷ್ಯೆ, ಸ್ವಕೀಯ ಲಾಭಕ್ಕಾಗಿಯಲ್ಲ. ಪ್ರಜೆಗಳಾಗಿ ನಾವೀಗ ಪ್ರೇಕ್ಷಕರು. ಅವರ ಬಿಟ್ಟು ಇವರ ಬಿಟ್ಟು ಇವರ್‍ಯಾರು? ಎಂಬ ಕಣ್ಕಟ್ಟಿನಲ್ಲಿ ಸಿಕ್ಕಿದವರು. ಮತ್ತು ಯಾರೇ ಅಧಿಕಾರಕ್ಕೆ ಬಂದರೂ ನಾವು ಸೋತು ನೆಲಕಚ್ಚಿದವರು. ಬಿದ್ದ ನೆಲಕ್ಕೆ ಕೈಯೂರಿ ನಿಧಾನ ಏಳುತ್ತ ರಾಜಕಾರಣದ ಪರಿಭಾಷೆಯನ್ನು ತಿಳಿಯಬೇಕಿದೆ. 'ಭ್ರಷ್ಟ ರಾಜಕಾರಣಿ ಭ್ರಷ್ಟ ಜನರ ಪ್ರತಿನಿಧಿಯಾಗಿರುತ್ತಾನೆ' – ಎಂಬುದನ್ನು ಮರೆಯದಿರಬೇಕಿದೆ. ಖರೀದಿ, ಭ್ರಷ್ಟತೆಗಳು ಮೇಲುಗೈ ಸಾಧಿಸುವುದು ಸೈದ್ಧಾಂತಿಕ ಸ್ಪಷ್ಟತೆ ಮತ್ತು ಬದ್ಧತೆ ಇಲ್ಲದ ರಾಜಕಾರಣದಲ್ಲಿ.

ಪ್ರಜಾಪ್ರಭುತ್ವವನ್ನು ಮಾರಾಟಕ್ಕಿಟ್ಟ ಮೇಲೆ ಪ್ರಜೆಗಳು ಸೋಲುತ್ತಲೇ ಇರಬೇಕು

ಜುಲೈ 10ರ ಪ್ರಜಾವಾಣಿಯ ದಿನದ ಟ್ವೀಟ್ ಹೀಗಿದೆ – ಒಂದು ರಾಜ್ಯದ ಜಿಡಿಪಿಯು ಆ ರಾಜ್ಯದ ಶಾಸಕ ಎಷ್ಟು ಬೆಲೆ ಬಾಳಬಹುದು ಎಂಬುದನ್ನು ಆಧರಿಸಿ ಇರುವುದಾದರೆ ಕರ್ನಾಟಕವು ವಿಶ್ವದ ಅತ್ಯಂತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಜಿಡಿಪಿಯನ್ನೇ ಸುಲಭವಾಗಿ ಮೀರಿಸಿಬಿಡುತ್ತದೆ – ಈ ಟ್ವೀಟ್ ಮಾಡಿದ್ದು ಸುಪ್ರೀಂ ಕೋರ್ಟ್ ವಕೀಲರಾದ ಬ್ರಿಜೇಶ್ ಕಾಳಪ್ಪ. ಸದ್ಯ ಕರ್ನಾಟಕದಲ್ಲಿ ನಡೆಯುತ್ತಿರುವ ರಾಜಕೀಯ ದುರಂತ ನಾಟಕದ ಕೊನೆಯ ಅಂಕಪರದೆ ಎಳೆಯುವ ಮುನ್ನ ನೋಡುಗರಿಗೆ ಸ್ಪಷ್ಟಪಡಿಸಬೇಕಾದ ನಾಟಕದ ಥೀಮ್‌ನ್ನು ಈ ಬರಹ ಸೂಚಿಸುತ್ತದೆ. ಕಳೆದೊಂದು ವರ್ಷದಿಂದಲೂ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಮೈತ್ರಿ ಸರ್ಕಾರದ ಅಧಿಕಾರವನ್ನು ಕಬಳಿಸಲು ಇನ್ನೊಂದು ರಾಷ್ಟ್ರೀಯ ಪಕ್ಷವೂ, ಲೋಕಸಭಾ ಚುನಾವಣೆಯ ನಂತರ ದೇಶದ ಅತ್ಯಂತ ಪ್ರಬಲ ರಾಜಕೀಯ ಪಕ್ಷವೂ ಆಗಿರುವ ಬಿಜೆಪಿ ಪ್ರಯತ್ನ ನಡೆಸಿತ್ತು. ಬಿಜೆಪಿಯದು ಪ್ರಯತ್ನ ಎಂದು ಮಾತ್ರ ಹೇಳಬೇಕು. ಅದೊಂದು ಕುತಂತ್ರ, ಷಡ್ಯಂತ್ರ ಎಂದೆಲ್ಲ ಹೇಳುವ ಅಗತ್ಯವಿಲ್ಲ. ನಾವೀಗ 'ಯುದ್ಧದಲ್ಲಿ ಪ್ರೀತಿಯಲ್ಲಿ ಎಲ್ಲವೂ ಸರಿ' ಎಂಬ ನಾಣ್ನುಡಿಯ ಕಾಲಕ್ಕಿಂತ ಬೇರೆಯಾಗಿ 'ರಾಜಕಾರಣದಲ್ಲಿ ಚುನಾವಣೆಯಲ್ಲಿ ಎಲ್ಲವೂ ಸರಿ' ಎಂಬ ಕಾಲಕ್ಕೆ ಬಂದಾಗಿದೆ. ಮೋಸ, ವಂಚನೆ, ಅನ್ಯಾಯ, ಭ್ರಷ್ಟತೆ, ಅನೈತಿಕತೆ ಯಾವುದೇ ಅಸ್ತ್ರವಿರಲಿ; ಯಾರು ಎಷ್ಟು ಸೂಕ್ಷ್ಮವಾಗಿ ಮತ್ತು ಸಾಂದರ್ಭಿಕವಾಗಿ ಬಳಸಿಕೊಳ್ಳುತ್ತಾರೆ ಎನ್ನುವುದು ಮಾತ್ರ ಮುಖ್ಯವಾಗಿದೆ. ಸರಿ–ತಪ್ಪು, ನ್ಯಾಯ–ಅನ್ಯಾಯ ಇಂತಹ ಪರಿಕಲ್ಪನೆಗಳೇ, ಚಾಣಾಕ್ಷ್ಯ ರಾಜಕೀಯ ತಜ್ಞತೆಯ ಎದುರು ಎಳಸಲಾಗಿ ಕಾಣುತ್ತಿದೆ.


ಸದ್ಯದ ಕರ್ನಾಟಕದ ಮತದಾರರು ಮೂಕರಾಗಿದ್ದಾರೆ. ಪಕ್ಷದ ಕಾರ್ಯಕರ್ತರು ಕಂಗಾಲಾಗಿದ್ದಾರೆ. ನಡೆಯುತ್ತಿರುವ ವಿದ್ಯಮಾನಗಳಿಗೆ ಹೇಗೆ ಸ್ಪಂದಿಸಬೇಕೆಂಬ ತಳಮಳದಲ್ಲೂ ಇದ್ದಾರೆ. ಕರ್ನಾಟಕದ 'ಬುದ್ಧಿವಂತ ಮತದಾರರು' ವಿರೋಧ ಪಕ್ಷವೇ ಇಲ್ಲದ ವಿಧಾನಸಭೆಯನ್ನು ಕಲ್ಪಿಸಿಕೊಳ್ಳಬೇಕಾದ ಸ್ಥಿತಿಯನ್ನು ಎದುರು ನೋಡುತ್ತಿದ್ದಾರೆ. ಇದು ಯಾವುದೇ ಪ್ರಜಾತಂತ್ರ ವ್ಯವಸ್ಥೆಗೆ ತಕ್ಕುದಾದ ಸ್ಥಿತಿಯಲ್ಲ. ಪ್ರಜಾಪ್ರಭುತ್ವದ ಮುಚ್ಚಟೆಯೊಳಗೇ ಬೇರೂರಿ ಬೆಳೆದು ನಿಲ್ಲುವ ಸರ್ವಾಧಿಕಾರೀ ಪ್ರಭುತ್ವ ತನ್ನ ನಿಜ ಬಣ್ಣವನ್ನು ಬಯಲು ಮಾಡುವ ಸಂದರ್ಭದ ಫಲಶ್ರುತಿಯಿದಾಗಿರುತ್ತದೆ; ಕೆಲ ತಿಂಗಳುಗಳ ಹಿಂದೆ ಈಶಾನ್ಯ ರಾಜ್ಯವೊಂದರ ವಿಧಾನಸಭೆಯ ಎಲ್ಲ ಶಾಸಕರೂ ಸಾಮೂಹಿಕವಾಗಿ ಆಡಳಿತ ಪಕ್ಷವನ್ನು ಸೇರಿಕೊಳ್ಳುವ ಮೂಲಕ ವಿರೋಧ ಪಕ್ಷವೇ ಇಲ್ಲದ ಪರಿಸ್ಥಿತಿಯನ್ನು ಜಾರಿಗೆ ತಂದರು. ಆ ಮೂಲಕ ಪ್ರಜಾತಂತ್ರದ ಬೇರನ್ನೇ ಸಡಿಲಗೊಳಿಸಿದರು. ಲೋಕಸಭೆಯಲ್ಲಿ ಬಹುಮತದಿಂದ ಆಯ್ಕೆಯಾದ ನಂತರ ಪ್ರಧಾನಮಂತ್ರಿ ಮೋದಿಯವರು, ವಿರೋಧ ಪಕ್ಷದವರಿಗೆ ಅಡ್ರೆಸ್ ಮಾಡಿ ಆಡಿದ ಉದಾರವಾದ ಮಾತು ಹೀಗಿತ್ತು – 'ನೀವು ನಿಮ್ಮ ಸಂಖ್ಯಾಬಲದ ಕಾರಣದಿಂದ ಮುಜುಗರಗೊಳ್ಳಬೇಡಿರಿ. ಕಲಾಪಕ್ಕೆ, ಸರ್ಕಾರೀ ಕೆಲಸಕ್ಕೆ ಸಹಕರಿಸಿ.' ಮೇಲ್ನೋಟಕ್ಕೆ ಪ್ರಧಾನಮಂತ್ರಿಯ ಸ್ಥಾನಕ್ಕೆ ಯೋಗ್ಯ ಎಂದು ತೋರುವ ಈ ಮಾತಿನಲ್ಲಿ ಕ್ರೂರವಾದ ವ್ಯಂಗ್ಯವಿದೆ. ಮಹಾಭಾರತ ಯುದ್ಧದ ಹದಿನೆಂಟನೆಯ ದಿನ ವೈಶಂಪಾಯನ ಕೊಳದಲ್ಲಿ ಮುಳುಗಿ ಕೂತ ದುರ್ಯೋಧನನನ್ನು ಪಾಂಡವರು ಹುಡುಕಿಸುತ್ತಾರೆ. ದುರ್ಯೋಧನನೇನೋ 'ಪಿಂತೆಹೆಜ್ಜೆ'ಯನ್ನೂರಿ ಭೀಷ್ಮಾಚಾರ್ಯರ ಸಲಹೆಯಂತೆ ಅಲ್ಲಿ ಕುಳಿತಿದ್ದಾನೆ. ಆದರೆ, ಮೋಸಗಾರಿಕೆಯು ಸಣ್ಣ ಕೌಶಲ್ಯವಲ್ಲ ತಾನೇ? ಪಾಂಡವರಂತೆ ಸದ್ಗುಣಿ ಸಚ್ಚಾರಿತ್ರ್ಯದ ಮುಸುಕಿನೊಳಗಿನ ಮೋಸಗಾರಿಕೆ ದುರ್ಯೋಧನನಂತಹ, ಖಡ್ಗ ಬಲವೂ ತೋಳ್ಬಲವೂ ಆಧಾರವಾದವನಿಗೆ ತಿಳಿಯುವುದು ಹೇಗೆ? ಕೊಳದಲ್ಲಿರುವ ದುರ್ಯೋಧನನಿಗೆ, ನೆಲದಲ್ಲಿರುವ ಗೆದ್ದವನಾಗಿರುವ ಧರ್ಮಭೀರುವೆಂದು ಹೆಸರಾದ ಧರ್ಮರಾಜ – 'ಏಳು ದುರ್ಯೋಧನಾ, ಸಂಧಾನ ಮಾಡಿಕೋ' ಎಂದು ಪ್ರೀತಿಯಿಂದ ಆಹ್ವಾನಿಸುತ್ತಾನೆ. ಈ ಪ್ರೀತಿಯನ್ನು ಅರಗಿಸಿಕೊಳ್ಳುವುದು ಎಷ್ಟು ಕಷ್ಟ! ರಾಜಕಾರಣದ ನಡೆಗೆ ದೊಡ್ಡ ಪರಂಪರೆಯೇ ಇದೆ.

ಕರ್ನಾಟಕದಲ್ಲಿ ನಡೆದ ಈ ಊಹಾತೀತ ಬೆಳವಣಿಗೆಯ ಕಾರಣಗಳೇನು? ರಾಜೀನಾಮೆ ಕೊಟ್ಟು ರೆಸಾರ್ಟ್ ಸೇರಿದ ಶಾಸಕರೇನೋ ತಮ್ಮ ಈ ತೀರ್ಮಾನಕ್ಕೆ – ತಮ್ಮ ಸ್ವಕ್ಷೇತ್ರದ ಅಭಿವೃದ್ಧಿಗೆ ಸರಿಯಾದ ಅವಕಾಶ ಸಿಗುತ್ತಿಲ್ಲ. ತಮ್ಮ ಪಕ್ಷ ಅಥವಾ ಮೈತ್ರಿ ಪಕ್ಷ ತಮ್ಮನ್ನು ಗೌರವದಿಂದ ನಡೆಸಿಕೊಂಡಿಲ್ಲ. ಆತ್ಮಸಾಕ್ಷಿಗೆ ಅನುಗುಣವಾದ ನಿರ್ಣಯ – ಎಂದು ಜನರ ದ್ವೇಷ ಉಕ್ಕಿಸದಿರುವಂತಹ ಕಾರಣಗಳನ್ನು ಹುಡುಕಿದ್ದಾರೆ. ಈ ಹಿಂದೆ ಪಕ್ಷಾಂತರಗಳು ನಡೆದೇ ಇಲ್ಲವೇ? ಎಂದು ಸಮಜಾಯಿಷಿಯನ್ನೂ ಕೊಟ್ಟುಕೊಂಡಿದ್ದಾರೆ. ಆದರೆ ಲೋಕವೇ ತಿಳಿದಿರುವಂತೆ, ಈ ಎಲ್ಲ ಘಟನೆಗಳಿಗೆ ಕುಟುಂಬದೊಳಗಿನ ಅಂತಃಕಲಹದ ಕಾರಣ, ಒಬ್ಬರನ್ನೊಬ್ಬರು ಮೇಲ್ಗಟ್ಟಿ ಒತ್ತುವರಿ ಮಾಡಿದ್ದರ ಪರಿಣಾಮ, ಗಂಡು–ಹೆಣ್ಣು ಸ್ನೇಹ ಸಂಬಂಧದಲ್ಲಿ ಉಂಟಾದ ಅಡಚಣೆಗಳು, ಅಧಿಕಾರ ಹೇರುವ ಪ್ರಯತ್ನಗಳು ಈ ಎಲ್ಲವೂ ಮಹಾಮನೆಯ ಪರಿಕಲ್ಪನೆಯಲ್ಲಿ ಉಸಿರಾಡಬೇಕಾದ ಪಕ್ಷದೊಳಗಡೆ ಉಪ್ಪು ಸುರಿದಿದೆ. ವಿರೋಧಿಯು ಬಹಳ ಪ್ರಬಲವಾಗಿದ್ದಾನೆಂಬ ಭಯಕ್ಕೆ ಬಿದ್ದು, ಇರುವ ಇದೊಂದು ಅವಕಾಶದಲ್ಲಿ ಅಧಿಕಾರದ ಕೇಂದ್ರದಲ್ಲಿ ಕುಳಿತು ಸಾಕಷ್ಟು ಸಂಪಾದನೆ ಮಾಡಬೇಕು, ಹೆಸರು ಪಡೆಯಬೇಕು – ಎಂಬ ಒತ್ತಡದ ನೂಕುನುಗ್ಗಾಟ, ಸ್ವಪ್ರತಿಷ್ಠೆಗಳಿಂದಾಗಿ ಉಸಿರುಗಟ್ಟಿಸುವ ವಾತಾವರಣವನ್ನು ಸೃಷ್ಟಿಸಿಕೊಂಡಾಗಿತ್ತು. ಇದನ್ನು ಅರ್ಥೈಸಿಕೊಂಡು ಸರಿಯಾದ ರೀತಿಯಲ್ಲಿ ಚಿಕಿತ್ಸಕ ಮನಸ್ಥಿತಿಯಿಂದ ಸರಿದೂಗಿಸುವ ಪ್ರಯತ್ನ ಮಾಡಬೇಕಾದ ನಾಯಕರು ಕೂಡ; ಸ್ವಾರ್ಥ ಮೀರಿ ಯೋಚಿಸಲಿಲ್ಲ.

ಚುನಾವಣೆಯಲ್ಲಿ ಅತಿ ದೊಡ್ಡ ಪಕ್ಷವಾಗಿದ್ದರೂ, ಸರ್ಕಾರ ರಚಿಸಲು ಸೋತು ಕುದಿಯುತ್ತಿದ್ದ ಬಿಜೆಪಿ ನಿರಂತರವಾಗಿ, ಯಾವ ಸಣ್ಣ ಅವಕಾಶವನ್ನೂ ಕಳೆದುಕೊಳ್ಳದೆ, ಸರ್ಕಾರದಲ್ಲಿರುವವರು ಮತ್ತು ಆಡಳಿತ ಪಕ್ಷದವರು ನಿಶ್ಚಿಂತರಾಗಿ ಯೋಜನಾಬದ್ಧವಾಗಿ ಆಡಳಿತವನ್ನು ನಡೆಸದ ಹಾಗೆ ಶ್ರಮಿಸಿತು. ಬಿಜೆಪಿಯ ತಾತ್ವಿಕತೆ ಏನೇ ಇರಲಿ, ಪಕ್ಷ ಸಂಘಟನೆ, ಸೈದ್ಧಾಂತಿಕ ಬದ್ಧತೆ ಮತ್ತು ನಿರಂತರ ಪರಿಶ್ರಮಗಳ ಮೂಲಕವೇ ಕಳೆದ 50 ವರ್ಷಗಳಲ್ಲದು ಶೂನ್ಯದಿಂದ ನಿರಾಳ ಬಹುಮತದವರೆಗೆ ಸಾಗಿಬಂದಿದೆ. ಪಕ್ಷದ ಒಳಗಿನ ಇರುಸು–ಮುರುಸುಗಳು ಏನೇ ಇರಲಿ, ಅದರ ಗಾಳಿ ಪಕ್ಷದ ಕಾರ್ಯಕರ್ತರಿಗೂ ತಾಗದ ಹಾಗೆ, ರಾಜಕಾರಣದ ಅಂತಃಪಟದೊಳಗಿರುವುದನ್ನು ಅವರಿಂದ ಕಲಿಯಬೇಕಿದೆ. ಒಂದು ಚುನಾವಣೆಯ ಫಲಿತಾಂಶ ಬಂದ ದಿನದಿಂದಲೇ ಮತ್ತೊಂದು ಚುನಾವಣೆಯ ತಯಾರಿ ನಡೆಸುವ; ಮಾಧ್ಯಮಗಳನ್ನು ಕೊಂಡುಕೊಂಡು ಅದರಿಂದ ಜನಾಭಿಪ್ರಾಯವನ್ನು ತನ್ನ ಪರವಾಗಿ ರೂಪಿಸುವ; ಜನರ ಧಾರ್ಮಿಕತೆಯನ್ನು ಧರ್ಮಲಂಪಟ ಮನಸ್ಥಿತಿಯಾಗಿಸಿ, ದೇಶದ ಬಹುಸಂಖ್ಯಾತರ ಧರ್ಮ ರಕ್ಷಣೆಯ ಹೊಣೆಯನ್ನು ಮತಗಳಾಗಿ ಪರಿವರ್ತಿಸಿಕೊಳ್ಳುವ ಯಶಸ್ವೀ ಆಟವಿದು. ಆಟದ ನಿಯಮ, ಆಟದ ಗ್ರೌಂಡು, ಆಟದ ರೂಢಿ ಎಲ್ಲ ಅವರಿಗೆ ಮಾತ್ರ ದಕ್ಕಿತ್ತಾದ್ದರಿಂದ ಆಟಗಾರರನ್ನು ಬದಲಿಸಿ ಅಪರಿಚಿತ ಆಖಾಡಕ್ಕಿಳಿದ ಉಳಿದ ಪಕ್ಷಗಳು ನಗೆಗೀಡಾಗಬೇಕಾಯಿತು. ಜನರು ತಮ್ಮ ಸ್ವಂತದ ಹಸಿವು, ನಿರುದ್ಯೋಗ, ಅಪಮಾನಗಳನ್ನು ಮರೆಯಲು ಸಾಧ್ಯವಾಗುವಂತೆ; ಸರ್ಕಾರವನ್ನು ಪ್ರಶ್ನಿಸದಂತೆ ಸದಾ ಅವರೆದುರು ವೈರದ ಛಾಯಾರೂಪವನ್ನು ಕುಣಿಸಿಕೊಂಡು ಬರಲಾಯಿತು. ಕೋಪದಿಂದ ತತ್ತರಿಸುವಂತೆ ಮಾಡಿದರೆ, ವಿವೇಚನಾಹೀನರನ್ನಾಗಿ ಮಾಡಿದಂತೆ. ಈ ಬಿಗಿಪಟ್ಟುಗಳಿಗೆ ಮೈಗೊಟ್ಟು ಕೈಖಾಲಿ ಮಾಡಿಕೊಂಡಿರುವ, ಬೇರೆ ಬೇರೆ ಪಕ್ಷಗಳ ಶಾಸಕರುಗಳಿಗೆ ಸುರಕ್ಷಿತ ತಾಣದ ಅಗತ್ಯವಿದೆ ಅನ್ನಿಸಿರಬೇಕು. ಕರ್ನಾಟಕದಲ್ಲಿ ಈ ಸ್ಥಿತಿಯು ಬೃಹತ್ತಾಗಿ ಕಣ್ಣಿಗೆ ರಾಚುತ್ತಿದೆ.

ಸರ್ವಾಧಿಕಾರಿ ಧೋರಣೆಯನ್ನು ತಾತ್ವಿಕವಾಗಿ ಮತ್ತು ಖಚಿತವಾಗಿ ಎದುರಿಸಬಲ್ಲವರ ಪಕ್ಕೆಲುಬು ಮುರಿದು ಪುಡಿಗಟ್ಟಿಯಾಯಿತು. ಆದರೆ, ದೇಶದಾದ್ಯಂತ ಬೇರೆ ಬೇರೆ ರಾಜ್ಯಗಳ ಸ್ಥಿತಿ ಇದಕ್ಕೆ ಹೊರತಾಗಿಲ್ಲ. ಗೋವಾದ ಹತ್ತಾರು ಶಾಸಕರು ಬಿಜೆಪಿ ಸೇರುತ್ತಿರುವ ಸುದ್ದಿ ಇದೀಗ ಬರುತ್ತಿದೆ. ಅಂದ ಮೇಲೆ, ಕರ್ನಾಟಕದ ಈ ಸ್ಥಿತಿಯಲ್ಲಿ ಬಿಜೆಪಿಯ ಪಾಲಿಲ್ಲವೇ? ಹಾಗೆ ಯೋಚಿಸುವುದೂ ಅಪರಾಧ. ಯಾರು, ಯಾವಾಗ, ಯಾರನ್ನು ಭೇಟಿಯಾದರು? ಡೀಲ್ ಎಷ್ಟು ಮೊತ್ತಕ್ಕಾಗಿದೆ? ಇನ್ನೂ ಪಕ್ಷದಲ್ಲಿ ಇರುವವರು ಯಾಕೆ ಇದ್ದಾರೆ? ಹೋದವರಲ್ಲಿ ಯಾರ್‍ಯಾರಿಗೆ ಐ.ಟಿ. ಭಯವಿತ್ತು? ಯಾರ್‍ಯಾರಿಗೆ ಭವಿಷ್ಯತ್ತಿನ ಕನಸಿತ್ತು? ಇಂತಹ ಮಾಹಿತಿಗಳು ಅಧಿಕೃತವಾಗಿ ಎಕ್ಸಕ್ಲೂಸಿವ್ ಆಗಿ ಹೊರಬೀಳುತ್ತದೆ, ಸರಣಿ ಸರಣಿಯಾಗಿ ಜನರ ಮನರಂಜನೆಗಾಗಿ. ಇದು ಮಾಹಿತಿ ತಂತ್ರಜ್ಞಾನದ ಕಾಲವಲ್ಲವೇ?

ಹೌದು, ರಾಜೀನಾಮೆ, ಪಕ್ಷಾಂತರ ಇವೆಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವೇ. ಆದರದು ಪ್ರಾಮಾಣಿಕವಾಗಿ, ಬಹಿರಂಗವಾಗಿ ನಡೆಯಬೇಕು. ತಮ್ಮನ್ನು ಆಯ್ಕೆ ಮಾಡಿ ಕಳಿಸಿದ ಮತದಾರರೊಂದಿಗೆ ಕಾರ್ಯಕರ್ತರೊಂದಿಗೆ ಒಂದು ವಿಚಾರ ವಿನಿಮಯದ ನಂತರ ಪ್ರಕಟವಾಗಬೇಕು. ಹೇರಿಕೆಯಾಗಬಾರದು. ಈ ಗುಪ್ತ ಪಕ್ಷಾಂತರಗಳಲ್ಲಿ, ರಾಜೀನಾಮೆ ಪರ್ವಗಳಲ್ಲಿ ಶಾಸಕರುಗಳು, ಮಂತ್ರಿಗಳು ಮಾತ್ರ ಮಾರಾಟವಾಗುವುದಿಲ್ಲ. ಮತದಾರರನ್ನು ಮಾರಾಟ ಮಾಡಿಕೊಳ್ಳುತ್ತಾರೆ. ಒಪ್ಪಿಗೆಯನ್ನು ಹೇರುತ್ತಾರೆ. ಹೀಗೆ ವೈಯಕ್ತಿಕ ಈರ್ಷ್ಯೆ, ಸ್ವಕೀಯ ಲಾಭಕ್ಕಾಗಿಯಲ್ಲ. ಪ್ರಜೆಗಳಾಗಿ ನಾವೀಗ ಪ್ರೇಕ್ಷಕರು. ಅವರ ಬಿಟ್ಟು ಇವರ ಬಿಟ್ಟು ಇವರ್‍ಯಾರು? ಎಂಬ ಕಣ್ಕಟ್ಟಿನಲ್ಲಿ ಸಿಕ್ಕಿದವರು. ಮತ್ತು ಯಾರೇ ಅಧಿಕಾರಕ್ಕೆ ಬಂದರೂ ನಾವು ಸೋತು ನೆಲಕಚ್ಚಿದವರು. ಬಿದ್ದ ನೆಲಕ್ಕೆ ಕೈಯೂರಿ ನಿಧಾನ ಏಳುತ್ತ ರಾಜಕಾರಣದ ಪರಿಭಾಷೆಯನ್ನು ತಿಳಿಯಬೇಕಿದೆ. 'ಭ್ರಷ್ಟ ರಾಜಕಾರಣಿ ಭ್ರಷ್ಟ ಜನರ ಪ್ರತಿನಿಧಿಯಾಗಿರುತ್ತಾನೆ' – ಎಂಬುದನ್ನು ಮರೆಯದಿರಬೇಕಿದೆ. ಖರೀದಿ, ಭ್ರಷ್ಟತೆಗಳು ಮೇಲುಗೈ ಸಾಧಿಸುವುದು ಸೈದ್ಧಾಂತಿಕ ಸ್ಪಷ್ಟತೆ ಮತ್ತು ಬದ್ಧತೆ ಇಲ್ಲದ ರಾಜಕಾರಣದಲ್ಲಿ. ರಾಜಕಾರಣವನ್ನು ಬಹುದೊಡ್ಡ ಮಟ್ಟದ ಹಣ ಹೂಡಿಕೆಯ, ಲಾಭದ ಉದ್ಯಮವಾಗಿಸಿಕೊಂಡವರು ಅದರಿಂದ ಲಾಭವನ್ನು ಮಾತ್ರ ನಿರೀಕ್ಷಿಸುತ್ತಾರೆ. ಲಾಭ ತರಬಲ್ಲ ಎಲ್ಲ ಸ್ಥಿತ್ಯಂತರಗಳಿಗೂ ಸಿದ್ಧರಾಗುತ್ತಾರೆ. ಅಲ್ಲಿ ಕ್ಷೇತ್ರ, ಜನತೆ, ಅಭಿವೃದ್ಧಿ, ಜಾತಿ, ಸ್ನೇಹ, ಮಾನವೀಯತೆ ಎಲ್ಲವೂ ವ್ಯವಹಾರದ ಭಾಷೆಯಾಗುತ್ತದೆ. ಅಧಿಕಾರ ಲೋಭಕ್ಕಾಗಿ ಯಾವ ಸೈದ್ಧಾಂತಿಕ ಅಭಿಪ್ರಾಯ ಭೇದವೂ ಇಲ್ಲದೆ ಜನಪ್ರತಿನಿಧಿಗಳು ಸ್ಥಾನಪಲ್ಲಟಕ್ಕೆ ಸಿದ್ಧರಾಗುತ್ತಾರೆಂದರೆ, ಪ್ರಜಾಪ್ರಭುತ್ವದ ಆಶಯಗಳೇ ಇಷ್ಟು ತಲೆ ಕೆಳಗಾದ ಮೇಲೆ; ಮತ್ತೆ ಮತ್ತೆ ಸೋಲುತ್ತ ಇರಬೇಕಾದವರು ಪ್ರಜೆಗಳು ಮಾತ್ರವೇ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಅಟೋರಿಕ್ಷಾ ಪ್ರಯಾಣ ದರವನ್ನು ಹೆಚ್ಚಿಸಲು ಸಿಐಟಿಯು ಒತ್ತಾಯ

ಕೇಂದ್ರ ಸರಕಾರವು ಮಂಡಿಸಿದ ಬಜೆಟ್ ನಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಸುಂಕವನ್ನು ವಿಪರೀತವಾಗಿ ಏರಿಕೆ ಮಾಡಲಾಗಿದ್ದು, ಈ ಹಿನ್ನೆಲೆಯಲ್ಲಿ ಅಟೋರಿಕ್ಷಾ ಪ್ರಯಾಣ ದರವನ್ನು ಕೂಡ ಏರಿಸಬೇಕೆಂದು ಸಿಐಟಿಯು ಸಂಯೋಜಿತ ಫೆಡರೇಷನ್ ಆಫ್ ಕರ್ನಾಟಕ ಅಟೋರಿಕ್ಷಾ ಡ್ರೈವರ್ಸ್ ಯೂನಿಯನ್(ರಿ) ದ.ಕ.ಜಿಲ್ಲಾ ಸಮಿತಿಯು ದ.ಕ. ಜಿಲ್ಲಾಡಳಿತವನ್ನು ಒತ್ತಾಯಿಸಿದೆ.

ಕಳೆದ 5 ವರ್ಷಗಳ ಹಿಂದೆ ಅಟೋರಿಕ್ಷಾ ಪ್ರಯಾಣದರವು ಪರಿಷ್ಕರಣೆಗೊಂಡಿದ್ದು, ಬಳಿಕ ಪೆಟ್ರೋಲ್ ಡೀಸೆಲ್ ದರವು ವಿಪರೀತವಾಗಿ ಏರಿಕೆ ಕಂಡಿದೆ. ಮಾತ್ರವಲ್ಲದೆ ವಾಹನಗಳ ಬಿಡಿಭಾಗಗಳ ದರ, ಇನ್ಸುರೆನ್ಸ್ ದರ, ತೆರಿಗೆಯೂ ಕೂಡ ತೀರಾ ಹೆಚ್ಚಳವಾಗಿದೆ. ಈ ಸಲವಂತೂ ಪೆಟ್ರೋಲ್ ಬೆಲೆ ರೂ.2.53, ಡೀಸೆಲ್ ಬೆಲೆ ರೂ. 2.43 ಹೆಚ್ಚಳವಾಗುವ ಮೂಲಕ ಬಡಪಾಯಿ ವಾಹನ ಚಾಲಕ ವರ್ಗಕ್ಕೆ ಭಾರೀ ತೊಂದರೆಯುಂಟಾಗಿದೆ. ಕಳೆದ ಹಲವಾರು ಬಾರಿ ಅಟೋರಿಕ್ಷಾ ಪ್ರಯಾಣದರವನ್ನು ಏರಿಸಬೇಕೆಂದು ಜಿಲ್ಲಾಡಳಿತಕ್ಕೆ ಮನವಿಯನ್ನು ಅರ್ಪಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ಆದರೆ ಈ ಬಾರಿಯಂತೂ ಅಟೋರಿಕ್ಷಾ ಚಾಲಕರು ಬದುಕಲು ಸಾಧ್ಯವಾಗಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಫೆಡರೇಶನ್ ಆಫ್ ಕರ್ನಾಟಕ ಅಟೋರಿಕ್ಷಾ ಡ್ರೈವರ್ಸ್ ಯೂನಿಯನ್ ಬಣ್ಣಿಸಿದೆ.

ಆದಷ್ಟು ಶೀಘ್ರದಲ್ಲಿ ಪ್ರಯಾಣದರವನ್ನು ಹೆಚ್ಚಿಸಲು ಜಿಲ್ಲಾಧಿಕಾರಿಗಳು ಮುಂದಾಗದಿದ್ದಲ್ಲಿ, ಎಲ್ಲಾ ಸಂಘಟನೆಗಳ ಸಹಕಾರದೊಂದಿಗೆ ದ.ಕ. ಜಿಲ್ಲೆಯಾದ್ಯಂತ ತೀವ್ರ ರೀತಿಯ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಫೆಡರೇಷನ್ ನ ದ.ಕ. ಜಿಲ್ಲಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಅನ್ಸಾರ್ ರವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿಯಿಂದ ಜನತಂತ್ರ ಬುಡಮೇಲು



ಕರ್ನಾಟಕದಲ್ಲಿ ಜನತಾಂತ್ರಿಕ ನಿಯಮಗಳನ್ನು ಬಿಜೆಪಿ ಬುಡಮೇಲು ಮಾಡುತ್ತಿರುವುದು ಮೋದಿ ಸರಕಾರದಡಿ ಪ್ರಜಾಪ್ರಭುತ್ವದ ಮೇಲೆ ನಡೆಯುತ್ತಿರುವ ವ್ಯಾಪಕ ದಾಳಿಯ ಭಾಗವಾಗಿದೆ. ಪ್ರಜಾಪ್ರಭುತ್ವ ಮತ್ತು ಜನತಾಂತ್ರಿಕ ಸಂಸ್ಥೆಗಳನ್ನು ರಕ್ಷಿಸುವುದು, ಚುನಾವಣೆ ಸುಧಾರಣೆಗಳು ಮತ್ತು ಪಕ್ಷಾಂತರಿ ಹಾಗೂ ಭ್ರಷ್ಟ ಜನಪ್ರತಿನಿಧಿಗಳಿಗೆ ಶಿಕ್ಷೆ ನೀಡುವುದು ಮುಂದಿನ ದಿನಗಳಲ್ಲಿ ದೇಶದ ಜನತಾಂತ್ರಿಕ ಶಕ್ತಿಗಳ ಕಾರ್ಯಸೂಚಿಯ ಆದ್ಯತೆಯಾಗಬೇಕು.



*** ಪ್ರಕಾಶ್ ಕಾರಟ್**

ಕಾಂಗ್ರೆಸ್, ಜನತಾ ದಳ (ಎಸ್)ದ 14 ಮತ್ತು ಮೈತ್ರಿಕೂಟಕ್ಕೆ ಬೆಂಬಲ ನೀಡುತ್ತಿದ್ದ ಇಬ್ಬರು ಪಕ್ಷೇತರ ಶಾಸಕರು– ಹೀಗೆ ಒಟ್ಟು 16 ಶಾಸಕರು ರಾಜಿನಾಮೆ ನೀಡುವುದರೊಂದಿಗೆ ಕರ್ನಾಟಕದ ರಾಜಕೀಯ ಬೆಳವಣಿಗೆಗಳು ಚರಮ ಸ್ಥಿತಿಯನ್ನು ತಲುಪಿವೆ. ಕುಮಾರಸ್ವಾಮಿ ಸರಕಾರವನ್ನು ಉರುಳಿಸಲು ಕಳೆದ ಒಂದು ವರ್ಷದಿಂದ ಬಿಜೆಪಿ ಹಲವು ಬಾರಿ ನಡೆಸಿದ ಪ್ರಯತ್ನಗಳ ನಂತರ ಈ ಬೆಳವಣಿಗೆ ನಡೆದಿದೆ. 2018ರ ವಿಧಾನಸಭೆ ಚುನಾವಣೆಯಲ್ಲಿ ತಾನು ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಬಹುಮತದಿಂದ ತನಗೆ ಸರಕಾರ ನಡೆಸಲಾಗದು ಎಂಬ ವಾಸ್ತವವನ್ನು ಜೀರ್ಣಿಸಿಕೊಳ್ಳಲು ಬಿಜೆಪಿಗೆ ಆಗುತ್ತಿಲ್ಲ. ಆಳುವ ಮೈತ್ರಿಕೂಟದ ಶಾಸಕರಿಗೆ ಆಮಿಷ ಒಡ್ಡಲು ಹಾಗೂ ಲಂಚ ನೀಡಲು ಬಿಜೆಪಿ ಯಾವುದೇ ಹಿಂಜರಿಕೆ ತೋರಿಲ್ಲ. ಕೆಲವು ವರ್ಷಗಳ ಹಿಂದೆ ತಾನು ಚಾಲ್ತಿಗೆ ತಂದ 'ಆಪರೇಷನ್ ಕಮಲ'ಕ್ಕೆ ಅದು ಮುಂದಾಗಿದೆ. ಚುನಾಯಿತ ಪ್ರತಿನಿಧಿಗಳಿಗೆ ಲಂಚ ನೀಡಿ ಹಾಗೂ ಸ್ಥಾನಮಾನದ ಆಮಿಷಗಳನ್ನೊಡ್ಡುವುದು ಹಾಗೂ ಚುನಾಯಿತ ಸರಕಾರವನ್ನು ಬುಡಮೇಲು ಮಾಡಲು ಅಪಾರ ಪ್ರಮಾಣದ ಸಂಪನ್ಮೂಲವನ್ನು ಬಳಕೆ ಮಾಡುವುದು ಬಿಜೆಪಿಯ ಚಾಳಿಯಾಗಿ ಬಿಟ್ಟಿದೆ. ಇದಕ್ಕೂ ಮೊದಲು ಅರುಣಾಚಲ ಪ್ರದೇಶ ಮತ್ತು ಗೋವಾದಲ್ಲಿ ಸರಕಾರಗಳನ್ನು ರಚಿಸಲಿಕ್ಕಾಗಿ ಅದು ಪಕ್ಷಾಂತರಗಳನ್ನು ನಡೆಸಿತ್ತು. ಇಂಥ ಕೀಳು ಮಟ್ಟದ ತಂತ್ರಗಳ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮಲಿನಗೊಳಿಸಲು ಮೋದಿ–ಷಾ ಜೋಡಿ ನೇರವಾಗಿ ಹೊಣೆಗಾರವಾಗಿದೆ.

ರಚನೆಯಾದಂದಿನಿಂದ ಯಾವುದೇ ತಾಳಮೇಳವಿಲ್ಲದ ಅಥವಾ ದಿಕ್ಕುದೆಸೆಯಿಲ್ಲದಂತೆ ವರ್ತಿಸುತ್ತಿರುವ ಕಾಂಗ್ರೆಸ್–ಜೆಡಿಎಸ್ ಅಸ್ಥಿರ ಸರಕಾರದ ಸನ್ನಿವೇಶವನ್ನು ಬಳಸಿಕೊಂಡು ಇಂಥ ಪಕ್ಷಾಂತರಗಳನ್ನು ಸಂಘಟಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಕಾಂಗ್ರೆಸ್ ನಾಯಕರ ಕಚ್ಚಾಟ ಮತ್ತು ಅದರ ಕೆಲವು ಅಧಿಕಾರದಾಹಿ ಶಾಸಕರ ಕುತಂತ್ರಗಳು ಕೂಡ ಪ್ರಸ್ತುತ ಸನ್ನಿವೇಶಕ್ಕೆ ಕೊಡುಗೆ ನೀಡಿವೆ.

ಕರ್ನಾಟಕದ ರಾಜಕೀಯದಲ್ಲಿನ ಈ ಅವನತಿಯು ಭಾರತೀಯ ರಾಜಕೀಯ ವ್ಯವಸ್ಥೆಯನ್ನು ಕಾಡುತ್ತಿರುವ ಇನ್ನೂ ಆಳವಾದ ರೋಗದ ಸೂಚನೆಯಾಗಿದೆ. ದೊಡ್ಡ ಹಣಕಾಸು ಮತ್ತು ನವ ಉದಾರವಾದಿ ಬಂಡವಾಳದ ಆಕ್ರಮಣವು ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಪಕ್ಷ ವ್ಯವಸ್ಥೆಯ ಸಾರವನ್ನೇ ನಾಶಮಾಡಿದೆ. ಆಯ್ಕೆಯಾಗುತ್ತಿರುವ ಹೆಚ್ಚೆಚ್ಚು ಶಾಸಕರು ರಿಯಲ್ ಎಸ್ಟೇಟ್, ಸಾರಾಯಿ ದಂಧೆ, ಕಂಟ್ರಾಕ್ಟ್ ಇತ್ಯಾದಿ ವ್ಯಾಪಾರಿ ಹಿತಾಸಕ್ತಿ ಹೊಂದಿರುವವರಾಗಿದ್ದಾರೆ ಅಥವಾ ಗ್ರಾಮೀಣ ಸಮಾಜದ ಶ್ರೀಮಂತ ವರ್ಗಗಳಿಗೆ ಸೇರಿದವರಾಗಿದ್ದಾರೆ. ಈ ಶಕ್ತಿಗಳಿಗೆ ಬಂಡವಾಳಶಾಹಿ ಪಕ್ಷಗಳ ಟಿಕೆಟ್ ಸಿಗುತ್ತದೆ. ಈ ಜನರಲ್ಲಿ ಯಾವುದೇ ತತ್ವ ಸಿದ್ಧಾಂತದ ಲವಲೇಷವೂ ಇರುವುದಿಲ್ಲ.


ಕರ್ನಾಟಕದಲ್ಲಿ ಶಾಸಕರ ಕುದುರೆ ವ್ಯಾಪಾರ ನಡೆದಂತೆ ಆಂಧ್ರ ಪ್ರದೇಶದಲ್ಲಿ ತೆಲುಗು ದೇಶಂ ಶಾಸಕರು ಮತ್ತು ಸಂಸತ್ ಸದಸ್ಯರು ಬಿಜೆಪಿಗೆ ಸೇರಿದ್ದನ್ನು ನಾವು ನೋಡಿದ್ದೇವೆ. ಪಕ್ಷಾಂತರ ಮಾಡಿದ ತೆಲುಗುದೇಶಂನ ಎಲ್ಲಾ ನಾಲ್ವರು ರಾಜ್ಯಸಭೆ ಎಂಪಿಗಳು ವ್ಯಾಪಾರೋದ್ಯಮಿಗಳು ಎನ್ನುವುದು ಗಮನಾರ್ಹ.

ಬಿಜೆಪಿ ರಾಜಕೀಯದಲ್ಲಿ ವ್ಯಾಪಾರವನ್ನು ಬೆರೆಸುವ ಈ ವಿದ್ಯಮಾನದ ಉತ್ತುಂಗವನ್ನು ಪ್ರತಿನಿಧಿಸುತ್ತದೆ. ಈ ಪಕ್ಷ ಕಾರ್ಪೊರೇಟ್‌ಗಳಿಂದ ಹೆಚ್ಚು ಅನುಕೂಲ ಪಡೆದ ಪಕ್ಷವಾಗಿದ್ದು ತನ್ನ ರಾಜಕೀಯ ಕುತಂತ್ರದಾಟಗಳಿಗೆ ಈ ಹಣವನ್ನು ಬಳಸಿಕೊಳ್ಳುತ್ತಿದೆ.

ಪಕ್ಷಾಂತರ ಮಾಡಿದ ಕರ್ನಾಟಕದ ಶಾಸಕರನ್ನು ಉದ್ಯಮಿ ಹಾಗೂ ಬಿಜೆಪಿ ನಾಯಕನಾಗಿರುವ ರಾಜ್ಯಸಭೆಯ ಸದಸ್ಯರೊಬ್ಬರ ಮಾಲಿಕತ್ವದ ಖಾಸಗಿ ಜೆಟ್ ಕಂಪೆನಿಯ ವಿಮಾನದಲ್ಲಿ ಮುಂಬಯಿಯ ಒಂದು ಪಂಚತಾರಾ ಹೋಟೇಲ್‌ಗೆ ಕರೆದುಕೊಂಡು ಹೋಗಿದ್ದು ಅಚ್ಚರಿಯ ಸಂಗತಿಯೇನೂ ಅಲ್ಲ.


ಕರ್ನಾಟಕದಲ್ಲಿ ಜನತಾಂತ್ರಿಕ ನಿಯಮಗಳನ್ನು ಬಿಜೆಪಿ ಬುಡಮೇಲು ಮಾಡುತ್ತಿರುವುದು ಮೋದಿ ಸರಕಾರದಡಿ ಪ್ರಜಾಪ್ರಭುತ್ವದ ಮೇಲೆ ನಡೆಯುತ್ತಿರುವ ವ್ಯಾಪಕ ದಾಳಿಯ ಭಾಗವಾಗಿದೆ. ಪ್ರಜಾಪ್ರಭುತ್ವ ಮತ್ತು ಜನತಾಂತ್ರಿಕ ಸಂಸ್ಥೆಗಳನ್ನು ರಕ್ಷಿಸುವುದು, ಚುನಾವಣೆ ಸುಧಾರಣೆಗಳು ಮತ್ತು ಪಕ್ಷಾಂತರಿ ಹಾಗೂ ಭ್ರಷ್ಟ ಜನಪ್ರತಿನಿಧಿಗಳಿಗೆ ಶಿಕ್ಷೆ ನೀಡುವುದು ಮುಂದಿನ ದಿನಗಳಲ್ಲಿ ದೇಶದ ಜನತಾಂತ್ರಿಕ ಶಕ್ತಿಗಳ ಕಾರ್ಯಸೂಚಿಯ ಆದ್ಯತೆಯಾಗಬೇಕು.

ಅನು: ವಿಶ್ವ



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

> ಕರ್ನಾಟಕದ ರಾಜಕೀಯದಲ್ಲಿನ ಈ ಅವನತಿಯು ಭಾರತೀಯ ರಾಜಕೀಯ ವ್ಯವಸ್ಥೆಯನ್ನು ಕಾಡುತ್ತಿರುವ ಇನ್ನೂ ಆಳವಾದ ರೋಗದ ಸೂಚನೆಯಾಗಿದೆ. ದೊಡ್ಡ ಹಣಕಾಸು ಮತ್ತು ನವ ಉದಾರವಾದಿ ಬಂಡವಾಳದ ಆಕ್ರಮಣವು ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಪಕ್ಷ ವ್ಯವಸ್ಥೆಯ ಸಾರವನ್ನೇ ನಾಶಮಾಡಿದೆ. ಆಯ್ಕೆಯಾಗುತ್ತಿರುವ ಹೆಚ್ಚೆಚ್ಚು ಶಾಸಕರು ರಿಯಲ್ ಎಸ್ಟೇಟ್, ಸಾರಾಯಿ ದಂಧೆ, ಕಂಟ್ರಾಕ್ಟ್ ಇತ್ಯಾದಿ ವ್ಯಾಪಾರಿ ಹಿತಾಸಕ್ತಿ ಹೊಂದಿರುವವರಾಗಿದ್ದಾರೆ ಅಥವಾ ಗ್ರಾಮೀಣ ಸಮಾಜದ ಶ್ರೀಮಂತ ವರ್ಗಗಳಿಗೆ ಸೇರಿದವರಾಗಿದ್ದಾರೆ. ಈ ಶಕ್ತಿಗಳಿಗೆ ಬಂಡವಾಳಶಾಹಿ ಪಕ್ಷಗಳ ಟಿಕೆಟ್ ಸಿಗುತ್ತದೆ. ಈ ಜನರಲ್ಲಿ ಯಾವುದೇ ತತ್ವ ಸಿದ್ಧಾಂತದ ಲವಲೇಷವೂ ಇರುವುದಿಲ್ಲ. ಕಾರ್ಪೊರೇಟ್‌ಗಳಿಂದ ಗರಿಷ್ಟ ಅನುಕೂಲ ಪಡೆದಿರುವ ಬಿಜೆಪಿ ರಾಜಕೀಯದಲ್ಲಿ ವ್ಯಾಪಾರವನ್ನು ಬೆರೆಸುವ ಈ ವಿದ್ಯಮಾನದ ಉತ್ತುಂಗವನ್ನು ಪ್ರತಿನಿಧಿಸುತ್ತದೆ.



ವ್ಯಂಗ್ಯಚಿತ್ರ: ಪಿ. ಮಹಮ್ಮದ್

ಅರಣ್ಯ ಕಾಯ್ದೆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು –ಅರಣ್ಯ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಪುಟ 2 ರಿಂದ

ಅಧಿಕಾರಶಾಹಿಗೆ ವಾರಂಟ್ ನೀಡದೆಯೇ ಬಂಧಿಸುವ, ಕಾನೂನು ಜಾರಿಗೊಳಿಸಲು ಶಸ್ತ್ರಾಸ್ತ್ರಗಳ ಬಳಕೆಗೂ ಲಂಗುಲಗಾಮಿಲ್ಲದ ಅಧಿಕಾರಗಳನ್ನು ಕೊಟ್ಟಿದೆ. ಪ್ರಸ್ತಾವಿತ 'ರಾಷ್ಟ್ರೀಯ ಅರಣ್ಯ ಮಂಡಳಿ'ಯಲ್ಲಿ ಸೇನಾಪಡೆಗಳ ಮುಖ್ಯಸ್ಥರನ್ನು ಒಬ್ಬ ಸದಸ್ಯರಾಗಿ ಸೂಚಿಸಿರುವುದು ಈ ದಮನಕಾರೀ ನಿಲುವಿನ ಸಂಕೇತವಾಗಿದೆ. ಬಹುಶಃ ಭಾರತದ ಸೇನಾಧಿಪತಿಗಳು ಈಗ ದೇಶದ ಗಡಿಗಳ ಬದಲು ಅರಣ್ಯಗಳನ್ನು 'ರಕ್ಷಿಸುವುದು' ಹೇಗೆ ಎಂಬ ಚರ್ಚೆಗೆ ಸಮಯ ಕೊಡಬೇಕಾಗಿದೆ ಎಂದು ಈ ಬಗ್ಗೆ ಬರೆಯುತ್ತ ಬೃಂದಾ ಅವರು ಗೇಲಿ ಮಾಡಿದ್ದಾರೆ.

ಇನ್ನೊಂದೆಡೆಯಲ್ಲಿ, ಅರಣ್ಯಗಳ ನಿರ್ವಹಣೆಗೆ, ಸಂರಕ್ಷಣೆಗೆ, ಕಾಯ್ದುಕೊಳ್ಳಲಿಕ್ಕೆ ಮತ್ತು ಬುಡಕಟ್ಟು ಹಕ್ಕುಗಳಿಗೆ ಎಷ್ಟೊಂದು ಅನಿವಾರ್ಯವಾದ ಗ್ರಾಮಸಭೆಗಳ, ಅದರಲ್ಲೂ ಬುಡಕಟ್ಟು ಪ್ರದೇಶಗಳಲ್ಲಿನ ಗ್ರಾಮಸಭೆಗಳ ಪಾತ್ರವನ್ನು ಅಳಿಸಿ ಬಿಡಲಾಗಿದೆ ಎಂಬುದನ್ನು ಎತ್ತಿ ತೋರುತ್ತ ಬೃಂದಾ ಕಾರಟ್ ಈ ತಿದ್ದುಪಡಿಗಳು ಕೇಂದ್ರೀಕರಣ, ವ್ಯಾಪಾರೀಕರಣ ಮತ್ತು ಅಪರಾಧೀಕರಣದ ಒಂದು ನೀಲನಕ್ಷೆ ಎಂದು ಟೀಕಿಸಿದ್ದಾರೆ. ಅರಣ್ಯ ಸಂರಕ್ಷಣೆ ಈ ತಿದ್ದುಪಡಿಗಳ ಘೋಷಿತ ಗುರಿ. ಆದರೆ ಇವು ಆ ಗುರಿಸಾಧನೆಗೆ ನೆರವಾಗುವುದಿಲ್ಲ. ತದ್ವಿರುದ್ಧವಾಗಿ, ಇವು ಅರಣ್ಯ ಹಕ್ಕುಗಳ ಕಾಯ್ದೆಯಲ್ಲಿ, 2006ರಲ್ಲಿ ತಿದ್ದುಪಡಿಗೊಂಡ ವನ್ಯ ಪ್ರಾಣಿಗಳ ರಕ್ಷಣಾ ಕಾಯ್ದೆಯಲ್ಲಿ, ಪರಿಶಿಷ್ಟ ಪ್ರದೇಶಗಳಿಗೆ ಪಂಚಾಯತ್ ವಿಸ್ತರಣೆ ಕಾಯ್ದೆ(ಪಿಎಇಎಸ್‌ಎಎ), ಭೂಸ್ವಾಧೀನ ಮತ್ತು ಮರುವಸತಿ ಕಾಯ್ದೆ,2013ರಲ್ಲಿ ಮಾತ್ರವಲ್ಲ, ಸಂವಿಧಾನದ ಶೆಡ್ಯೂಲ್ 5 ಮತ್ತು 6ರಲ್ಲಿ ಮಾನ್ಯ ಮಾಡಿರುವ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಈಗಿರುವ ಹಕ್ಕುಗಳನ್ನು ಅಳಿಸಿ ಹಾಕುತ್ತವೆ.

ಮೇಲೆ ಹೇಳಿದಂತೆ, ಈ ತಿದ್ದುಪಡಿಗಳು ಹೇಗೆ ಕೇಂದ್ರೀಕರಣ, ವ್ಯಾಪಾರೀಕರಣ ಮತ್ತು ಅಪರಾಧೀಕರಣದ ನೀಲನಕ್ಷೆ ಎಂಬುದಕ್ಕೆ ವಿವರಗಳನ್ನೂ ಈ ಪತ್ರ ಒಳಗೊಂಡಿದೆ. ಇನ್ನೂ ಗಮನಾರ್ಹ ಸಂಗತಿಯೆಂದರೆ, ಬುಡಕಟ್ಟು ಜನಗಳ ಹಕ್ಕುಗಳ ಪ್ರಶ್ನೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ ಎಂಬುದನ್ನು ಪ್ರಕಾಶ ಜಾವ್ಡೇಕರ್ ಅವರಿಗೆ ಬೃಂದಾ ಕಾರಟ್ ಈ ಪತ್ರದಲ್ಲಿ ನೆನಪಿಸಬೇಕಾಗಿ ಬಂದಿದೆ.

"ಆದ್ದರಿಂದ ಈ ತಿದ್ದುಪಡಿಗಳು, ಒಟ್ಟಿನಲ್ಲಿ, ಸಂವಿಧಾನಕ್ಕೆ, ಪ್ರಜಾಪ್ರಭುತ್ವಕ್ಕೆ ಮತ್ತು ನಿರ್ದಿಷ್ಟವಾಗಿ ಬುಡಕಟ್ಟು ಜನಗಳ ಹಕ್ಕುಗಳನ್ನು, ಒಟ್ಟಾರೆಯಾಗಿ ಪಾರಂಪರಿಕ ಅರಣ್ಯವಾಸಿಗಳ ಹಕ್ಕುಗಳನ್ನು ರಕ್ಷಿಸುವ ಕಾನೂನು ಚೌಕಟ್ಟಿಗೆ ವ್ಯತಿರಿಕ್ತವಾಗಿವೆ. ಅಲ್ಲದೆ, ಬುಡಕಟ್ಟು ಹಕ್ಕುಗಳು ತಮ್ಮ ಮಂತ್ರಾಲಯದ ಕಾರ್ಯವ್ಯಾಪ್ತಿಗೆ ಸೇರಿದ್ದಲ್ಲ, ಅವು ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವ್ಯಾಪ್ತಿಗೆ ಸೇರಿದವುಗಳು. ಆದರೂ ಈ ತಿದ್ದುಪಡಿಗಳ ಮೂಲಕ ತಮ್ಮ ಮಂತ್ರಾಲಯ ಬುಡಕಟ್ಟು ಹಕ್ಕುಗಳಿಗೆ ಸಂಬಂಧಪಟ್ಟ ಎಲ್ಲ ಶಾಸನಗಳನ್ನು ಮೀರಿ ನಿಲ್ಲಲು, ಅವನ್ನೆಲ್ಲ ಈ ಪ್ರಸ್ತಾವಿತ ಕಾಯ್ದೆಗೆ ಅಧೀನಗೊಳಿಸಲು ಪ್ರಯತ್ನಿಸುತ್ತಿದೆ. ಇದು ಯಾವುದೇ ರೀತಿಯಲ್ಲಿ ಒಪ್ಪತಕ್ಕಂತದ್ದಲ್ಲ" ಎಂದು ಬೃಂದಾ ಕಾರಟ್ ಪ್ರಕಾಶ ಜಾವ್ಡೇಕರ್ ಅವರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಫ್ಯಾಸಿಸಂ ಎಂಬ ಕ್ರೌರ್ಯ ಅಸ್ತಿತ್ವಕ್ಕೆ ಬಂದ ಹಿನ್ನೆಲೆ ಮತ್ತು ಸ್ವರೂಪ

ಜುಲೈ 9 ರಂದು ಬೆಂಗಳೂರು ಇಎಂಎಸ್ ಭವನದಲ್ಲಿ ನಡೆದ ಮಾರ್ಕ್ಸ್‌ವಾದಿ ಅಧ್ಯಯನ ವೃತ್ತದ ಉದ್ಘಾಟನಾ ಸಮಾರಂಭದಲ್ಲಿ ಜಿ.ಎನ್. ನಾಗರಾಜ ಮಾಡಿದ ಭಾಷಣದ ಸಾರಾಂಶ

ಇಂದು ಭಾರತದಲ್ಲಿ ಪೂರ್ಣ ಜೋಶ್‌ನೊಂದಿಗೆ ಫ್ಯಾಸಿಸ್ಟ್ ಸಿದ್ಧಾಂತದ ಆರೆಸ್ಸೆಸ್ ಸ್ಥಾಪಿಸಿದ ಬಿಜೆಪಿ ಮೋದಿ ಮೋದಿ ಎಂಬ ಕೂಗಿನೊಂದಿಗೆ ಅಧಿಕಾರಕ್ಕೆ ಬಂದಿದೆ.

ಹಲವು ಫ್ಯಾಸಿಸ್ಟ್ ರೂಪದ ವಿಧಾನಗಳನ್ನು ಅನುಸರಿಸುತ್ತಿರುವ ಈ ಸರ್ಕಾರ ಮತ್ತು ಆರೆಸ್ಸೆಸ್‌ನ ಉರವಣಿಗೆಯ ಹಿನ್ನೆಲೆಯಲ್ಲಿ

ಫ್ಯಾಸಿಸಂ ಎಂದರೇನು? ಅದರ ಪ್ರಭುತ್ವದ ಸ್ವರೂಪವೇನು? ಅದು ಜರ್ಮನಿ, ಇಟಲಿಗಳಲ್ಲಿ ಅಸ್ತಿತ್ವಕ್ಕೆ ಬಂದ ಹಿನ್ನೆಲೆ ಏನು? ನಮ್ಮ ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಮತ್ತು ಸರ್ಕಾರವನ್ನು ವಿಶ್ಲೇಷಿಸುವ ಬಗೆ ಹೇಗೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಜರೂರಿದೆ. ದೇಶದ ಪ್ರತಿಗಾಮಿ ಬೆಳವಣಿಗೆಗಳ ವಿರುದ್ಧ ಕಮ್ಯೂನಿಸ್ಟರ ಸಂಘರ್ಷದ ಸ್ವರೂಪವನ್ನು, ಎಲ್ಲಾ ಪ್ರಗತಿಪರರ, ಪ್ರಜಾಸತ್ತಾವಾದಿಗಳ ನಡೆಯನ್ನು ನಿರ್ಧರಿಸಲು ಈ ಅರಿವು ಬಹು ಮುಖ್ಯ.

ಫ್ಯಾಸಿಸ್ಟ್ ನಾಜಿಗಳ ಪ್ರಭುತ್ವದ ಸ್ಥಾಪನೆಯ ಹಿನ್ನೆಲೆ

ಭಾರತದಂತಹ ಯಾವುದೇ ಪ್ರಜಾಪ್ರಭುತ್ವ ಕಾರ್ಮಿಕ ವರ್ಗ ಮತ್ತಿತರ ದುಡಿಯುವ ಸಮುದಾಯವನ್ನು ಶೋಷಣೆ ಮಾಡಲು, ಅದರ ವಿರುದ್ಧ ಪ್ರತಿಭಟಿಸಿದರೆ ದಮನ ಮಾಡಲು ಬಂಡವಾಳಶಾಹಿಗಳು ಬಳಸುವ ಸಾಧನ. ಮಾರ್ಕ್ಸ್‌ರವರು ವಿವರಿಸಿರುವಂತೆ ಪ್ರಜಾಪ್ರಭುತ್ವದ ಮರೆಯಲ್ಲಿ ಅಡಗಿದ ಬಂಡವಾಳಶಾಹಿಗಳ ಸರ್ವಾಧಿಕಾರ. ಶೋಷಣೆ, ಪ್ರತಿಭಟನೆ, ದಮನ ಈ ಪ್ರಭುತ್ವದಲ್ಲಿ ನಿರಂತರ. ಆದರೆ ಚುನಾವಣೆಗಳು, ಸಂಸತ್ತು ಹಾಗೂ ಕೆಲ ಜನಪ್ರಿಯ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಜನರನ್ನು ಭ್ರಮೆಗೊಳಪಡಿಸಲಾಗುತ್ತದೆ.

ಬಂಡವಾಳಶಾಹಿ ವ್ಯವಸ್ಥೆಯ ಅಂತರ್ಗತವಾದ ಆರ್ಥಿಕ ಬಿಕ್ಕಟ್ಟುಗಳು ಬಂಡವಾಳಶಾಹಿ ಕೈಗಾರಿಕೆ, ವಾಣಿಜ್ಯಗಳನ್ನು ಬಹು ದೊಡ್ಡ ನಷ್ಟಕ್ಕೆ ದೂಡುತ್ತವೆ. ಆಗ ತಮ್ಮ ನಷ್ಟವನ್ನು ತುಂಬಿಕೊಳ್ಳಲು ಬಂಡವಾಳಶಾಹಿಗಳು ಕಾರ್ಮಿಕ, ರೈತ ಮತ್ತಿತರ ದುಡಿಯುವ ವರ್ಗದ ಮೇಲಿನ ಶೋಷಣೆಯನ್ನು ತೀವ್ರಗೊಳಿಸುತ್ತದೆ. ಇದನ್ನು ತಡೆಯಲು ಕಾರ್ಮಿಕರು ಸಂಘರ್ಷಕ್ಕಿಳಿಯುತ್ತಾರೆ. ಈ ವರ್ಗ ಸಂಘರ್ಷ ಕೆಲವೆಡೆಗಳಲ್ಲಿ ತಾರಕಕ್ಕೇರಿ ಬಂಡವಾಳಶಾಹಿಯನ್ನು ಅಧಿಕಾರದಿಂದ ಕಿತ್ತೊಗೆದು ಕಾರ್ಮಿಕ ವರ್ಗ ಅಧಿಕಾರಕ್ಕೆ ಬರುವ ಅವಕಾಶ ಬರುತ್ತದೆ. ಮೊದಲ ಮಹಾಯುದ್ಧದ ನಡುವೆಯೇ ಕಾರ್ಮಿಕ ವರ್ಗದ ಕ್ರಾಂತಿ ರಷ್ಯದಲ್ಲಿ ಸಂಭವಿಸಿತು. ಇದು ಜಗತ್ತಿನ ಬಂಡವಾಳಶಾಹಿ ವರ್ಗದಲ್ಲಿ ಆತಂಕ, ಕ್ರೋಧಗಳನ್ನು ಉಂಟು ಮಾಡಿತು. ಮೊದಲ ಮಹಾಯುದ್ಧ ಸಮಯದ ಬೆಲೆ ಏರಿಕೆ, ವೇತನಗಳ ಕಡಿತಗಳಿಂದ ಕಂಗೆಟ್ಟ ಜರ್ಮನಿ, ಹಂಗರಿಗಳಲ್ಲಿ ಕಾರ್ಮಿಕರು ಕ್ರಾಂತಿ ಮಾಡುವ ಹಂತ ಮುಟ್ಟಿದರು.

ಆಗ ಜಗತ್ತಿನ ಬೃಹತ್ ಕಾರ್ಪೊರೇಟ್ ವರ್ಗ ಮತ್ತು ಜರ್ಮನಿಯ ಬಂಡವಾಳಶಾಹಿ ವರ್ಗ ಈ ಕ್ರಾಂತಿಗಳನ್ನು, ಸೇನಾಪಡೆಗಳನ್ನು ಮತ್ತು ಅರೆ ಮಿಲಿಟರಿ ಗೂಂಡಾ ಪಡೆಗಳನ್ನು ಉಪಯೋಗಿಸಿ ಕ್ರೂರವಾಗಿ ದಮನ ಮಾಡಿತು. ಇಂತಹ ಕ್ರಾಂತಿಕಾರಿ ಕಾರ್ಮಿಕ ಚಳುವಳಿಯ ನೆಲೆಯಾದ ಬವೇರಿಯಾದಲ್ಲಿಯೇ ಹಿಟ್ಲರನ ನಾಜಿ ಪಡೆಯ ಬೆಳವಣಿಗೆ ಆರಂಭವಾಗಿದ್ದು. ಕಾರ್ಮಿಕ ಕ್ರಾಂತಿಯನ್ನು ತಡೆಗಟ್ಟಲು ಬಂಡವಾಳಶಾಹಿ ವರ್ಗ, ಕಾರ್ಮಿಕ ವರ್ಗ, ಯಹೂದಿಗಳ ವಿರುದ್ಧ ದ್ವೇಷವನ್ನು ಕಾರುತ್ತಾ ಜನರನ್ನು ಉದ್ರೇಕಗೊಳಿಸುತ್ತಿದ್ದ ಹಿಟ್ಲರನಿಗೆ ಬೆಂಬಲ ನೀಡಿದರು.

ಕಾರ್ಮಿಕರ ಜೊತೆಗೆ ಬದುಕಿನ ಸಂಕಷ್ಟಗಳನ್ನು ಅನುಭವಿಸುತ್ತಿರುವ ಕೆಳ ಮಧ್ಯಮ ವರ್ಗ, ರೈತಾಪಿ ಸಮುದಾಯಗಳು ಕಾರ್ಮಿಕರಿಗೆ ಬೆಂಬಲ



ನೀಡದಂತೆ ತಮ್ಮ ಹಿಂಬಾಲಕರಾಗುವಂತೆ ಸೆಳೆಯುವುದು ಬಂಡವಾಳಶಾಹಿಗಳ ತಂತ್ರವಾಗಿತ್ತು. ಅದರಲ್ಲೂ ನಿರುದ್ಯೋಗ, ಅಭದ್ರ ಜೀವನದಿಂದ ತೊಳಲಾಡುತ್ತಿದ್ದ ಯುವಕರನ್ನು ಬೀದಿ ಬೀದಿಗಳಲ್ಲಿ ಗದ್ದಲ, ಗಲಭೆಗಳನ್ನೆಬ್ಬಿಸುತ್ತಾ ಎಂತಹುದಾದರೂ ನಿರಂತರ ಚಟುವಟಿಕೆಗಳ ಮೂಲಕ ಆಕರ್ಷಿಸಿ ಅವರನ್ನು ಗೂಂಡಾ ಪಡೆಗಳನ್ನಾಗಿ ಮಾಡಿದರು.

ಹೀಗೆ ಮೊದಲ ಮಹಾಯುದ್ಧದ ನಂತರದ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಕಾರ್ಮಿಕ ಕ್ರಾಂತಿಯನ್ನು ತಡೆಗಟ್ಟಲು ಆರಂಭವಾದ ನಾಜೀ ಪಡೆ 1928–33 ರ ನಡುವಣ ವಿಶ್ವದಾದ್ಯಂತದ ಆರ್ಥಿಕ ಮಹಾ ಕುಸಿತದ ಸಮಯದಲ್ಲಿ ಹೆಚ್ಚಿದ ಜನರ ಬದುಕಿನ ಸಂಕಟಗಳ ಸಮಯದಲ್ಲಿ ಬೃಹತ್ತಾಗಿ ಬೆಳೆಯಿತು. ಕಾರ್ಮಿಕ ಚಳುವಳಿಯ, ಮೇ ದಿನಾಚರಣೆಗಳ ಮೇಲೆ ಒಂದು ಕಡೆ, ಯಹೂದಿಗಳ ಮೇಲೆ ಮತ್ತೊಂದು ಕಡೆ ಕ್ರೂರ ಧಾಳಿಗಳನ್ನು ಮಾಡುತ್ತಾ ಬೆಳೆಯುತ್ತಿದ್ದ ನಾಜಿ ಪಕ್ಷ ಬೆಳೆಯಿತು. ರಫ್ತು ಮಾರುಕಟ್ಟೆ ಕುಸಿದ ಈ ಆರ್ಥಿಕ ಕುಸಿತದ ಸಂದರ್ಭದಲ್ಲಿ ಯುದ್ಧಕೋರತನದ ನೀತಿಯಿಂದ ಶಸ್ತ್ರಾಸ್ತ್ರಗಳ ತಯಾರಿಕೆಯ ಮೂಲಕ ತಮ್ಮ ದುರ್ಲಾಭ ಬೆಳೆಸಿಕೊಳ್ಳಲು

ಜರ್ಮನಿಯ ಬೃಹತ್ ಕಾರ್ಪೊರೇಟ್‌ಗಳು ಯುದ್ಧ ದಾಹಿ ನಾಜಿಗಳಿಗೆ ಹಣದ ಹೊಳೆಯಿತು, ಪತ್ರಿಕೆಗಳ ಪ್ರಚಾರದ ಬೆಂಬಲ ದೊರಕಿತು. ನಾಜಿ ಪಕ್ಷ ಹಿಟ್ಲರನ ನೇತೃತ್ವದಲ್ಲಿ ಜರ್ಮನಿಯ ಸಂಸತ್ತಿನಲ್ಲಿ ಅತಿ ದೊಡ್ಡ ಪಕ್ಷವಾಗಿ ಗೆದ್ದು ಬಂದು ಅಧಿಕಾರ ಹಿಡಿಯಿತು.

ಅಧಿಕಾರಕ್ಕೆ ಬಂದ ಕೂಡಲೇ ಕಮ್ಯೂನಿಸ್ಟರ. ಬಗ್ಗೆ ಜನರಲ್ಲಿ ದ್ವೇಷ ಹುಟ್ಟಿಸಲು ಸಂಸತ್ತಿನ ಮೇಲೆ ಬೆಂಕಿ ಹಾಕಿದರೆಂದು ಸುಳ್ಳು ಕೇಸು ದಾಖಲಿಸಿ ಬಹು ದೊಡ್ಡ ಅಪಪ್ರಚಾರ ಮಾಡಲಾಯಿತು. ಮರುದಿನವೇ ಇಡೀ ದೇಶದ ಕಮ್ಯೂನಿಸ್ಟ್ ಪಕ್ಷದ ಕಚೇರಿಗಳ ಮೇಲೆ ಧಾಳಿ ನಡೆಸಿ ಕಚೇರಿಗಳನ್ನು ನಾಶ ಮಾಡಲಾಯಿತು. ಮೇ ದಿನದಂದು ಇಡೀ ದೇಶದೆಲ್ಲೆಡೆ ಕಾರ್ಮಿಕರ ಮೆರವಣಿಗೆಗಳ ಮೇಲೆ, ಕಾರ್ಮಿಕ ಸಂಘಗಳ ಕಚೇರಿಗಳ ಮೇಲೆ ಧಾಳಿ ಮಾಡಲಾಯಿತು. ಸಾವಿರಾರು ಜನರ ಕೊಲೆ, ಲಕ್ಷಾಂತರ ಜನರ ಬಂಧನ ಸತ್ರಗಳು ನಡೆದವು. ನಂತರ ದಶಕಗಟ್ಟಲೆ ದೇಶವನ್ನಾಳುತ್ತಿದ್ದ ಪ್ರಮುಖ ಪಕ್ಷಗಳನ್ನೆಲ್ಲಾ ವಿಸರ್ಜಿಸಲಾಯಿತು.

ದಶಲಕ್ಷಗಟ್ಟಲೆ ಇದ್ದ ಯಹೂದಿಗಳ ನಾಗರಿಕತ್ವವನ್ನು ರದ್ದು ಪಡಿಸಲಾಯಿತು. ನಾಜಿ ಗೂಂಡಾಗಳು ಅವರ ಮನೆ, ಆಸ್ತಿ, ಉದ್ಯಮಗಳ ಮೇಲೆ ಧಾಳಿ ಮಾಡಿ ವಶಪಡಿಸಿಕೊಳ್ಳಲಾಯಿತು. ಒಂದೇ ಪ್ರದೇಶದಲ್ಲಿ ವಾಸ ಮಾಡುವಂತೆ ಎಳೆತರಲಾಯಿತು. ಮುಂದೆ ಅವರನ್ನು ಕಾನ್ಸೆಂಟ್ರೇಷನ್ ಕ್ಯಾಂಪ್‌ಗಳಿಗೆ ತಳ್ಳಿ ಅಮಾನುಷ ಹಿಂಸೆಗೊಳಪಡಿಸಿ ಲಕ್ಷಾಂತರ ಜನರನ್ನು ಮಹಿಳೆ ಮಕ್ಕಳೆನ್ನದೆ ಕೊಲ್ಲಲಾಯಿತು.

ಇಡೀ ಯುರೋಪಿನ ಮೇಲೆ ಯುದ್ಧ ಸಾರಿ ಅದರಲ್ಲಿಯೂ ಹಲವು ಲಕ್ಷ ಜನರ ಸಾವು ಮತ್ತೆ ಹತ್ತಾರು ಲಕ್ಷ ಜನರ ನೋವುಗಳಿಗೆ ಕಾರಣವಾಯಿತು.

ಫ್ಯಾಸಿಸ್ಟ್ ಪ್ರಭುತ್ವದ ಸ್ವರೂಪ

ಫ್ಯಾಸಿಸ್ಟ್ ಪ್ರಭುತ್ವ ಸ್ಥಾಪನೆಯಾದ ರೀತಿ ಮತ್ತು ಅನುಸರಿಸಿದ ಪ್ರಜಾಪ್ರಭುತ್ವ ನಾಶಕ ಮತ್ತು ಕ್ರೌರ್ಯದ ಆಡಳಿತ ವಿಧಾನಗಳ ವಿವರಣೆ ಫ್ಯಾಸಿಸ್ಟ್ ಪ್ರಭುತ್ವದ ಸ್ವರೂಪದ ಪರಿಚಯವಾಗಿದೆ. ಅದನ್ನು ಬಹಳ ಸ್ಪಷ್ಟವಾಗಿ ಸಾಮಾಜಿಕ ಮತ್ತು ಅ ರಚನೆಯನ್ನು ವಿಶ್ಲೇಷಣೆ ಮಾಡಿ ವಿವರಿಸಿದ್ದು ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಮಹಾ ಸಭೆಗಳು. ಅದರ ಕಾರ್ಯದರ್ಶಿಯಾಗಿದ್ದ ಬಲ್ಗೇರಿಯಾದ ಮಹಾನ್ ಕ್ರಾಂತಿಕಾರಿ ದಿಮಿತ್ರೋವ್‌ರವರ ಭಾಷಣ, ಬರಹಗಳ ಸಂಗ್ರಹದ ಮೂಲಕ ಅಧ್ಯಯನ ಮಾಡಬಹುದು. ಇಟಲಿಯ ಕಮ್ಯೂನಿಸ್ಟ್ ನಾಯಕ ಟೊಗ್ಲಿಯಾಟಿಯವರು ಈ ಬಗ್ಗೆ ನೀಡಿದ ಉಪನ್ಯಾಸಗಳು ಕೂಡಾ ಅಧ್ಯಯನ ಯೋಗ್ಯ.

ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ವ್ಯಾಖ್ಯೆ ಅಥವಾ ವಿವರಣೆಯಂತೆ

ಫ್ಯಾಸಿಸಂ ಎಂದರೆ
"ಅತ್ಯಂತ ಪ್ರತಿಗಾಮಿ,
ಅತ್ಯಂತ ಆಕ್ರಮಣಶೀಲವಾದ
ಅತ್ಯಂತ ಸಾಮ್ರಾಜ್ಯಶಾಹಿಯಾದ
ಹಣಕಾಸು ಬಂಡವಾಳದ



ಬಹಿರಂಗ, ಭಯೋತ್ಪಾದಕ, ಸರ್ವಾಧಿಕಾರ.

ರಾಷ್ಟ್ರಾಂಧತೆ, ಕ್ರೂರ ಆಕ್ರಮಣಶೀಲತೆ, ರಾಜಕೀಯ ಗೂಂಡಾಗಿರಿ, ಕಾರ್ಮಿಕ ವರ್ಗಕ್ಕೆ, ರೈತಾಪಿ, ಪುಟ್ಟ ಬಂಡವಾಳಶಾಹಿ, ಬುದ್ಧಿ ಜೀವಿ ಸಮುದಾಯದ ಕ್ರಾಂತಿಕಾರಿಗಳ ಮೇಲೆ ಕ್ರೂರ ಹಿಂಸೆ ಇದರ ಪ್ರಧಾನ ಲಕ್ಷಣ.

ಎಲ್ಲಾ ರಾಜಕೀಯ ಪಕ್ಷಗಳು, ಪ್ರಜಾಸತ್ತಾತ್ಮಕ ಸ್ವತಂತ್ರ ಸಂಘಟನೆಗಳ ದಮನ ಮತ್ತೊಂದು ಲಕ್ಷಣ.

ಪುಟ್ಟ ಬಂಡವಾಳಶಾಹಿ ಮಧ್ಯಮವರ್ಗವನ್ನು ಸೆಳೆದುಕೊಳ್ಳಲು ಭರವಸೆಗಳ ಮಹಾಪೂರ ಹರಿಸುವ ಬುರುಗು ಭಾಷಣಗಳು ಇನ್ನೊಂದು ಲಕ್ಷಣ.

ಫ್ಯಾಸಿಸ್ಟ್ ಪ್ರಭುತ್ವವೆಂದರೆ ಒಂದು ಪಕ್ಷ ಸೋತು ಮತ್ತೊಂದು ಪಕ್ಷದ ಆಡಳಿತ ಬಂದಂತಲ್ಲ. ಅದು ಆಳುವ ವರ್ಗದ ದಮನಕಾರಿ ಪ್ರಭುತ್ವದ ಜಾಗದಲ್ಲಿ ಮತ್ತೊಂದು ರೀತಿಯ ದಮನಕಾರಿ ಪ್ರಭುತ್ವ ಅಧಿಕಾರ ಆಕ್ರಮಿಸಿಕೊಂಡಂತೆ. ಬಂಡವಾಳಶಾಹಿ ಪ್ರಜಾಪ್ರಭುತ್ವದ ಬದಲಾಗಿ ಭಯೋತ್ಪಾದಕ ದಮನಕಾರಿ ಸರ್ವಾಧಿಕಾರಿ ಆಡಳಿತ ಅಧಿಕಾರಕ್ಕೆ ಬಂದಂತೆ.

ಬೇರೆಲ್ಲಾ ಪಕ್ಷಗಳ ಮೇಲೆ ಕೆಂಡ ಕಾರುತ್ತಾ ಅವುಗಳೊಂದಿಗೆ ತೀವ್ರ, ಅವಶ್ಯವಾದರೆ ಹಿಂಸಾತ್ಮಕ ಧಾಳಿಗಳ ಮೂಲಕ ಅವುಗಳನ್ನು ದಮನ ಮಾಡಿ ಅಧಿಕಾರ ಮಾಡುವ ಫ್ಯಾಸಿಸಂ ಮೇಲಿನ ಲಕ್ಷಣದ ಪರಿಣಾಮ. ಇತರ ಸ್ಥಾಪಿತ ಬಂಡವಾಳಶಾಹಿ ಸರ್ಕಾರಗಳ ಆಡಳಿತ, ಭ್ರಷ್ಟಾಚಾರಗಳಿಂದ ಬೇಸತ್ತ ಜನರನ್ನು ಸೆಳೆಯಲು ಅವುಗಳ ಮೇಲೆ ವಿಷಕಾರುತ್ತದೆ. ವಿವಿಧ ಜನ ಸಮುದಾಯಗಳ ತಕ್ಷಣದ ಅಗತ್ಯಗಳನ್ನು ಸಮಸ್ಯೆಗಳನ್ನು ಪರಿಹರಿಸುತ್ತೇವೆಂದು ಯಾವ ಮುಜುಗತರವಿಲ್ಲದೆ ವಿಪುಲ ಭರವಸೆಗಳನ್ನು ನೀಡುತ್ತದೆ.

ಕಾರ್ಮಿಕ ವರ್ಗದ ಒಗ್ಗಟ್ಟಿನ ದೃಢ, ಸಮರಧೀರ ಹೋರಾಟಗಳಿಂದ ಮಾತ್ರ ಇತರ ಜನ ಸಮುದಾಯವನ್ನು ಸೆಳೆದು ಫ್ಯಾಸಿಸಂನ ಬೆಳವಣಿಗೆಯನ್ನು ತಡೆಯಬಹುದು. ಕಾರ್ಮಿಕ ವರ್ಗ ರೈತಾಪಿ ಜನರ ಬಗ್ಗೆ, ನಗರಗಳ ಮಧ್ಯಮ ವರ್ಗಗಳ ಬ, ಅವರನ್ನು ತಾಳ್ಮೆ ಸಮಾಧಾನಗಳಿಂದ ಒಲಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಅದೇ ಸಮಯದಲ್ಲಿ ಫ್ಯಾಸಿಸ್ಟ್ ಪ್ರಭುತ್ವ ಅಧಿಕಾರಕ್ಕೆ ಒಮ್ಮೆಲೇ ಬರುವುದಿಲ್ಲ. ಹಲವು ಪೂರ್ವ ಬಾವಿ ಹಂತಗಳ ಮೂಲಕ, ಹಲವು ಪ್ರತಿಗಾಮಿ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ಮೂಲಕ ತನ್ನ ಅಧಿಕಾರವನ್ನು ಸ್ಥಾಪಿಸುತ್ತದೆ. ಈ ಹಂತಗಳಲ್ಲಿಯೇ ಪ್ರತಿಗಾಮಿ ಕ್ರಮಗಳ ವಿರುದ್ಧ ಹೋರಾಡುವ ಮೂಲಕ ಫ್ಯಾಸಿಸ್ಟ್ ಪ್ರಭುತ್ವ ಸ್ಥಾಪನೆಯನ್ನು ತಡೆಗಟ್ಟಬಹುದು.

ಫ್ಯಾಸಿಸಂನ ಬೆಳವಣಿಗೆಯನ್ನು ತಡೆಗಟ್ಟಲು ಬಲವಾದ ಕ್ರಾಂತಿಕಾರಿ ಪಕ್ಷವೊಂದು ಈ ಹೋರಾಟಗಳಿಗೆ ನೇತೃತ್ವ ನೀಡಬೇಕಾದ ಅಗತ್ಯ ಇದೆ.

ಕಾರ್ಮಿಕ ವರ್ಗ ಸಮಯಕ್ಕೆ ತಕ್ಕ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಫ್ಯಾಸಿಸ್ಟ್ ಶಕ್ತಿಗಳು ಮೇಲುಗೈ ಸಾಧಿಸಲು ಅವಕಾಶ ನೀಡಬಾರದು.

ಫ್ಯಾಸಿಸ್ಟ್ ಪ್ರಭುತ್ವ ಸ್ಥಾಪನೆಯಾಯಿತು ಎಂದ ಕೂಡಲೇ ಖಾಯಂ ಆಗಿ ಅಧಿಕಾರದಲ್ಲಿ ಉಳಿಯುತ್ತದೆ ಎಂದೇನಲ್ಲ. ಫ್ಯಾಸಿಸ್ಟ್ ಪ್ರಭುತ್ವ ಬಹಳ ಅಸ್ಥಿರವಾದ ಆಡಳಿತ. ಜನ ಸಮುದಾಯದ ಮೇಲೆ ಕ್ರೂರ ದಬ್ಬಾಳಿಕೆ ಹಲವು ಜನ ಸಮುದಾಯಗಳ ಬೆಂಬಲವನ್ನು ಕಳೆದುಕೊಳ್ಳುತ್ತದೆ. ತೀವ್ರ, ವ್ಯಾಪಕ ಪ್ರತಿಭಟನೆಗಳಿಗೆ ಕಾರಣವಾಗುತ್ತದೆ.

ಬಂಡವಾಳಶಾಹಿ ವರ್ಗದಲ್ಲಿಯೂ ಒಂದು ಬೃಹತ್ ಆದರೆ ಸಂಖ್ಯೆಯಲ್ಲಿ ಸಣ್ಣ ವಿಭಾಗದ ಮೇಲೆ ಅವಲಂಬಿತವಾದ ಅಧಿಕಾರ ಬಬಂಡವಾಳಶಾಹಿ ವರ್ಗದ ಬೆಂಬಲವನ್ನೂ ಕಳೆದುಕೊಳ್ಳುತ್ತದೆ. ಕಾರ್ಮಿಕ ವರ್ಗ ಬಂಡವಾಳಶಾಹಿಗಳ ನಡುವಣ ವೈರುಧ್ಯದ ಬೆಳವಣಿಗೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕಾಗುತ್ತದೆ.

ಹಾಗೆಂದ ಕೂಡಲೇ ಫ್ಯಾಸಿಸ್ಟ್ ಪ್ರಭುತ್ವವೊಂದು ತನ್ನಿಂದ ತಾನೇ ಉದುರಿ ಹೋಗುತ್ತದೆಂದು ಅರ್ಥವಲ್ಲ.ಮೇಲೆ ಹೇಳಿದಂತೆ ಕಾರ್ಮಿಕ ವರ್ಗದ ಒಗ್ಗಟ್ಟಿನ ಸಮರಧೀರ ಹೋರಾಟ ಮತ್ತು ಇತರ ಸಮುದಾಯಗಳ ಬೆಂಬಲವನ್ನು ಪಡೆಯುವುದರಿಂದ ಮಾತ್ರ ಸಾಧ್ಯ. ■

ಭಾರೀ ಜನಾದೇಶ ಪಡೆದ ಮೇಲೆ ಮತ್ತೆ ಕಾರ್ಮಿಕರಿಗೆ, ರೈತರಿಗೆ ವಿಶ್ವಾಸಘಾತ ಮಾಡಿರುವ ಬಜೆಟ್

ಜನಸಾಮಾನ್ಯರಿಮದ ನಿರೀಕ್ಷೆಗೂ ಮೀರಿ ಭಾರೀ ಜನಾದೇಶ ಪಡೆದಿರುವ ಮೋದಿ ನೇತೃತ್ವದ ಎರಡನೇ ಸರಕಾರವಾದರೂ ಅದಕ್ಕೆ ಪ್ರತಿಯಾಗಿ ಜನಸಾಮಾನ್ಯರ, ಈ ದೇಶದ ಬಹುಸಂಖ್ಯಾತ ದುಡಿಯುವ ಜನಗಳ ಹಿತಸಾಧನೆಯತ್ತ ಹೆಜ್ಜೆಗಳನ್ನಿಡಬಹುದು ಎಂದು ಕೆಲವರಾದರೂ ನಿರೀಕ್ಷಿಸಿದ್ದರು. ಆದರೆ ಈ ಸರಕಾರದ ಮೊದಲ ಬಜೆಟ್ ಅದನ್ನೂ ಹುಸಿಗೊಳಿಸಿದೆ. ಈ ಬಜೆಟ್ ದುಡಿಯುವ ಜನಗಳಿಗೆ ಏನು ಮಾಡಿದೆ, ಏನು ಮಾಡಿಲ್ಲ ಎಂಬ ಬಗ್ಗೆ ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಮತ್ತು ಅತಿದೊಡ್ಡ ರೈತ ಸಂಘಟನೆ ಎಐಕೆಎಸ್ ಈ ಬಜೆಟ್ ಕುರಿತಂತೆ ಮಾಡಿರುವ ವಿಶ್ಲೇಷಣೆಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡಲಾಗಿದೆ.



ಚಿತ್ರ:ದೇಶಾಭಿಮಾನಿ

ಉದ್ಯಮಿಗಳ ವ್ಯಾಪಾರ ಸುಗಮತೆಗಾಗಿಯೇ ಎಲ್ಲ ದುಡಿಮೆಗಾರರ ಬದುಕಿನ ಸುಗಮತೆಗಾಗಿ ಅಲ್ಲ –ಸಿಐಟಿಯು

ಕೇಂದ್ರ ಬಿಜೆಪಿ ಸರಕಾರದ ಪರವಾಗಿ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಜುಲೈ 5ರಂದು ಮಂಡಿಸಿರುವ 2019–20ರ ಕೇಂದ್ರ ಬಜೆಟ್ ಜನಸಮೂಹಗಳಿಗೆ ಆಶ್ವಾಸನೆಗಳಿಂದ ತುಂಬಿರುವ, ಆದರೆ ಅವನ್ನು ಈಡೇರಿಸಲು ಅಗತ್ಯವಾದ ಹಣವನ್ನು ಒದಗಿಸದ ಮೋಸದ ಬಜೆಟ್ ಆಗಿ ಬಿಟ್ಟಿದೆ. ಅತ್ತ ಕಾರ್ಪೊರೇಟ್‌ಗಳಿಗೆ ಮಾತ್ರ ವಿವಿಧ ರೂಪಗಳಲ್ಲಿ ಹಲವಾರು ಬಕ್ಷೀಸುಗಳನ್ನು ಕೊಡಮಾಡಿದೆ ಎಂದು ಸಿಐಟಿಯು ಟೀಕಿಸಿದೆ.

ಇನ್ನೂ ದೊಡ್ಡ ಜನಾದೇಶ ಪಡೆದು ಬಂದಿರುವ ಬಿಜೆಪಿ ಸರಕಾರದ ಎರಡನೇ ಅವತಾರದ ಮೊದಲ ಬಜೆಟ್ ಸಂಪೂರ್ಣವಾಗಿ ಜನ-ವಿರೋಧಿಯಾಗಿದೆ, ಕಾರ್ಮಿಕ–ವಿರೋಧಿಯಾಗಿದೆ, ದೊಡ್ಡ ಉದ್ಯಮಿಗಳು/ಕಾರ್ಪೊರೇಟ್ ಲಾಬ್ಬಿಯ ತನ್ನ ನಿಜವಾದ ಯಜಮಾನರುಗಳ ಹಿತಗಳನ್ನು ಈಡೇರಿಸುವುದಕ್ಕಾಗಿಯೇ ರೂಪಿಸಲಾಗಿದೆ. ಇದು ಮುಂಬರುವ ಇನ್ನೂ ಹಲವಾರು ಜನ-ವಿರೋಧಿ, ಕಾರ್ಮಿಕ–ವಿರೋಧಿ ಕ್ರಮಗಳ ಒಂದು ಸೂಚನೆಯಾಗಿದೆ. ಇದು ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗೆ ಅತ್ಯಂತ ಧ್ವಂಸಕಾರಿಯಾಗಿದೆ ಮತ್ತು ದುಡಿಯುವ ಜನಸಮೂಹಗಳಿಗೆ ಮಾಡಿದ ವಿಶ್ವಾಸಘಾತವಾಗಿದೆ ಎಂದಿರುವ ಸಿಐಟಿಯು, ದುಡಿಯುವ ಜನಗಳು ಒಂದಾಗಿ ಈ ಜನ–ವಿರೋಧಿ ಬಜೆಟಿನ ವಿರುದ್ಧ ಪ್ರತಿಭಟಿಸಬೇಕು ಎಂದು ಕರೆ ನೀಡಿದೆ

ಜುಲೈ 4ರಂದು ಸಂಸತ್ತಿನ ಮುಂದೆ ಮಂಡಿಸಿದ ಆರ್ಥಿಕ ಸರ್ವೇಕ್ಷಣೆಯಲ್ಲಿ ಸರಕಾರ ಪ್ರಕಟಗೊಳಿಸಿದ ಅದರ ಧೋರಣೆಯ ಕುರಿತ ಆಶಯಗಳಲ್ಲಿ ಕೂಡ ಕಾಣುವ ಏಕೈಕ ಗುರಿಯೆಂದರೆ, ಶ್ರೀಮಂತರಿಗೆ ಮತ್ತು ಕಾರ್ಪೊರೇಟ್‌ಗಳಿಗೆ ಹೆಚ್ಚೆಚ್ಚು ಸಂಪನ್ಮೂಲಗಳನ್ನು ವರ್ಗಾಯಿಸುವುದು ಮತ್ತು ಜನಸಾಮಾನ್ಯರನ್ನು, ಮುಖ್ಯವಾಗಿ ದೇಶದ ಸಂಪತ್ತನ್ನು ಸೃಷ್ಟಿಸುವ ದುಡಿಯುವ ಜನಗಳನ್ನು ಇನ್ನಷ್ಟು ದುಷ್ಟತನದಿಂದ ಲೂಟಿ ಮಾಡುವುದು. ಬಜೆಟ್ ಪ್ರಸ್ತಾವಗಳು ಕೂಡ ಅದೇ ದಿಕ್ಕಿನಲ್ಲಿವೆ ಎಂದು ಸಿಐಟಿಯು ಟಿಪ್ಪಣಿ ಮಾಡಿದೆ.

ಜನಗಳ ಮೂಲಭೂತ ಸಮಸ್ಯೆಗಳ ಉಪೇಕ್ಷೆ

ದೇಶದ ಅರ್ಥಿಕ ವ್ಯವಸ್ಥೆ ಸತತವಾಗಿ ನಿಧಾನಗೊಳ್ಳುತ್ತಿರುವಾಗ, ನಿರುದ್ಯೋಗ ಸತತವಾಗಿ ಏರುತ್ತ ಜೂನ್ ತಿಂಗಳಲ್ಲಿ 7.4% ದಾಟಿದ್ದು, ದೇಶ ಕಳೆದ 45 ವರ್ಷಗಳಲ್ಲೇ ಅತಿ ಕಡಿಮೆ ಉದ್ಯೋಗ ನಿರ್ಮಾಣದ ಮಟ್ಟಕ್ಕೆ ಇಳಿದಿರುವಾಗ, ಈ ಎಲ್ಲ ಮೂಲಭೂತ ಪ್ರಶ್ನೆಗಳನ್ನು ಎದುರಿಸುವ ಪ್ರಸ್ತಾವಗಳನ್ನು ಮುಂದಿಡುವ ಗೋಜಿಗೇ ಈ ಬಜೆಟ್ ಹೋಗಿಲ್ಲ. 80 'ಜೀವನೋಪಾಯ ವ್ಯವಹಾರ ಕಾವುಗೂಡು' (Livelihood Business Incubator)ಗಳನ್ನು, 20 'ತಂತ್ರಜ್ಞಾನ ವ್ಯವಹಾರ ಕಾವುಗೂಡು'(Technology Business Incubator) ಗಳನ್ನು ರಚಿಸುವ ಹಾಸ್ಯಾಸ್ಪದ ಪ್ರಸ್ತಾಪಗಳು ಮಾತ್ರ ಈ ಬಜೆಟಿನಲ್ಲಿವೆ.

ಪುಟ 10 ಕ್ಕೆ

> "ಆರ್ಥಿಕ ಬೆಳವಣಿಗೆಗೆ ಮತ್ತು ಉದ್ಯೋಗ ಬೆಳವಣಿಗೆಗೆ ಕಂಡಿರುವ ಒಂದೇ ದಾರಿಯೆಂದರೆ ಕಾರ್ಮಿಕ ಕಾನೂನುಗಳ 'ಸುಧಾರಣೆ', ಅಂದರೆ ಅವುಗಳ ಅನ್ವಯವನ್ನು ಗಮನಾರ್ಹವಾಗಿ ಕುಂಠಿತಗೊಳಿಸುವುದರ ಮೇಲೆ ಹೆಚ್ಚಿನ ಒತ್ತು ಹಾಕುವುದು. "ವ್ಯಾಪಾರ ಸುಗಮತೆಯ ಸೂಚ್ಯಂಕ'ದ ಮೆಟ್ಟಿಲುಗಳಲ್ಲಿ ಮೇಲೇರಬೇಕೆಂಬ ಗೀಳನ್ನು ಹಚ್ಚಿಕೊಂಡಿರುವ ಈ ಸರಕಾರ ಇನ್ನೊಂದೆಡೆಯಲ್ಲಿ ಇಡೀ ದೇಶಕ್ಕೆ ನಿಜವಾಗಿಯೂ ಜಿಡಿಪಿಯನ್ನು ಸೃಷ್ಟಿಸಿ ಕೊಡುವ ದುಡಿಯುವ ಜನಗಳು ಮಾನವರಾಗಿ ಬದುಕುಳಿಯುವುದನ್ನು ಸುಗಮಗೊಳಿಸಬೇಕಾಗಿದೆ ಎಂಬುದನ್ನೇ ಉಪೇಕ್ಷಿಸಿದೆ."

ರೈತರ ಹಿತಗಳನ್ನು ಬಲಿಗೊಟ್ಟು ಕಾರ್ಪೊರೇಟ್ ಲಾಭಕೋರತನವನ್ನು ಉತ್ತೇಜಿಸುವ ಬಜೆಟ್–ಎಐಕೆಎಸ್

> "ಕೃಷಿ ಬೆಳವಣಿಗೆಗೆ, ರೈತರ ಆದಾಯ ಹೆಚ್ಚಿಸಲಿಕೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ ನೀಡುವುದಾಗಿ ಬಿಜೆಪಿಯ ಚುನಾವಣಾ ಪ್ರಣಾಳಿಕೆ ಆಶ್ವಾಸನೆ ನೀಡಿತ್ತು. ಆದರೆ ಆರ್ಥಿಕ ಸರ್ವೇಕ್ಷಣೆ ಖಾಸಗಿ ಹೂಡಿಕೆಯಾ ಕೃಷಿ ಬೆಳವಣಿಗೆಯ ಪ್ರಧಾನ ವಾಹಕ ಎಂದು ಹೇಳುತ್ತದೆ. ಒಟ್ಟಿನಲ್ಲಿ ಈ ಸರಕಾರದ ಧೋರಣೆಗಳು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಹೂಡಿಕೆಯ ವಿಷಯದಲ್ಲಿ ಪ್ರಭುತ್ವ ಹಿಂದಕ್ಕೆ ಸರಿಯಬೇಕು, ಜತೆಗೆ ಆರ್ಥಿಕ ವ್ಯವಸ್ಥೆಯ ಮೇಲಿನ ಹತೋಟಿಗಳನ್ನು ತೆಗೆದು ಹಾಕುತ್ತ ದೇಶಿ-ವಿದೇಶಿ ಖಾಸಗಿಯವರಿಗೆ ಅದನ್ನು ತೆರೆಯಬೇಕು ಎಂಬ ದಿಕ್ಕಿನಲ್ಲಿ ಸಾಗುತ್ತಿವೆ."



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ರೈತರಿಗೆ ಈ ಬಜೆಟ್ ಟೊಳ್ಳು ಘೋಷಣೆಗಳನ್ನು ಬಿಟ್ಟು ಬೇರೇನೂ ಮೂರ್ತವಾದುದನ್ನು ಕೊಟ್ಟಿಲ್ಲ. ರೈತರ ಉತ್ಪನ್ನಗಳಿಗೆ ಫಲದಾಯಕ ಬೆಲೆಗಳ ಪ್ರಶ್ನೆಯನ್ನು ಎತ್ತಿಕೊಂಡಿಲ್ಲ, ಅವರನ್ನು ಸಾಲದ ಹೊರೆಯಿಂದ ಮುಕ್ತಗೊಳಿಸಲು ಯಾವುದೇ ಕ್ರಮವನ್ನೂ ಸೂಚಿಸಿಲ್ಲ. ಬದಲು ಡೀಸೆಲ್ ಮೇಲೆ ಲೀಟರಿಗೆ 2 ರೂ. ಅಧಿಭಾರ ಸೂಚಿಸಿ ರೈತರ ಉತ್ಪಾದನಾ ವೆಚ್ಚವನ್ನು ಇನ್ನಷ್ಟು ಹೆಚ್ಚಿಸುವ ಕ್ರಮವೇ ಇದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಮೋದಿ–2 ಸರಕಾರದ ಮೊದಲ ಬಜೆಟ್ ಬಗ್ಗೆ ಪ್ರತಿಕ್ರಿಯಿಸಿದೆ.

ಸರಕಾರ ಆರ್ಥಿಕ ರಂಗದಲ್ಲಿ ಇನ್ನಷ್ಟು ಹತೋಟಿಗಳನ್ನು ತೆಗೆದು ಹಾಕುವತ್ತ ಸಾಗುತ್ತಿರುವುದರಿಂದಾಗಿ ಉತ್ಪಾದನಾ ವೆಚ್ಚದಲ್ಲಿ ಉಳಿತಾಯವಾಗುವ ಬದಲು ಕೃಷಿ ವೆಚ್ಚಗಳು ಮತ್ತಷ್ಟು ಹೆಚ್ಚುತ್ತವೆ. ಕೃಷಿಯಲ್ಲಿ ಬಿಕ್ಕಟ್ಟಿಗೆ ಒಂದು ದೊಡ್ಡ ಕಾರಣ ಕೃಷಿ ಲಾಗುವಾಡುಗಳ ಬೆಲೆಗಳಲ್ಲಿ ಅಪಾರ ಹೆಚ್ಚಳ. ಬೀಜಗಳು, ರಸಗೊಬ್ಬರ, ಡೀಸೆಲ್ ಮತ್ತು ವಿದ್ಯುತ್‌ದರಗಳಲ್ಲಿ ಅಪಾರ ಹೆಚ್ಚಳಗಳು ಇವು ಸರಕಾರದ ಹತೋಟಿಗಳನ್ನು ತೆಗೆಯುತ್ತಿರುವುದರ ಪರಿಣಾಮಗಳು. ಜತೆಗೆ ಜಿಎಸ್‌ಟಿ ಕೂಡ ತನ್ನ ಹೊರೆ ಸೇರಿಸಿದೆ. ಇಂತಹ ಸಂದರ್ಭದಲ್ಲಿ ಕೃಷಿ ಲಾಗುವಾಡುಗಳ ಬೆಲೆಗಳ ಮೇಲೆ ಸರಕಾರ ಹತೋಟಿ ತರಬೇಕಾಗಿತ್ತು. ಈ ದಿಕ್ಕಿನಲ್ಲಿ ಹಣಕಾಸು ಮಂತ್ರಿಗಳು ಏನೂ ಮಾಡಿಲ್ಲ, ಮಾತ್ರವಲ್ಲ, ಗಾಯಕ್ಕೆ ಉಪ್ಪು ತಿಕ್ಕುವಂತೆ ರೈತರು ಯಾವ ಲಾಗುವಾಡುಗಳನ್ನೂ ಖರೀದಿಸಬಾರದು, ಬದಲಿಗೆ 'ಶೂನ್ಯ ಬಜೆಟ್ ಸಾಗುವಳಿ' ಕೈಗೊಳ್ಳಬೇಕು ಎಂದು ಪುಕ್ಕಟೆ ಸಲಹೆ ನೀಡಿದ್ದಾರೆ. ಅಸಾಮಾನ್ಯ ಬರಗಾಲದ ಸ್ಥಿತಿಯಲ್ಲಿರುವಾಗ ಗ್ರಾಮೀಣ ಉದ್ಯೋಗಾವಕಾಶ ನಿರ್ಮಾಣದ ದಿಕ್ಕಿನಲ್ಲಿ ಹೆಚ್ಚಿನ ಕ್ರಮಗಳ ನಿರೀಕ್ಷೆಯಿತ್ತು. ಆದರೆ ಈ ಬಜೆಟ್ ಮನರೇಗಕ್ಕೆ ಹಣನೀಡಿಕೆಯಲ್ಲೂ ಕಳೆದ ವರ್ಷದ ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದರೆ 1000 ಕೋಟಿ ರೂ.ಗಳ ಕಡಿತವನ್ನೇ ಮಾಡಿದೆ.

'ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ ಮತ್ತು ಬೆಲೆ ಬೆಂಬಲ'ಕ್ಕೆ ನೀಡಿರುವ ಹಣ ಏನೇನೂ ಸಾಲದು. 'ಬೆಲೆ ವ್ಯತ್ಯಾಸ ಪಾವತಿ'ಗೆಂದು 1000 ಕೋಟಿರೂ. ಹೆಚ್ಚುವರಿಯಾಗಿ ನೀಡುವುದಾಗಿ ಹೇಳಲಾಗಿದೆ. ಆದರೆ ಇದರಲ್ಲಿ ರೈತರಿಂದ ಧಾನ್ಯಖರೀದಿಗೆ ಎಷ್ಟು ಬಳಸಲಾಗುತ್ತದೆ ಎಂಬುದು ಸ್ಪಷ್ಟವಿಲ್ಲ. ಮುಂಗಾರು ಬೆಳೆಗಳಿಗೆ ಅತ್ಯಲ್ಪ ಎಂಎಸ್‌ಪಿ ಪ್ರಕಟಿಸಿರುವ ಸಂದರ್ಭದಲ್ಲಿ ಇದು ಬಹಳ ಮುಖ್ಯ ವಿಷಯವಾಗುತ್ತದೆ. ವಾಸ್ತವವಾಗಿ ಈ ಯೋಜನೆ ರೈತರಿಗಿಂತ ಹೆಚ್ಚಾಗಿ ವ್ಯಾಪಾರಿಗಳ ಪ್ರಯೋಜನಕ್ಕಾಗಿ ತಂದಿರುವಂತದ್ದು. ನೀರಾವರಿಯಲ್ಲಿ ಇಸ್ರೇಲಿ ಮಾದರಿಯನ್ನು ಪ್ರೋತ್ಸಾಹಿಸಲಾಗುವುದಂತೆ. ಇದು ಪ್ಯಾಲೆಸ್ತೀನೀ ಜನಗಳ ಹಕ್ಕುಗಳನ್ನು ದಮನ ಮಾಡುವಲ್ಲಿ ಕುಖ್ಯಾತವಾಗಿರುವ ನೆಟಫಿಮ್‌ನಂತಹ ಇಸ್ರೇಲಿ ಕಂಪನಿಗಳು ಗ್ರಾಮೀಣ ಭಾರತದೊಳಕ್ಕೆ ಪ್ರವೇಶಿಸುವ ಒಂದು ವಾಹನ ಕೂಡ ಆಗಿದೆ ಎಂದು ಎಐಕೆಎಸ್ ಹೇಳಿದೆ.

ಸರಕಾರ ಕೃಷಿ ಮೂಲರಚನೆಗಳಲ್ಲಿ ವ್ಯಾಪಕ ಹೂಡಿಕೆ ಮಾಡುತ್ತದೆ, ಕೃಷಿ ವಲಯದಲ್ಲಿ ಮೌಲ್ಯ ಸೇರ್ಪಡೆ ಮಾಡಲು ಮತ್ತು ಮೀನುಗಾರಿಕಾ ವಲಯದಲ್ಲಿ ಅಗತ್ಯ ಮೂಲರಚನೆ ನಿರ್ಮಾಣಕ್ಕೆ ಖಾಸಗಿ ಉದ್ದಿಮೆದಾರರಿಗೆ ಬೆಂಬಲ ನೀಡಲಾಗುತ್ತದೆ ಎನ್ನಲಾಗಿದೆ. ವಾಸ್ತವವಾಗಿ ಆಧುನೀಕರಣದ ಹೆಸರಲ್ಲಿ ಈ ವಲಯವನ್ನು ಕಾರ್ಪೊರೇಟ್ ಮೀನುಗಾರಿಕಾ ಕಂಪನಿಗಳಿಗೆ ತೆರೆದು ಕೊಡಲಾಗುತ್ತಿದೆ. ಹೈನುಗಾರಿಕಾ ವಲಯವನ್ನು ಪ್ರೋತ್ಸಾಹಿಸುವ ಹೆಸರಲ್ಲೂ ಯೋಜಿಸುತ್ತಿರುವ ಕ್ರಮಗಳು ಹೈನು ರೈತರಿಗೆ ಮಾರಣಾಂತಿಕ ಆಗುವಂತವುಗಳು. 10ಸಾವಿರ ರೈತರ ಉತ್ಪಾದಕ ಸಂಘಟನೆಗಳನ್ನು ಆರಂಭಿಸುವ ಮತ್ತು ಖಾಸಗಿ ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಮಾತುಗಳೂ ಇವೆ. ಆದರೆ ರೈತರ ಸಹಕಾರಿ ಸಂಘಗಳ ಮಾತೇ ಇಲ್ಲ. ಗುತ್ತಿಗೆ ಸಾಗುವಳಿಗೆ ಹೆಚ್ಚಿನ ಒತ್ತು ನೀಡಲಾಗುವುದಂತೆ. ಇದು ದೊಡ್ಡ ಚಿಲ್ಲರೆ ಮಾರಾಟಗಾರರಿಗೆ ಅನುಕೂಲ

ಪುಟ 10 ಕ್ಕೆ

ಉದ್ಯಮಿಗಳ ವ್ಯಾಪಾರ ಸುಗಮತೆಗಾಗಿಯೇ ಎಲ್ಲ ದುಡಿಮೆಗಾರರ ಬದುಕಿನ ಸುಗಮತೆಗಾಗಿ ಅಲ್ಲ –ಸಿಐಟಿಯು



ಪುಟ 9 ರಿಂದ

ಇವು ಕೃಷಿ–ಗ್ರಾಮೀಣ ಉದ್ದಿಮೆಗಳಲ್ಲಿ ಕುಶಲ ಉದ್ಯಮಿಗಳನ್ನು ಬೆಳಸಲಿಕ್ಕಾಗಿ ಎನ್ನಲಾಗಿದೆ. ವಾಸ್ತವವಾಗಿ ಇದನ್ನು ಕಂಡರಿಸಿರುವುದು ಕೃಷಿ ಕ್ಷೇತ್ರವನ್ನು ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡಲು ಅವರ ಪ್ರವೇಶಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿಯೇ ಮತ್ತು ಸಣ್ಣ ರೈತರ ಬೇಸಾಯ ಕೃಷಿಯನ್ನು ನಾಶಮಾಡಲಿಕ್ಕಾಗಿಯೇ. ಕೃಷಿರಂಗದಲ್ಲಿ ಮತ್ತು ಕೃಷಿ ಮೂಲರಚನೆಯ ಅಭಿವೃದ್ಧಿಗೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವುದು, ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ಸುಲಭವಾದ ಸಾಲ ಸೌಲಭ್ಯ ಹಾಗೂ ಕೃಷಿ ಕಾರ್ಮಿಕರಿಗೆ ಆದಾಯದ ಭದ್ರತೆಯನ್ನು ಒದಗಿಸುವ ಕ್ರಮಗಳ ಮೂಲಕ ಕೃಷಿ ಬಿಕ್ಕಟ್ಟನ್ನು ಎದುರಿಸುವ ಪ್ರಯತ್ನಗಳನ್ನು ನಡೆಸಲು ಕೂಡ ಸರಕಾರ ನಿರಾಕರಿಸುತ್ತಿರುವುದು ಈ ಬಜೆಟಿನಲ್ಲಿ ಕಂಡಿದೆ.

ಜನಸಾಮಾನ್ಯರ ದಾರಿದ್ರ್ಯ ಆಳಗೊಳ್ಳುತ್ತಿರುವುದರಿಂದಾಗಿ ಅವರ ಬಳಕೆಯ ಪ್ರಮಾಣ ಇಳಿಮುಖಗೊಳ್ಳುತ್ತಿದೆ. ಪರಿಣಾಮವಾಗಿ ಆಂತರಿಕ ಮಾರುಕಟ್ಟೆಗಳ ಗಾತ್ರ ಕುಂಠಿತಗೊಳ್ಳುತ್ತಿದೆ. ಇದರಿಂದಾಗಿ ಉದ್ದಿಮೆಗಳು ಮತ್ತು ಸೇವಾವಲಯಗಳ ಉತ್ಪಾದನಾ ಸಾಮರ್ಥ್ಯದ ಪೂರ್ಣ ಬಳಕೆ ಸಾಧ್ಯವಾಗದೆ ಉದ್ಯೋಗಗಳು ಮತ್ತು ಜೀವನಾಧಾರಗಳು ನಷ್ಟಗೊಳ್ಳುತ್ತಿವೆ. ಆದರೆ ಈ ಮೂಲಭೂತ ಸಮಸ್ಯೆಗೆ ಬಜೆಟ್‌ನಲ್ಲಿ ಗಮನವೇ ಕಾಣುತ್ತಿಲ್ಲ. ಹಿಂದಿನ ಅವತಾರದಲ್ಲಿ ಈ ಸರಕಾರದ ಪ್ರಧಾನ ಮಂತ್ರಿಗಳು 2021ರ ವೇಳೆಗೆ ರೈತರ ಆದಾಯಗಳನ್ನು ದ್ವಿಗುಣಗೊಳಿಸುವುದಾಗಿ ಪ್ರಕಟಿಸಿದಂತೆ, ಈಗ ಈ ಸರಕಾರ ಜನಗಳನ್ನು ಸಮಾಧಾನ ಪಡಿಸಲು 2022ರೊಳಗೆ ಭಾರತವನ್ನು ಒಂದು 5 ಟ್ರಿಲಿಯನ್ ಡಾಲರುಗಳ ಆರ್ಥಿಕ ವ್ಯವಸ್ಥೆಯಾಗಿ ಮಾಡುವ ಗುರಿಯನ್ನು ಪ್ರಕಟಿಸಿದೆ. ಆದರೆ ಪರಿಸ್ಥಿತಿ ತದ್ವಿರುದ್ಧ ದಿಕ್ಕಿನಲ್ಲೇ ಸಾಗಿದೆ, ಇನ್ನಷ್ಟು ಬಿಕ್ಕಟ್ಟನ್ನು ತರುತ್ತಿದೆ, ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ.

ಜನಗಳನ್ನು ವಂಚಿಸುವ ನಟನೆಗಳು

ಬಜೆಟ್ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ಹಾಕುತ್ತಿರುವುದಾಗಿ ನಟನೆ ಮಾಡಿದೆ. 2.5 ಕೋಟಿ ರೂ.ಗಳಿಗಿಂತ ಹೆಚ್ಚಿನ ವೈಯಕ್ತಿಕ ಆದಾಯದ ಮೇಲೆ ಸರ್ಚಾರ್ಜನ್ನು ಹೆಚ್ಚಿಸುವುದಾಗಿ ಹೇಳಿದೆ. ಆದರೆ ಇನ್ನೊಂದೆಡೆಯಲ್ಲಿ 99.3% ದಷ್ಟು ಕಾರ್ಪೊರೇಟ್‌ಗಳಿಗೆ ತೆರಿಗೆ ದರದಲ್ಲಿ 10% ದಷ್ಟು(35%ದಿಂದ 25%ಕ್ಕೆ)ಕಡಿತ ಮಾಡಿದೆ; ಅಂದರೆ ಶ್ರೀಮಂತ ವಿಭಾಗಗಳಿಂದ ವಸೂಲಿ ಮಾಡುವುದಕ್ಕಿಂತ, ಅವರಿಗೆ ಕೊಟ್ಟಿರುವುದೇ ಹೆಚ್ಚು. ಬ್ಯಾಂಕ್ ಸಾಲಗಳ ಸುಸ್ತಿಗೆ, ಕಾರ್ಪೊರೇಟ್ ತೆರಿಗೆ. ಆದಾಯ ತೆರಿಗೆ ಮುಂತಾದವುಗಳನ್ನು ತೆರದೆ ರಾಷ್ಟ್ರೀಯ ಖಜಾನೆಯನ್ನು ಸಂಘಟಿತವಾಗಿ ಲೂಟಿ ಮಾಡುತ್ತಿರುವುದು ಇದೇ ಖಾಸಗಿ ಕಾರ್ಪೊರೇಟ್ ಸಮುದಾಯವೇ. ಆದರೆ ಇವೇ ಈಗ ಇಂತಹ ಬೃಹತ್ ರಿಯಾಯ್ತಿಗಳನ್ನು ಗಿಟ್ಟಿಸಿವೆ. ಇವರೆಲ್ಲ ಹಿಂದಿನ ಬಜೆಟ್ ವೇಳೆಗೆ ರಾಷ್ಟ್ರೀಯ ಖಜಾನೆಗೆ 7,35,000 ಕೋಟಿ ರೂ. ಬಾಕಿ ಇಟ್ಟುಕೊಂಡ ಮಂದಿಗಳು. ರಾಷ್ಟ್ರೀಯ ಖಜಾನೆಗೆ ಇವರಿಂದ ಸಲ್ಲಬೇಕಾದ ಹಣದ ವಸೂಲಿಯ ಬಗ್ಗೆ ಬಜೆಟಿನಲ್ಲಿ ಒಂದೇ ಒಂದು ವಾಕ್ಯವೂ ಇಲ್ಲ, ಬದಲಾಗಿ, ತೆರಿಗೆ ವಿಧಾನವನ್ನು ಸರಳಗೊಳಿಸುವ, ತೆರಿಗೆದಾರರಿಗೆ , ಮುಖ್ಯವಾಗಿ ಈ ಬಾಕಿದಾರರಿಗೆ 'ಬದುಕನ್ನು ಸುಗಮಗೊಳಿಸುವ' ಹಲವಾರು ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ. ಇದರೊಂದಿಗೇ, ಪೆಟ್ರೋಲ್, ಡೀಸೆಲ್ ಮೇಲೆ ಸುಂಕಗಳನ್ನು ಮತ್ತು ಇತರ ಪರೋಕ್ಷ ತೆರಿಗೆಗಳನ್ನು ಹೆಚ್ಚಿಸಿ ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಹಾಕಲಾಗಿದೆ.

"ಕೈಗೆಟಕುವ ವಸತಿ'ಯನ್ನು ಲಭ್ಯಗೊಳಿಸುವ ಹೆಸರಿನಲ್ಲಿ 45 ಲಕ್ಷರೂ. ವರೆಗಿನ ಮನೆಸಾಲಕ್ಕೆ ತೆರಿಗೆ ಮತ್ತು ಬಡ್ಡಿಗಳಲ್ಲಿ ರಿಯಾಯ್ತಿಗಳನ್ನು ಕೊಡುವುದಾಗಿ ಹೇಳಿದೆ. ಇದೂ ಕೇವಲ ನಟನೆಯೇ. ಏಕೆಂದರೆ ಈ ರಿಯಾಯ್ತಿಗಳ ಹೆಚ್ಚು ಪ್ರಯೋಜನವಾಗುವುದು ಈಗ ಬಿಕ್ಕಟ್ಟಿನಲ್ಲಿರುವ ದೊಡ್ಡ ಪ್ರಮಾಣದ ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೇ, ಆದರೆ ನಿಜವಾಗಿಯೂ ಕೈಗಟಕುವ ವಸತಿ ವಸತಿ ಬೇಕಾಗಿರುವುದು ಬಡವರಿಗೇ ತಾನೇ?

ವಿದೇಶಿ ಬಂಡವಾಳಕ್ಕೆ, ಕಂಪನಿಗಳಿಗೆ ಉದಾರ ಪ್ರವೇಶ

ಈ ಬಜೆಟ್ ಹಣಕಾಸು ವಲಯವೂ ಸೇರಿದಂತೆ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಎಲ್ಲ ನಿರ್ಣಾಯಕ ರಂಗಗಳಲ್ಲೂ ವಿದೇಶಿ ಬಂಡವಾಳ/ ವಿದೇಶಿ ಕಂಪನಿಗಳಿಗೆ ಇನ್ನಷ್ಟು ಉದಾರ ಪ್ರವೇಶವನ್ನು ಪ್ರಕಟಿಸಿದೆ. 'ಮೇಕ್ ಇನ್ ಇಂಡಿಯಾ' ಮಂತ್ರ ಜಪಿಸುವ ಸರಕಾರ ಈಗಾಗಲೇ ರಕ್ಷಣಾ ಉತ್ಪಾದನೆಯಲ್ಲಿ, ರೈಲ್ವೆ ರೋಲಿಂಗ್ ಸ್ಟಾಕ್‌ಗಳಲ್ಲಿ ಮತ್ತು ಇತರ ಮಹತ್ವದ ರಂಗಗಳಲ್ಲಿ ಆಮದು ಉದಾರೀಕರಣದ ಮೂಲಕ ದೇಶೀ ಉತ್ಪಾದನಾ ಸಾಮರ್ಥ್ಯಗಳನ್ನು ಧ್ವಂಸ ಮಾಡುವ ಹಾದಿಯಲ್ಲಿ ಹೊರಟಿದೆ, ಸಾರ್ವಜನಿಕ ವಲಯದ ಘಟಕಗಳು, ಸರಕಾರದ ಆರ್ಡಿನೆನ್ಸ್(ಶಸ್ತ್ರಾಸ್ತ್ರ ತಯಾರಿಕಾ) ಕಾರ್ಖಾನೆಗಳು ಮತ್ತು ರೈಲ್ವೆ ಉತ್ಪಾದನಾ ಘಟಕಗಳಿಗೆ ಆರ್ಡರ್‌ಗಳು ಇಲ್ಲದಂತೆ ಮಾಡಿ ಇವೆಲ್ಲ ಉತ್ಪಾದನೆಗಳನ್ನು ವಿದೇಶಿ ಕಂಪನಿಗಳೂ ಸೇರಿದಂತೆ ಖಾಸಗಿ ಏಜೆನ್ಸಿಗಳಿಗೆ ಕೊಡುತ್ತಿದೆ. ಈ ಬಜೆಟ್ ಇಂತಹ ವಿಧ್ವಂಸಕ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸುತ್ತದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಕೊಡಲಾಗುತ್ತಿರುವ ಸೌಕರ್ಯಗಳನ್ನು ಕ್ರಮೇಣ ತೆಗೆದು ಹಾಕಲಾಗುತ್ತದೆ ಎಂಬ ಸ್ಪಷ್ಟ ಸಂಕೇತವನ್ನು ಆರ್ಥಿಕ ಸರ್ವೇಕ್ಷಣೆ ನೀಡಿತ್ತು, ಈ ಬಜೆಟ್ ಕೂಡ ನೀಡಿದೆ. ಅವು ದೊಡ್ಡದಾಗಿ ಬೆಳೆಯಲು ಇರುವ ಸಂಕೋಲೆಗಳನ್ನು ನಿವಾರಿಸಲು ಹೀಗೆ ಮಾಡಲಾಗುತ್ತದೆ ಎಂದು ಅವು ಹೇಳಿಕೊಂಡಿವೆ. ಆದರೆ, ನಿಜಸಂಗತಿಯೆಂದರೆ, ಈ ಕ್ಷೇತ್ರವನ್ನು ದೊಡ್ಡ ಉದ್ದಿಮೆದಾರರಿಗೆ, ಕಾರ್ಪೊರೇಟ್‌ಗಳಿಗೆ ಕೃಪಾಪೋಷಣೆ ನೀಡುವುದಕ್ಕಾಗಿಯೇ ಬಲಿಗೊಡಲಾಗುತ್ತಿದೆ. ಇದು ಸಂಘಟಿತ ವಲಯದಲ್ಲಿ ಉದ್ಯೋಗಾವಕಾಶ ನಿರ್ಮಾಣದ ಮತ್ತು ಸ್ವ-ಉದ್ಯೋಗದ ಈ ಎರಡನೇ ಅತಿ ದೊಡ್ಡ ಮೂಲವನ್ನು ಬಹುವಾಗಿ ತಟ್ಟಲಿದೆ. ಮೋದಿ ಸರಕಾರದ ಮೊದಲಿನ ಅವತಾರ ಈಗಾಗಲೇ ತನ್ನ ನೋಟುರದ್ಧತಿ ಮತ್ತು ಜಿಎಸ್‌ಟಿ ಜಾರಿ ಮೂಲಕ ದೊಡ್ಡ ಸಂಖ್ಯೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳನ್ನು ನಾಶಪಡಿಸಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಸರಕಾರ ಹಣಕಾಸು ಬಂಡವಾಳದ, ಮುಖ್ಯವಾಗಿ ಜೂಜುಕೋರ ವ್ಯವಹಾರಗಳಲ್ಲಿ ತೊಡಗಿರುವವರ ಪರವಾದ ಪಕ್ಷಪಾತ ಹೊಂದಿರುವುದು ಈ ಬಜೆಟಿನಿಂದ ಸ್ಪಷ್ಟವಾಗಿದೆ. ಬಂಡವಾಳ ಗಳಿಕೆಯ ಮೇಲಿನ ತೆರಿಗೆಗಳಿಗೆ ಸಂಬಂಧಪಟ್ಟಂತೆ, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ(ಎನ್‌ಬಿಎಫ್‌ಸಿ)ಗಳಿಗೆ ಡಿವಿಡೆಂಡ್ ಮತ್ತಿತರ ವಿಷಯಗಳಲ್ಲಿ ಹಲವಾರು ರಿಯಾಯ್ತಿಗಳನ್ನು ಪ್ರಕಟಿಸಲಾಗಿದೆ; ನಿಜವಾದ ಉದ್ಯೋಗಾವಕಾಶ ನಿರ್ಮಾಣದ ಆರ್ಥಿಕದಲ್ಲಿ ವ್ಯವಹಾರ ನಡೆಸುತ್ತಿರುವ ಸಾರ್ವಜನಿಕ ವಲಯದ ಅಡಿಯಲ್ಲಿರುವ ಎಲ್ಲ ಎನ್‌ಬಿಎಫ್‌ಸಿಗಳನ್ನು ಖಾಸಗೀಕರಿಸುವುದಾಗಿ ಪ್ರಕಟಿಸಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಸರಕಾರದ ಹೂಡಿಕೆಗಳನ್ನು ಹಿಂತೆಗೆದುಕೊಳ್ಳುವುದು (disinvestment), ರಾಷ್ಟ್ರೀಯ ಉತ್ಪಾದಕ ಆಸ್ತಿಗಳನ್ನು ಖಾಸಗಿ ಉದ್ಯಮಿಗಳಿಗೆ ವಹಿಸಿಕೊಡುವ ಇನ್ನೊಂದು ಮೋಸದ ವಿಧಾನ. ಈ ಬಜೆಟ್ ಈ ವಿಧಾನದ ಮೂಲಕ 1.05 ಲಕ್ಷ ಕೋಟಿ ರೂ.ಗಳನ್ನು ಗಳಿಸುವ ಗುರಿ ಹಾಕಿಕೊಂಡಿದೆ. ಅಲ್ಲದೆ ಕಂಪನಿಗಳಲ್ಲಿ ಕನಿಷ್ಟ ಸಾರ್ವಜನಿಕ ಶೇರುಗಳ ಪ್ರಮಾಣವನ್ನು 25%ದಿಂದ 35% ಕ್ಕೆ ಏರಿಸಲಾಗಿದೆ. ಈ ಮೂಲಕ ಸಾರ್ವಜನಿಕ ವಲಯದ 35% ಹೂಡಿಕೆ ಹಿಂಪಡಿಕೆಗೆ ದಾರಿ ಮಾಡಿಕೊಡಲಾಗಿದೆ.

ಚುನಾವಣೆಗಳ ಮೊದಲು ಒಂದು ಕೋಟಿಗೂ ಹೆಚ್ಚು ಸಂಖ್ಯೆಯಲ್ಲಿರುವ ಸ್ಕೀಮ್ ಕಾರ್ಮಿಕರಿಗೆಗೆ ಕೊಟ್ಟಿರುವ ಎಲ್ಲ ವಚನಗಳನ್ನು ಹುಸಿಗೊಳಿಸಲಾಗಿದೆ. ಈ ಬಜೆಟಿನಲ್ಲೂ ಅವರಿಗೆ 'ಗೌರವಧನ'ದ ಹೆಸರಿನಲ್ಲಿ ಕೊಡುವ ಅಲ್ಪ ಹಣವನ್ನು ಹೆಚ್ಚಿಸುವ ಮಾತಿಲ್ಲ. ಕನಿಷ್ಟ ಬದುಕುಳಿಯುವ ಮಟ್ಟದ ಪೆನ್ಶನನ್ನು 6000 ರೂ.ಗಳಿಗೆ ಏರಿಸಬೇಕೆನ್ನುವ ಇಡೀ ಕಾರ್ಮಿಕ ಆಂದೋಲನದ ಬಹುದಿನಗಳ ಬೇಡಿಕೆಯ ಬಗ್ಗೆಯೂ ಏನೂ ಇಲ್ಲ. ನಿಜ ಹೇಳಬೇಕೆಂದರೆ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ಮನರೇಗ) ಸೇರಿದಂತೆ ಸುಮಾರಾಗಿ ಎಲ್ಲ ಸಾಮಾಜಿಕ ಮತ್ತು ಕಲ್ಯಾಣ ವೆಚ್ಚಗಳ ನಿಜಮೊತ್ತಗಳನ್ನು (ಅಂದರೆ ಪ್ರಸಕ್ತ ಬೆಲೆಗಳಲ್ಲಿ) ಕಡಿತ ಮಾಡಲಾಗಿದೆ.

ಒಟ್ಟಿನಲ್ಲಿ, ಆರ್ಥಿಕ ಸರ್ವೇಕ್ಷಣೆಗಾಗಲೀ, ಬಜೆಟ್‌ಗಾಗಲೀ ಆರ್ಥಿಕ ಬೆಳವಣಿಗೆಗೆ ಮತ್ತು ಉದ್ಯೋಗ ಬೆಳವಣಿಗೆಗೆ ಕಂಡಿರುವ ಒಂದೇ ದಾರಿಯೆಂದರೆ ಕಾರ್ಮಿಕ ಕಾನೂನುಗಳ 'ಸುಧಾರಣೆ', ಅಂದರೆ ಅವುಗಳ ಅನ್ವಯವನ್ನು ಗಮನಾರ್ಹವಾಗಿ ಕುಂಠಿತಗೊಳಿಸುವುದರ ಮೇಲೆ ಹೆಚ್ಚಿನ ಒತ್ತು ಹಾಕುವುದು. ಕಾರ್ಮಿಕ ಕಾನೂನುಗಳಲ್ಲಿ ಕಾರ್ಮಿಕರಿಗೆ ಇರುವ ಎಲ್ಲ ಹಕ್ಕುಗಳನ್ನು/ರಕ್ಷಣೆಗಳನ್ನು ತೆಗೆದು ಹಾಕುವ, ಬಹುಪಾಲು ಕಾರ್ಮಿಕರನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದಲೇ ಹೊರಹಾಕುವ ನಾಲ್ಕು 'ಕಾರ್ಮಿಕ ಸಂಹಿತೆ'(ಲೇಬರ್ ಕೋಡ್)ಗಳ ಮೂಲಕ ದುರ್ಬಲಗೊಳಿಸುವುದು ಈ 'ಕಾರ್ಮಿಕ ಸುಧಾರಣೆ'ಯ ಮುಖ್ಯ ಗುರಿ. "ವ್ಯಾಪಾರ ಸುಗಮತೆಯ ಸೂಚ್ಯಂಕ'ದ ಮೆಟ್ಟಿಲುಗಳಲ್ಲಿ ಮೇಲೇರಬೇಕೆಂಬ ಗೀಳನ್ನು ಹಚ್ಚಿಕೊಂಡಿರುವ ಈ ಸರಕಾರ ಇನ್ನೊಂದೆಡೆಯಲ್ಲಿ ಇಡೀ ದೇಶಕ್ಕೆ ನಿಜವಾಗಿಯೂ ಜಿಡಿಪಿಯನ್ನು ಸೃಷ್ಟಿಸಿ ಕೊಡುವ ದುಡಿಯುವ ಜನಗಳು ಮಾನವರಾಗಿ ಬದುಕುಳಿಯುವುದನ್ನು ಸುಗಮಗೊಳಿಸಬೇಕಾಗಿದೆ ಎಂಬುದನ್ನೇ ಉಪೇಕ್ಷಿಸಿದೆ. ■



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ರೈತರ ಹಿತಗಳನ್ನು ಬಲಿಗೊಟ್ಟು ಕಾರ್ಪೊರೇಟ್ ಲಾಭಕೋರತನವನ್ನು ಉತ್ತೇಜಿಸುವ ಬಜೆಟ್–ಎಐಕೆಎಸ್

ಪುಟ 9 ರಿಂದ

ಕಲ್ಪಿಸಿಕೊಡಲಿಕ್ಕಾಗಿ ಮತ್ತು ಚಿಲ್ಲರೆ ವ್ಯಾಪಾರವೂ ಸೇರಿದಂತೆ ಎಲ್ಲ ವಲಯಗಳಲ್ಲೂ ವಿದೇಶಿ ನೇರ ಹೂಡಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಎಂದು ಎಐಕೆಎಸ್ ವಿಶ್ಲೇಷಿಸಿದೆ.

ಇದಕ್ಕೆ ಮೊದಲು ಆರ್ಥಿಕ ಸರ್ವೇಕ್ಷಣೆ, ನೀತಿ ಆಯೋಗ ಮತ್ತು ಮುಂಗಾರು ಎಂಎಸ್‌ಪಿ ಪ್ರಕಟಣೆಗಳಲ್ಲಿ ಈ ಬಜೆಟಿನಲ್ಲಿ ಹತಾಶ ರೈತರಿಗೆ ಏನೂ ಇರಲಿಕ್ಕಿಲ್ಲ ಎಂಬುದರ ಸೂಚನೆಯನ್ನು ನೀಡಿದ್ದವು. ರೈತರ ಆದಾಯವನ್ನು ದ್ವಿಗುಣಗೊಳಿಸುವ ಪ್ರಶ್ನೆಯನ್ನು ಪರಿಶೀಲಿಸಲೆಂದು ನೇಮಿಸಿರುವ ಅಂತರ–ಮಂತ್ರಾಲಯ ಸಮಿತಿ ಇದಕ್ಕಾಗಿ ಏಳು ಮೂಲಗಳನ್ನು ಗುರುತಿಸಿದೆ ಎಂದು ಆರ್ಥಿಕ 'ಸರ್ವೇಕ್ಷಣೆ ಹೇಳಿದೆ. ಬೆಳೆ ಉತ್ಪಾದಕತೆಯನ್ನು ಉತ್ತಮಪಡಿಸುವುದು, ಜಾನುವಾರು ಉತ್ಪಾದಕತೆಯನ್ನು ಉತ್ತಮಪಡಿಸುವುದು, ಸಂಪನ್ಮೂಲಗಳ ದಕ್ಷ ಬಳಕೆ ಅಥವ ಉತ್ಪಾದನಾ ವೆಚ್ಚದಲ್ಲಿ ಉಳಿತಾಯ, ಬೆಳೆ ತೀವ್ರತೆಯನ್ನು ಹೆಚ್ಚಿಸುವುದು, ಉನ್ನತ ಮೌಲ್ಯದ ಬೆಳೆಗಳತ್ತ ಹೊರಳುವುದು, ರೈತರು ಪಡೆಯುವ ನಿಜವಾದ ಬೆಲೆಗಳನ್ನು ಉತ್ತಮಪಡಿಸುವುದು, ಮತ್ತು ಕೃಷಿಯಿಂದ ಕೃಷಿಯೇತರ ವೃತ್ತಿಗಳತ್ತ ಪಲ್ಲಟ –ಇವುಗಳಲ್ಲಿ ಯಾವುದರಿಂದಲೂ ರೈತರ ಆದಾಯವನ್ನು ಹೆಚ್ಚಿಸುವ ಹೊಸ ಯೋಜನೆಗಳೇನೂ ಈ ಬಜೆಟಿನಲ್ಲಿ ಇಲ್ಲ ಎಂದು ಎಐಕೆಎಸ್ ಖೇದ ವ್ಯಕ್ತಪಡಿಸಿದೆ.

ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಬೆಳವಣಿಗೆ ಇಳಿಮುಖವಾಗಿದೆ ಎಂಬುದನ್ನು ಆರ್ಥಿಕ ಸರ್ವೇಕ್ಷಣೆ ಗಮನಿಸಿದೆ. 2018–19ರಲ್ಲಿ ಆಹಾರಧಾನ್ಯಗಳ ಉತ್ಪಾದನೆ ಹಿಂದಿನ ವರ್ಷದ 28.5 ಕೋಟಿ ಟನ್‌ನಿಂದ 28.34 ಟನ್‌ಗೆ ಇಳಿಯಿತು. ಆದರೆ ಈ ಪರಿಸ್ಥಿತಿಯನ್ನು ಬದಲಿಸುವ ಕ್ರಮಗಳೇನೂ ಈ ಬಜೆಟಿನಲ್ಲಿ ಇಲ್ಲ.

ಕೃಷಿ ಭಾರತದ ಆರ್ಥಿಕ ಬೆಳವಣಿಗೆಯ ಇಂಜಿನ್, ಅತಿ ದೊಡ್ಡ ಉದ್ಯೋಗದಾತ, ತಾನು ಕೃಷಿ ಬೆಳವಣಿಗೆಗೆ, ರೈತರ ಆದಾಯ ಹೆಚ್ಚಿಸಲಿಕೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ ನೀಡುವುದಾಗಿ ಬಿಜೆಪಿಯ ಚುನಾವಣಾ ಪ್ರಣಾಳಿಕೆ ಆಶ್ವಾಸನೆ ನೀಡಿತ್ತು. ಆದರೆ ಆರ್ಥಿಕ ಸರ್ವೇಕ್ಷನೆ ಖಾಸಗಿ ಹೂಡಿಕೆಯಾ ಕೃಷಿ ಬೆಳವಣಿಗೆಯ ಪ್ರಧಾನ ವಾಹಕ ಎಂದು ಹೇಳುತ್ತದೆ. ಒಟ್ಟಿನಲ್ಲಿ ಈ ಸರಕಾರದ ಧೋರಣೆಗಳು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಹೂಡಿಕೆಯ ವಿಷಯದಲ್ಲಿ ಪ್ರಭುತ್ವ ಅಥವ ಸರಕಾರ ಹಿಂದಕ್ಕೆ ಸರಿಯಬೇಕು, ಜತೆಗೆ ಆರ್ಥಿಕ ವ್ಯವಸ್ಥೆಯ ಮೇಲಿನ ಹತೋಟಿಗಳನ್ನು ತೆಗೆದು ಹಾಕುತ್ತ ದೇಶಿ–ವಿದೇಶಿ ಖಾಸಗಿಯವರಿಗೆ ಅದನ್ನು ತೆರೆಯಬೇಕು ಎಂಬ ದಿಕ್ಕಿನಲ್ಲಿ ಸಾಗುತ್ತಿವೆ.

ರೈತರೊಂದಿಗೆ ಇಂತಹ ವಿಶ್ವಾಸಘಾತದ ವಿರುದ್ಧ ಪ್ರತಿಭಟಿಸಲು ಎದ್ದು ನಿಲ್ಲಬೇಕು, ಕೃಷಿಯಲ್ಲಿ ಕಾರ್ಪೊರೇಟ್ ಹಿತಗಳನ್ನು ಪ್ರೋತ್ಸಾಹಿಸುವ ಯಾವುದೇ ಪ್ರಯತ್ನವನ್ನು ಪ್ರತಿರೋಧಿಸಬೇಕು ಎಂದು ಎಐಕೆಎಸ್ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ. ■

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅಪಾಯಗಳು

ಗುರುರಾಜ ದೇಸಾಯಿ &
ಆರ್. ರಾಮಕೃಷ್ಣ

ಕೇಂದ್ರ ಸರಕಾರದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ 2019ರ ಕರಡು ದಾಖಲೆಯು ಸಾರ್ವಜನಿಕ ಚರ್ಚೆಗೆ ಇಟ್ಟಿದೆ. ಎರಡನೆಯ ಅವಧಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಎನ್.ಡಿ.ಎ ಸರಕಾರ ಯಾರ ಜೊತೆಯೂ ಚರ್ಚಿಸದೆ ಏಕ ಮುಖವಾಗಿ ಈ ಕರಡನ್ನು ತಯಾರಿಸಿದೆ ಎಂದು ಹಲವಾರು ಶಿಕ್ಷಣ ತಜ್ಞರು ವಿಶ್ಲೇಷಿಸಿದ್ದಾರೆ. ತಮಿಳುನಾಡಿನಲ್ಲಿ ತೀವ್ರ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಕೆಲ ಪದಗಳನ್ನು ತೆಗೆಯಲಾಗಿದೆ. ಶಿಕ್ಷಣದ ಖಾಸಗೀಕರಣ ಹಾಗೂ ಕೋಮುವಾದೀಕರಣಕ್ಕೆ ಈ ನೀತಿಯು ಮುಖಮಾಡಿ ನಿಂತಿದೆ.

ಭಾರತ ದೇಶವು ಹಲವು ರಾಷ್ಟ್ರೀಯತೆಗಳನ್ನು ಒಳಗೊಂಡ ಒಂದು ಒಕ್ಕೂಟ ರಾಷ್ಟ್ರವಾಗಿದೆ. ಶಿಕ್ಷಣವು ಈ ರಾಷ್ಟ್ರದಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳೆರಡಕ್ಕೂ ಸೇರಿದ ಸಮವರ್ತಿ ಪಟ್ಟಿಯಲ್ಲಿದೆ. ಇಂತಹ ಸನ್ನಿವೇಶದಲ್ಲಿ ಇಂತಹ ಒಂದು ಪ್ರಮುಖ ಶೈಕ್ಷಣಿಕ ದಾಖಲೆಯು ದೇಶದಾದ್ಯಂತ ವ್ಯಾಪಕ ಚರ್ಚೆಗೆ ಒಳಗಾಗಬೇಕು. ಆದರೆ ಕೇಂದ್ರ ಸರಕಾರವು ಈ ದಾಖಲೆಯನ್ನು ಕೇವಲ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರವೇ ಒದಗಿಸಿದ್ದು ಈ ವಿಷಯದಲ್ಲಿ ಕೇಂದ್ರ ಸರಕಾರದ ಧೋರಣೆ ಏನು ಎಂಬುದಕ್ಕೆ ಸಾಕ್ಷಿಯಾಗಿದೆ. ದೇಶದ ಸಂವಿಧಾನದ 8 ನೇ ಪರಿಚ್ಛೇಧದಲ್ಲಿ ಮಾನ್ಯತೆ ನೀಡಲಾಗಿರುವ ಎಲ್ಲ 22 ರಾಷ್ಟ್ರೀಯ ಭಾಷೆಗಳಲ್ಲಿಯೂ ಈ ದಾಖಲೆಯನ್ನು ಒದಗಿಸುವುದು ಕೇಂದ್ರ ಸರಕಾರದ ಕರ್ತವ್ಯವಾಗಿತ್ತು. ಇಂಗ್ಲೀಷಿನ ಯಜಮಾನಿಕೆ ಹಾಗೂ ಹಿಂದಿ ಹೇರಿಕೆಯು ಇಲ್ಲಿ ಎದ್ದು ಕಾಣುತ್ತಿದೆ. ತೀವ್ರ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಕನ್ನಡ ಸೇರಿದಂತೆ ಭಾರತದ ಇತರ ರಾಷ್ಟ್ರೀಯ ಭಾಷೆಗಳಿಗೆ ಅನುವಾದಿಸಲಾಯಿತು.

ಶಿಕ್ಷಣ ರಂಗದ ಸಮಸ್ಯೆಗಳ ಬಗ್ಗೆ ಆಳವಾದ ವಿಶ್ಲೇಷಣೆ ಇಲ್ಲ:

ಭವಿಷ್ಯದ ಶಿಕ್ಷಣ ನೀತಿಯ ಬಗೆಗೆ ಮಾತನಾಡುವ ಈ ಕರಡು ದಾಖಲೆಯಲ್ಲಿ ಪ್ರಸ್ತುತ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕಾಡುತ್ತಿರುವ ಗಂಭೀರ ಸಮಸ್ಯೆಗಳೇನು, ಬಿಕ್ಕಟ್ಟುಗಳೇನು ಎಂಬ ವಿಶ್ಲೇಷಣೆಯೇ ಇದರಲ್ಲಿ ಇಲ್ಲವಾಗಿದೆ, ಈ ನಿಟ್ಟಿನಲ್ಲಿ ಬಹಳ ಮುಖ್ಯವಾಗಿ ವಿವಿಧ ಹಂತಗಳಲ್ಲಿ ಶಾಲೆಯನ್ನು ಬಿಡುವ ಮಕ್ಕಳ ಬಗೆಗೆ (Drop Outs) ಯಾವುದೇ ರೀತಿಯ ಪ್ರಸ್ತಾಪ ಇಲ್ಲದಿರುವುದು ಕರಡು ದಾಖಲೆಯ ಬಹುದೊಡ್ಡ ದೋಷ.

ರಾಜ್ಯ ಭಾಷೆಗೆ ಧಕ್ಕೆ:

ಸಂಸ್ಕೃತ–ಹಿಂದಿಗಳಿಗಿರುವ ಆದ್ಯತೆ ರಾಜ್ಯ ಭಾಷೆಗಳಿಗಿಲ್ಲ. ಮಕ್ಕಳಿಗೆ ಶಿಕ್ಷಣವನ್ನು ಅದರಲ್ಲೂ ಪ್ರಾಥಮಿಕ ಶಿಕ್ಷಣವನ್ನು ಪರಿಸರದ ಭಾಷೆಯಲ್ಲಿ(ರಾಜ್ಯ ಭಾಷೆಯಲ್ಲಿ) ನೀಡುವುದು ತುಂಬ ಮುಖ್ಯ. ಆದರೆ ಈ ದಾಖಲೆಯಲ್ಲಿ ಸಂಸ್ಕ್ರತ ಮತ್ತು ಹಿಂದಿ ಭಾಷೆಗಳಿಗೆ ನೀಡಿರುವ ಆದ್ಯತೆಯನ್ನು ರಾಜ್ಯ ಭಾಷೆಗಳಿಗೆ ನೀಡಲಾಗಿಲ್ಲ. ಹಿಂದಿ ಮತ್ತು ಸಂಸ್ಕತ ಭಾಷೆಗಳ ಹೇರಿಕೆಯ ಹುನ್ನಾರಗಳು ಈ ದಾಖಲೆಯಲ್ಲಿ ಕಂಡು ಬರುತ್ತದೆ. ಈ ನೀತಿ ವಾಪಸ್ಸಾಗಬೇಕು.

'ಕೇಂದ್ರಿಕೃತ ಶಾಲಾ ಸಂಕೀರ್ಣ' ವಿಫಲ ಯೋಜನೆ:

ಸಣ್ಣ ಸಣ್ಣ ಶಾಲೆಗಳಿಗೆ ಉತ್ತಮ ಕಟ್ಟಡ, ಆಟದ ಮೈದಾನ, ಗ್ರಂಥಾಲಯ, ಪ್ರಯೋಗಾಲಯ ಮುಂತಾದ ಸೌಲಭ್ಯಗಳನ್ನು ಕೊಡಲು ಸಾಧ್ಯವಿಲ್ಲ, ಆದ್ದರಿಂದ ಸಣ್ಣ ಸಣ್ಣ ಶಾಲೆಗಳನ್ನು ಮುಚ್ಚಿ ಕೇಂದ್ರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ 'ಸುಸಜ್ಜಿತ' ಶಾಲಾ ಸಂಕೀರ್ಣಗಳನ್ನು ನಿರ್ಮಿಸಬೇಕೆಂದು ಕರಡು ದಾಖಲೆಯಲ್ಲಿ ಪ್ರಸ್ತಾಪಿತವಾಗಿದೆ. ಈ ಧೋರಣೆಯು ಮಕ್ಕಳ ವಾಸಸ್ಥಾನಗಳಿಗೆ, ಜನವಸತಿ ಪ್ರದೇಶಗಳಿಗೆ ಹತ್ತಿರದಲ್ಲಿ ಶಾಲಾ ಸೌಲಭ್ಯ ದೊರೆಯಬೇಕೆಂಬ ಶಿಕ್ಷಣಪರ ಧೋರಣೆಗೆ ತದ್ವಿರುದ್ಧವೂ, ಅಪಾಯಕಾರಿಯೂ ಆಗಿದೆ. ಶಾಲೆ ದೊಡ್ಡದಿರಲಿ ಚಿಕ್ಕದಿರಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಟ್ಟಡ, ಮೈದಾನ, ಪ್ರಯೋಗಾಲಯ, ಗ್ರಂಥಾಲಯಗಳಂತಹ ಸೌಕರ್ಯಗಳನ್ನು ಕೊಡಬೇಕಾಗಿರುವುದರಿಂದ ಸಣ್ಣ ಸಣ್ಣ ಶಾಲೆಗಳಿಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಈ ಕೇಂದ್ರೀಕೃತ ಶಾಲಾ ಶಿಕ್ಷಣ ವ್ಯವಸ್ಥೆಯ ಸೂಚನೆಯನ್ನು ವಾಪಸ್ ಪಡೆಯಬೇಕು.

ಸಮಾನ ಶಿಕ್ಷಣ ನೀತಿ ಜಾರಿಗೆ ಬರಲಿ:

ರಾಜ್ಯ ಪಠ್ಯಕ್ರಮ, ಸಿಬಿಎಸ್‌ಇ, ಐಸಿಎಸ್‌ಇ ಮುಂತಾದ ನಾನಾ ಬಗೆಯ ಶಾಲಾ ಪಠ್ಯಕ್ರಮ ವ್ಯವಸ್ಥೆಗಳಿಗೆ ಬದಲಾಗಿ ಎಲ್ಲರಿಗೂ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸುವ ಸಮಾನ ಪಠ್ಯನೀತಿ, ಸಮಾನ ಶಿಕ್ಷಣ ನೀತಿಯ ಕುರಿತು ಈ ಕರಡಿನಲ್ಲಿ ಯಾವುದೇ ಪ್ರಸ್ತಾಪವಿಲ್ಲದಿರುವುದು ವಿಷಾದನೀಯವಾಗಿದೆ.

'ಸಿ.ಎ.ಬಿ.ಇ.' ರದ್ದು ಸರ್ವಾಧಿಕಾರಿ ಧೋರಣೆ:

ಈ ಹಿಂದೆ 'ಸೆಂಟ್ರಲ್ ಅಡ್ವೈಸರಿ ಬೋರ್ಡ್ ಆಫ್ ಎಜುಕೇಷನ್'–(ಸಿ.ಎ.ಬಿ.ಇ.) ಎಂಬ ಸಂಸ್ಥೆಯು ದೇಶದ ಶಿಕ್ಷಣ ನೀತಿಯ ಚೌಕಟ್ಟನ್ನು ನಿರ್ಧರಿಸುತ್ತಿತ್ತು. ಈ ಸಂಸ್ಥೆಯಲ್ಲಿ ಎಲ್ಲ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು, ಶಿಕ್ಷಣ ತಜ್ಞರುಗಳು ಇರುತ್ತಿದ್ದರು. ಶಿಕ್ಷಣ ತಜ್ಞರೇ ಸಂಸ್ಥೆಯ ಮುಖ್ಯಸ್ಥರಾಗಿರುತ್ತಿದ್ದರು. ಬ್ರಾತೃತ್ವ ತತ್ವದ ಆಧಾರದ ಮೇಲೆ ಶಿಕ್ಷಣ ನೀತಿಯ ಚೌಕಟ್ಟು ರೂಪಿಸಲಾಗುತ್ತಿತ್ತು. ಈ ಚೌಕಟ್ಟಿನ ಆಧಾರದಲ್ಲಿ ರಾಜ್ಯಗಳು ತಮ್ಮದೇ ಆದ ಶಿಕ್ಷಣ ನೀತಿಗಳನ್ನು ರೂಪಿಸಿಕೊಳ್ಳುತ್ತಿದ್ದವು. ಆದರೆ ಇದೀಗ 'ಸಿ.ಎ.ಬಿ.ಇ.' ಪರ್ಯಾಯವಾಗಿ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯ 'ರಾಷ್ಟ್ರೀಯ ಶಿಕ್ಷಣ ಆಯೋಗ' (ಆರ್.ಎಸ್.ಎ.)ದ ರಚನೆಯನ್ನು ಸೂಚಿಸಲಾಗುತ್ತಿದೆ. ಈ ನೀತಿ ಜಾರಿಗೆ ಬಂದಲ್ಲಿ ರಾಜ್ಯಗಳು 'ಆರ್.ಎಸ್.ಎ.' ರೂಪಿಸುವ ಪಠ್ಯಕ್ರಮವನ್ನು ಅನುವಾದ ಮಾಡಿ ನೀಡಬೇಕಾಗುತ್ತದಷ್ಟೆ. ಇದು ವಿಕೇಂದ್ರೀಕರಣ ತತ್ವಕ್ಕೆ ವಿರುದ್ಧವಾದ ಕೇಂದ್ರೀಕರಣದ ಮತ್ತು ಸರ್ವಾಧಿಕಾರಿ ಧೋರಣೆ. ಈ ನೀತಿ ವಾಪಸ್ಸಾಗಬೇಕು.

ಸಂಶೋಧನೆಯ ವಿಷಯಗಳ ಆಯ್ಕೆಯ ಮೇಲೆ ನಿಯಂತ್ರಣ ಸಲ್ಲದು: ಉನ್ನತ ಶಿಕ್ಷಣದಲ್ಲಿ ಸಂಶೋಧನೆಯ ವಿಷಯಗಳ ಆಯ್ಕೆಯ ಮೇಲೆ ನಿಯಂತ್ರಣ ಹೇರುವ ಪ್ರಸ್ತಾಪಿತ ಸೂಚನೆಯು ವಿಶ್ವವಿದ್ಯಾಲಯಗಳ ಮತ್ತು ಸಂಶೋಧನಾ ಸಂಸ್ಥೆಗಳ ಶೈಕ್ಷಣಿಕ ಸ್ವಾಯುತ್ತತೆಗೆ ಧಕ್ಕೆ ತರುವ ವಿಷಯವಾಗಿದೆ. ಅದೇ ರೀತಿ ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವ ವಿಶ್ವವಿದ್ಯಾಲಯ ಧನಸಹಾಯ ಆಯೋಗ(ಯು.ಜಿ.ಸಿ.)ಯನ್ನು ವಿಸರ್ಜಿಸಬೇಕೆಂಬ ನೀತಿಯು ಖಂಡನಾರ್ಹ.

ಶಿಕ್ಷಣದ 'ಭಾರತೀಕರಣ'ದ ಹೆಸರಿನಲ್ಲಿ ಕೋಮುವಾದೀಕರಣ:

ಕರಡು ದಾಖಲೆಯಲ್ಲಿ ಶಿಕ್ಷಣ ನೀತಿಗಳಿಗೆ ಆಧಾರವಾದ ತತ್ವಗಳಾಗಿ `Pride in India', `True Rootedness' ಎಂಬ ಶಬ್ಧಗಳನ್ನು ಬಳಸಲಾಗಿದೆ. ಹಿಂದೆ 2003–04 ರ ಸುಮಾರಿನಲ್ಲಿ ಆಗಿನ ಕೇಂದ್ರ ಸರಕಾರವು ಶಿಕ್ಷಣದ 'ಭಾರತೀಕರಣ'ದ ಹೆಸರಿನಲ್ಲಿ ಸತಿ ಪದ್ಧತಿಯನ್ನು ಮಹಿಳೆಯರ 'ಸ್ವಾಭಿಮಾನ', 'ಧೈರ್ಯ' ಎಂದೆಲ್ಲಾ ವೈಭವೀಕರಿಸುವ ಮತ್ತು ಅಲ್ಪಸಂಖ್ಯಾತ ಧರ್ಮಗಳನ್ನು ದ್ವೇಷಿಸಲು ಕಾರಣವಾಗುವಂತಹ ಕೋಮು ದ್ವೇಷದ ವಿಚಾರಗಳನ್ನು ಶಾಲೆಗಳ ಪಠ್ಯಗಳಲ್ಲಿ ಅಳವಡಿಸಿದ್ದನ್ನು ದೇಶ ಕಂಡಿದೆ. ಇದೀಗ ದೇಶದಲ್ಲಿ 'ಜ್ಯೋತಿಷ್ಯವನ್ನು ಅದು ವಿಜ್ಞಾನ ಎಂದು ಹೇಳಿ ವಿಶ್ವವಿದ್ಯಾಲಯಗಳಲ್ಲಿ ಕಲಿಸಲಾಗುತ್ತಿದೆ. ಭಾರತದ ಸಂಸ್ಕೃತಿ ಪರಂಪರೆಯ ಬಗೆಗೆ ಹೆಮ್ಮೆಪಡಬೇಕೆಂಬ ಹೆಸರಿನಲ್ಲಿ ಅತ್ಯಂತ ಅವೈಜ್ಞಾನಿಕವೂ, ಅವೈಚಾರಿಕವೂ, ಅಮಾನೀಯವೂ ಆದ ಮೌಲ್ಯಗಳನ್ನು, ವಿಷಯಗಳನ್ನು ಶಾಲಾ ಕಾಲೇಜುಗಳ ಪಠ್ಯಕ್ರಮಗಳಲ್ಲಿ ತುರುಕುವ ಅಪಾಯ ಎದುರಾಗುವ ಎಲ್ಲ ಸಾಧ್ಯತೆಗಳು ನಮ್ಮ ಮುಂದೆ ಇವೆ. ಹಿಂದಿ ಮತ್ತು ಸಂಸ್ಕೃತ ಭಾಷೆಗಳಿಗೆ ರಾಜ್ಯ ಭಾಷೆಗಳಿಗಿಂತ ಹೆಚ್ಚಿನ ಆದ್ಯತೆ ನೀಡಿ ಪ್ರಾದೇಶಿಕ/ರಾಜ್ಯ ಭಾಷೆಗಳನ್ನು ನಿರ್ಲಕ್ಷಿಸುವಂತಹ ಸೂಚನೆ ಈ ಕರಡು ದಾಖಲೆಯಲ್ಲಿದೆ.

ಇದಲ್ಲದೇ, ವೇದ ಪಾಠ ಶಾಲೆಗಳು ಮುಂತಾದ ಪರ್ಯಾಯ ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸುವ ಹೆಸರಿನಲ್ಲಿ ಅವುಗಳಿಗೆ ಮಾನ್ಯತೆ ನೀಡಿ ಅವುಗಳನ್ನು ಅಧಿಕೃತಗೊಳಿಸುವ ಸಾಧ್ಯತೆ ಕಾಣುತ್ತಿದೆ. ಅಂತಹ ಪ್ರಸ್ತಾಪ ಈ ಕರಡಿನಲ್ಲಿದೆ. ಇದರಿಂದ ದೇಶದಲ್ಲಿ ಧಾರ್ಮಿಕ ಮತ್ತು ಮತೀಯವಾದಿ ಶಕ್ತಿಗಳು ನಡೆಸುತ್ತಿರುವ ಅನಧಿಕೃತ ಶಿಕ್ಷಣ ಸಂಸ್ಥೆಗಳಿಗೂ ಮಾನ್ಯತೆ ದೊರಕಿಬಿಡಬಹುದಾದ ಅಪಾಯ ಎದುರಾಗುತ್ತದೆ.

ಶಿಕ್ಷಣಕ್ಕೆ ಹಣಕಾಸು ನೀಡಿಕೆ ಸ್ಪಷ್ಟ–ನಿರ್ದಿಷ್ಟ ಭರವಸೆ ಇಲ್ಲ:

ಇವುಗಳೆಲ್ಲವುಗಳ ಜೊತೆಗೆ ಒಟ್ಟು ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಿ, ಸದೃಢಗೊಳಿಸಲು ಅಗತ್ಯವಾದ ಹಣಕಾಸು ಬೆಂಬಲದ ಬಗೆಗೆ ಈ ಕರಡು ದಾಖಲೆಯಲ್ಲಿ ಯಾವುದೇ ಸ್ಪಷ್ಟ ಘೋಷಣೆ, ಬದ್ಧತೆ ಕರಡು ದಾಖಲೆಯಲ್ಲಿ ಕಾಣುವುದಿಲ್ಲ. ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿ.ಡಿ.ಪಿ.)ದ ಶೇ.6ರಷ್ಟನ್ನು, ರಾಜ್ಯ ಬಜೆಟ್ನಲ್ಲಿ 30% ರಷ್ಟು, ಕೇಂದ್ರ ಬಜೆಟ್ನಲ್ಲಿ 10% ಶಿಕ್ಷಣ ಕ್ಷೇತ್ರಕ್ಕೆ ಒದಗಿಸಬೇಕೆಂದು ಹಲವು ಶಿಕ್ಷಣ ತಜ್ಞರ ಶಿಫಾರಸ್ಸಿಗೆ ಈ ದಾಖಲೆಯಲ್ಲಿ ಯಾವುದೇ ಸ್ಥಾನ ದೊರೆತಿಲ್ಲ. ಆದ್ದರಿಂದ ಇದು ಶಿಕ್ಷಣದ ಖಾಸಗೀಕರಣ, ಅದರಲ್ಲೂ ಉನ್ನತ ಶಿಕ್ಷಣದ ಖಾಸಗೀಕರಣಕ್ಕೆ ಪ್ರೇರಕವಾಗಿಯೇ ಇದೆ ಎಂಬ ಟೀಕೆಗಳು ವ್ಯಕ್ತವಾಗಿವೆ.

ಇಂತಹ ಸಂದರ್ಭದಲ್ಲಿ ಎಲ್ಲ ಶಿಕ್ಷಣ ಪ್ರೇಮಿ ಶಕ್ತಿಗಳೂ ಜಾಗೃತರಾಗಬೇಕು. ಕರಡು ದಾಖಲೆಯ ಸಮರ್ಪಕ ಅಧ್ಯಯನಕ್ಕೆ ಮತ್ತು ವ್ಯಾಪಕ ಚರ್ಚೆಗೆ ಸೂಕ್ತ ಕಾಲಾವಕಾಶ ನೀಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು. ಅಧಿಕೃತವಾಗಿ ರಾಜ್ಯ ಭಾಷೆಗಳಲ್ಲಿ ಕರಡು ದಾಖಲೆ ಲಭ್ಯವಾದ ಮೇಲೆ ಈ ಕುರಿತ ಚರ್ಚೆ ಕನಿಷ್ಠ ಮೂರು ತಿಂಗಳ ಕಾಲಾವಕಾಶ ದೊರೆಯಬೇಕು ಎಂದು ಎಲ್ಲರೂ ಒತ್ತಾಯಿಸಬೇಕು. ಈ ಕರಡು ದಾಖಲೆಯ ಕುರಿತು ಶಿಕ್ಷಣಾಸಕ್ತರಾದ ಎಲ್ಲ ವಿಭಾಗಗಳ ಜನರ ನಡುವೆ ವ್ಯಾಪಕವಾದ ಚರ್ಚೆಗಳನ್ನು ಸಂಘಟಿಸಬೇಕು. ಅಷ್ಟು ಮಾತ್ರವಲ್ಲದೇ ಕರಡು ದಾಖಲೆಯಲ್ಲಿನ ಶಿಕ್ಷಣ ವಿರೋಧಿಯಾದ, ಪ್ರಗತಿ ವಿರೋಧಿಯಾದ ಸೂಚನೆಗಳೆಲ್ಲವನ್ನು ಗುರುತಿಸಿ ಈ ಕುರಿತು ವಿರೋಧವನ್ನು ವ್ಯಕ್ತಪಡಿಸಬೇಕು ಮತ್ತು ಅಗತ್ಯ ತಿದ್ದುಪಡಿ ಸೂಚನೆಗಳನ್ನು ಕಳುಹಿಸಿಕೊಡಬೇಕು.

ಇದೇ ಕರಡು ದಾಖಲೆಯಲ್ಲಿನ ಹಿಂದಿ ಹೇರಿಕೆಯ ನೀತಿಗೆ ದಕ್ಷಿಣ ಭಾರತದಲ್ಲಿ, ಮುಖ್ಯವಾಗಿ ತಮಿಳುನಾಡಿನಲ್ಲಿ ವ್ಯಕ್ತವಾದ ಕಡು ವಿರೋಧವನ್ನು ಪರಿಗಣಿಸಿ ಹಿಂದಿ ಹೇರಿಕೆಯ ಪ್ರಸ್ತಾಪವನ್ನು ಅಂದರೆ ಮೂರು ಭಾಷೆಗಳಲ್ಲಿ ಹಿಂದಿಯನ್ನು ಕಡ್ಡಾಯಗೊಳಿಸುವ ಧೋರಣೆಯನ್ನು ಕೇಂದ್ರ ಸರಕಾರ ಕೈಬಿಡಬೇಕಾಯಿತು ಎಂಬ ಅಂಶವನ್ನು ನಾವು ಈ ಸಂದರ್ಭದಲ್ಲಿ ನೆನಪಿಟ್ಟುಕೊಳ್ಳುವುದು ಒಳ್ಳೆಯದು.

ರಹಸ್ಯ ಅಜೆಂಡಾಗಳು:

ಡಾ. ಕಸ್ತೂರಿ ರಂಗನ್ ಅವರ ನೇತೃತ್ವದ ಸಮಿತಿಯು ಈ ಕರಡು ವರದಿಯನ್ನು ಸಿದ್ಧಪಡಿಸಿದೆ. ಡಾ. ಕಸ್ತೂರಿ ರಂಗನ್ ಅವರು ಸಮಿತಿಯ ಮುಖ್ಯಸ್ಥರಾದರೂ ಸಹ ಹಲವು ಸಮಿತಿಯ ಸದಸ್ಯರ ಕುರಿತು ಚರ್ಚೆಗಳಲ್ಲಿ ಆಕ್ಷೇಪ ವ್ಯಕ್ತವಾಗಿವೆ. ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಕೇಂದ್ರದ ಆಳುವ ಪಕ್ಷಕ್ಕೆ ಸೇರಿದ ಬಲಪಂಥೀಯ ಸಂಘಟನೆಗಳ ಪ್ರತಿನಿಧಿಗಳನ್ನು ಈ ಸಮಿತಿಯಲ್ಲಿ ಸದಸ್ಯರನ್ನಾಗಿ ನೇಮಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ವರದಿಯ ಹಲವು ಶಿಫಾರಸ್ಸುಗಳ ಹಿಂದೆ, ಈ ಹಿಂದೆ ಆದಂತೆ ಶಿಕ್ಷಣದ ಕೋಮುವಾದೀಕರಣ, ಕೇಸರೀಕರಣವನ್ನು ಸಾಧಿಸುವ ರಹಸ್ಯ ಅಜೆಂಡಾಗಳು ಕೆಲಸ ಮಾಡುತ್ತಿರುವುದು ಕಾಣುತ್ತದೆ ಎಂದು ಹಲವು ಶಿಕ್ಷಣ ತಜ್ಞರು ಎಚ್ಚರಿಸಿದ್ದಾರೆ.

'ಸ್ವಯಂ ಸೇವಕ'ರ ಪ್ರವೇಶಕ್ಕೆ ಅವಕಾಶ:

ಶಿಕ್ಷಣ ವ್ಯವಸ್ಥೆಯಲ್ಲಿ ಕೆಲಸ ಮಾಡಲು ನಿವೃತ್ತ ಸೈನಿಕರು, ನಿವೃತ್ತ ಶಿಕ್ಷಕರು ಮತ್ತು ಸ್ವಯಂ ಸೇವಕರಿಗೆ ಅವಕಾಶ ನೀಡುವ ಪ್ರಸ್ತಾವವು ಕರಡು ದಾಖಲೆಯಲ್ಲಿದೆ. ಸೂಕ್ತ ಶೈಕ್ಷಣಿಕ ಅರ್ಹತೆಯುಳ್ಳ ಶಿಕ್ಷಕರಷ್ಟೆ ಶಿಕ್ಷಣ ವ್ಯವಸ್ಥೆಯೊಳಗೆ ಬೋಧನೆ ಮಾಡಲು ಅವಕಾಶ ಇರಬೇಕು. ಇಲ್ಲವಾದಲ್ಲಿ ಸೇವೆಯ ಹೆಸರಿನಲ್ಲಿ ಭಾರತದ ಜಾತ್ಯತೀತ ಸಂವಿಧಾನವನ್ನು ಬುಡಮೇಲು ಮಾಡಬಯಸುವ ಶಕ್ತಿಗಳು ಶಿಕ್ಷಣ ವ್ಯವಸ್ಥೆಯೊಳಗೆ ಪ್ರವೇಶ ಪಡೆಯುವ ಸಾಧ್ಯತೆಗಳಿವೆ. ಇದರಿಂದ ಶಿಕ್ಷಕರ ಉದ್ಯೋಗ ಭದ್ರತೆಗೂ ಅಪಾಯ ಎದುರಾಗಲಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಶಿಕ್ಷಣ ಪ್ರೇಮಿಗಳು ಎಚ್ಚರಿಕೆಯಿಂದ ಕರಡು ದಾಖಲೆಯನ್ನು ಆಧ್ಯಯನ ಮಾಡುವುದು ಮತ್ತು ಅಗತ್ಯ ತಿದ್ದುಪಡಿಗಳನ್ನು ಸೂಚಿಸುವುದು ಅಗತ್ಯವಾಗಿದೆ.


ಸಾಮಾಜಿಕ ನ್ಯಾಯಕ್ಕೆ ಆಧ್ಯತೆ ಇಲ್ಲ:

ಜಾತ್ಯತೀತತೆ, ಸಾಮಾಜಿಕ ನ್ಯಾಯದ ಪರಿಕಲ್ಪನೆಗಳ ಕುರಿತು ಸರಿಯಾದ ಪ್ರಸ್ಥಾಪ ಇಲ್ಲ. ಮುಖ್ಯವಾಗಿ ಶಿಕ್ಷಣ ನೀತಿಗಳಿಗೆ ಆಧಾರವಾದ ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲೇಖಿಸುವಾಗ ಜಾತ್ಯತೀತತೆ (ಸೆಕ್ಯೂಲರಿಸಂ), ಸಮಾಜವಾದ ಮುಂತಾದ ತತ್ವಗಳ ಪ್ರಸ್ತಾಪವೇ ಇಲ್ಲವೆಂಬುದು ಆತಂಕಕಾರಿಯಾದ ವಿಷಯವಾಗಿದೆ. ಅದೇ ರೀತಿಯಾಗಿ ದೇಶವನ್ನು ಕಾಡುತ್ತಿರುವ ಗಂಭೀರ ಸಮಸ್ಯೆಗಳಾದ ಹಸಿವು, ಬಡತನ, ನಿರುದ್ಯೋಗ, ಅಸಮಾನತೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ಪ್ರಾದೇಶಿಕ ಅಸಮಾನತೆಯಂತಹ ಗಂಭೀರ ಸಮಸ್ಯೆಗಳ ನಿವಾರಣೆಯ ದೃಷ್ಟಿಯಿಂದ ಶಿಕ್ಷಣ ನೀತಿಗಳನ್ನು ನಿರೂಪಿಸುವ ದೃಷ್ಟಿಕೋನ ಈ ಕರಡು ದಾಖಲೆಯಲ್ಲಿ ಇಲ್ಲ, ನಮ್ಮ ಸಂವಿಧಾನದ ಅಂತಸ್ಸತ್ವವಾದ 'ಸಾಮಾಜಿಕ ನ್ಯಾಯ'ದ ತತ್ವಕ್ಕೆ ದಾಖಲೆಯಲ್ಲಿ ಆದ್ಯತೆ ನೀಡಲಾಗಿಲ್ಲವೆಂಬ ಟೀಕೆ ವ್ಯಕ್ತವಾಗಿದೆ.

ಅವೈಜ್ಞಾನಿಕ ಟಿ.ಇ.ಟಿ ಇರಬೇಕು ಎನ್ನುವ ಮೂಲಕ ನಿರುದ್ಯೋಗಿಗಳ ಜೊತೆ ಆಟವಾಡಲು ಸಿದ್ಧಗೊಂಡ ಯೋಜನೆಯಾಗಿದೆ. ಉದ್ಯೋಗದ ಬಗ್ಗೆ ಸರಿಯಾದ ಮಾಹಿತಿ, ಯೋಜನೆ ಈ ಕರುಡಿನಲ್ಲಿ ಕಾಣುತ್ತಿಲ್ಲ. ಸ್ಥಳೀಯ ಇತಿಹಾಸ, ಆರ್ಥಿಕತೆ, ರಾಜಕೀಯ, ಪ್ರೇಕ್ಷಣೀಯ ಸ್ಥಳಗಳನ್ನು ಪಠ್ಯಕ್ಕೆ ತೆಗೆದುಕೊಳ್ಳುವ ಪ್ರಸ್ತಾಪ ಇಲ್ಲ. ಐ.ಸಿ.ಡಿ.ಎಸ್. ಯೋಜನೆಯನ್ನು ಮುಚ್ಚುವ ಹುನ್ನಾರವನ್ನು ಈ ಯೋಜನೆಯ ಮೂಲಕ ಸಿದ್ಧಪಡಿಸಲಾಗಿದೆ. ಒಟ್ಟಾರೆ ಪೂರ್ವ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣ–ಸಂಶೋಧನಾ ಹಂತದವರೆಗೆ ಶೈಕ್ಷಣಿಕ ನೀತಿಗಳಲ್ಲಿ, ಶೈಕ್ಷಣಿಕ ವ್ಯವಸ್ಥೆಯ ಸಂರಚನೆಯಲ್ಲಿ, ಭಾಷಾ ನೀತಿ, ಬೋಧನೆ, ಮೌಲ್ಯಮಾಪನ, ಸಂಶೋಧನೆ, ಹಣಕಾಸು ನೀಡಿಕೆ ಮುಂತಾದ ನಾನಾ ವಿಷಯಗಳಲ್ಲಿ ಹಲವು ಬದಲಾವಣೆಗಳನ್ನು ಸೂಚಿಸುತ್ತಿರುವುದು ಸ್ಪಷ್ಟವಾಗಿದೆ.

ಇಂತಹ ಮಹತ್ವದ ದಾಖಲೆಯ ಕರಡನ್ನು, ಅದನ್ನು ಬಿಡುಗಡೆಗೊಳಿಸಲಾದ ಕೇವಲ ಒಂದು ತಿಂಗಳ ಕಾಲಾವಧಿಯೊಳಗೆ ಚರ್ಚಿಸಿ, ಸಲಹೆ–ಸೂಚನೆ ನೀಡಬೇಕು ಎಂಬ ಕೇಂದ್ರ ಸರಕಾರದ ನಿರೀಕ್ಷೆಯು ಆತುರಗೇಡಿತನದ್ದು ಎನ್ನದೇ ಬೇರೆ ದಾರಿ ಇಲ್ಲ. ನಾವು ಇದನ್ನು ವ್ಯಾಪಕವಾಗಿ ವಿರೋಧಿಸಿ ಸಾರ್ವಜನಿಕರ ನಡುವೆ ಚರ್ಚೆ ನಡೆಸಬೇಕಿದೆ. ಇಲ್ಲವಾದಲ್ಲಿ ಶಿಕ್ಷಣ ಇನ್ನಷ್ಟು ಮಾರಾಟಗೊಂಡು ಕೋಮುವಾದಕ್ಕೆ ಸಿಕ್ಕಿ ಬಿಡುವ ಅಪಾಯವಿದೆ. ●

ಅಚ್ಛೇ ದಿನ್‌ಗಳಲ್ಲಿ ಕಾರ್ಪೊರೇಟ್‌ಗಳಿಗೆ 4.3 ಲಕ್ಷ ಕೋಟಿ ರೂ.ಗಳ ರಿಯಾಯ್ತಿ



2014–2019ರ ಅವಧಿಯಲ್ಲಿ ದೇಶವನ್ನಾಳಿದ ಸರಕಾರ ಕಾರ್ಪೊರೇಟ್ ವಲಯಕ್ಕೆ ಒಟ್ಟು 4.32ಲಕ್ಷ ಕೋಟಿ ರೂ.ಗಳನ್ನು ದಯಪಾಲಿಸಿತು ಎಂದು ಬಜೆಟ್ ದಸ್ತಾವೇಜುಗಳಿಂದ ತಿಳಿದು ಬಂದಿದೆ(ಸುಬೋಧ್ ವರ್ಮಾ, ನ್ಯೂಸ್‌ಕ್ಲಿಕ್, ಜುಲೈ9).

ಈ ಮೊತ್ತ 2014–15ರಲ್ಲಿ 65,067 ಕೋಟಿ ಇತ್ತು. 2018–19ರಲ್ಲಿ ಇದು 1,08,785 ಕೋಟಿ ರೂ.ಗೇರಿದೆ, ಅಂದರೆ 66% ಏರಿಕೆ. ಸರಕಾರದ ನಿವ್ವಳ ಆದಾಯದಲ್ಲಿ ಈ ರಿಯಾಯ್ತಿಗಳ ಪ್ರಮಾಣ ಸರಾಸರಿ 7.%.

ಈ ಮೊತ್ತದ ಅಗಾಧತೆಯನ್ನು 2019–20ರಲ್ಲಿ ಸರಕಾರ ವಿವಿಧ ಬಾಬ್ತುಗಳಲ್ಲಿ ಮಾಡಬೇಕೆಂದಿರುವ ವೆಚ್ಚಗಳಿಂದ ಅರಿಯಬಹುದು:

ಮನರೇಗ: 60,000 ಕೋಟಿ ರೂ,

ಮಧ್ಯಾಹ್ನದ ಊಟ ಯೋಜನೆ:11,000 ಕೋಟಿ ರೂ.

ಅಂಗನವಾಡಿಗಳಿಗೆ 23,234. ಕೋಟಿ ರೂ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ: 62,659 ಕೋಟಿ

ಶಾಲೆ ಮತ್ತು ಸಾಕ್ಷರತೆ: 56,537 ಕೋಟಿ

ಉನ್ನತ ಶಿಕ್ಷಣ 38,317 ಕೋಟಿ ರೂ.

ಕುಡಿಯುವ ನೀರು ಮತ್ತು ಶುಚಿತ್ವಕ್ಕೆ 20,016 ಕೋಟಿ ರೂ. ಇತ್ಯಾದಿ.

ಇವೆಲ್ಲವನ್ನೂ ಮೀರಿದ ಮೊತ್ತವನ್ನು ಕಾರ್ಪೊರೇಟ್‌ಗಳಿಗೆ ಉತ್ತೇಜನೆ ನೀಡಲೆಂದು ರಿಯಾಯ್ತಿಗಳಾಗಿ ಕೊಡಲಾಗಿದೆ.

ಅಂದರೆ, ಉದಾ: ಬಡ ಅಂಗನವಾಡಿ ಕಂದಮ್ಮಗಳಿಗೆ ಮಾಡಬೇಕಾಗಿದ್ದ ವೆಚ್ಚದ ಸುಮಾರು ನಾಲ್ಕೂವರೆ ಪಟ್ಟು, ಬಡ ಗ್ರಾಮೀಣ ಕೂಲಿಕಾರರಿಗೆ ಉದ್ಯೋಗ ಖಾತ್ರಿಯ ಕಾನೂನಾತ್ಮಕ ಖಾತ್ರಿ ನೀಡಿದ' ಯೋಜನೆಯ 1,8 ಪಟ್ಟು! ಈ ಕೂಲಿಕಾರರು ಕೂಲಿ ಮಾಡಿ ಸಂಬಳಕ್ಕಾಗಿ ತಿಂಗಳಾನುಗಟ್ಟಲೆ ಕಾಯುತ್ತಿರಬೇಕು. ಅವರಿಕೆ ಕೂಲಿ ನೀಡಲು ಹಣ ಇಲ್ಲ, ಶಿಕ್ಷಣ ಮತ್ತು ಆರೋಗ್ಯದ ಮೂಲರಚನೆಗಳಿಗೆ ವೆಚ್ಚ ಮಾಡಲು ಸರಕಾರದ ಬಳಿ ಹಣ ಇಲ್ಲ, ರೈಲ್ವೆ ಮೂಲರಚನೆಯನ್ನು ವಿಸ್ತರಿಸಲು ಹಣ ಇಲ್ಲ, ನೀರಾವರಿ ವಿಸ್ತರಿಸಲು ಹಣ ಇಲ್ಲ, ಆದ್ದರಿಂದ ಪಿ.ಪಿ.ಪಿ.(ಖಾಸಗಿ–ಸಾರ್ವಜನಿಕ ಭಾಗೀದಾರಿಕೆ) ಅನಿವಾರ್ಯವಾಗಿದೆ ಎಂದೆಲ್ಲ ಕೊಡುವ ಕಾರಣಗಳು ಎಷ್ಟು ಟೊಳ್ಳು ಎಂಬುದು ಸ್ಪಷ್ಟವಾಗುತ್ತದೆ ಎನ್ನುತ್ತಾರೆ ಪರಿಣಿತರು.

ಏನು ಮತ್ತು ಯಾಕೆ ಈ ರಿಯಾಯ್ತಿಗಳು? ಇವನ್ನು ಸರಕಾರ "ಆರಿಸಿದ ತೆರಿಗೆದಾರರಿಗೆ ಪರೋಕ್ಷ ಸಬ್ಸಿಡಿ" ಎಂದು ನಿರೂಪಿಸುತ್ತದೆ. ನಿಜ, ಇದನ್ನು ಬಿಜೆಪಿ ಸರಕಾರ ಆರಂಭಿಸಿದ್ದಲ್ಲ. ಬಂಡವಾಳಶಾಹಿ–ಭೂಮಾಲಕ ವರ್ಗಗಳ ಪ್ರಭುತ್ವ ಮೊದಲಿಂದಲೂ ಇಂತಹ ರಿಯಾಯ್ತಿಗಳನ್ನು ಕೊಡುತ್ತ ಬಂದಿದೆ. ಆದರೆ 2006–07ರಲ್ಲಿ ಮೊದಲ ಬಾರಿಗೆ ಬಜೆಟ್ ದಸ್ತಾವೇಜಿನಲ್ಲಿ 'ಬಿಟ್ಟು ಕೊಟ್ಟ ಆದಾಯಗಳು' ಎಂದು ಇದರ ಮೊತ್ತವನ್ನು ನಮೂದಿಸಲಾರಂಭವಾಯಿತು. ಈಗ ಬಿಜೆಪಿ ಸರಕಾರ "ತೆರಿಗೆ ಖರ್ಚುಗಳು" ಎಂದು 2015–16ರಿಂದ ನಮೂದಿಸುತ್ತಿದೆ.

ಎಡಪಕ್ಷಗಳ 'ಹಂಗಿಲ್ಲದ' ಯುಪಿಎ–2 ಸರಕಾರದ ಅವಧಿಯಲ್ಲಿ ಇದರ ಮೊತ್ತ 3.52ಲಕ್ಷ ಕೋಟಿ ರೂ.ಗೇರಿತು. ಅದನ್ನು ಇಳಿಸಿ, ಕಾಂಗ್ರೆಸ್–ಮುಕ್ತ ಭಾರತ ಕಟ್ಟುತ್ತೇನೆಂದ ಬಿಜೆಪಿ ಸರಕಾರ ಈ ಕಾಂಗ್ರೆಸ್ ಪರಂಪರೆಯನ್ನು ಮುಂದುವರಿಸಿತು, ಮಾತ್ರವಲ್ಲ, ಅದನ್ನೂ ಮೀರಿಸಿದೆ, 22% ದಷ್ಟು! ಈ ಪ್ರವೃತ್ತಿ ಇನ್ನಷ್ಟು ತೀವ್ರಗೊಳ್ಳುವ ಸಂಕೇತವನ್ನು 'ಭಾರೀ ಜನಾದೇಶ'ದ ನಂತರ ಮಂಡಿಸಿರುವ ಬಜೆಟ್ ನೀಡಿದೆ.

ಕಾರ್ಪೊರೇಟ್‌ಗಳಿಗೆ ಇಂತಹ ಉತ್ತೇಜನೆಗಳನ್ನು ಕೊಟ್ಟರೆ ಅವು ಉದ್ಯೋಗಾವಕಾಶ ನಿರ್ಮಾಣಗಳನ್ನು ಹೆಚ್ಚಿಸುತ್ತವೆ ಎಂಬುದು ಈ ಸರಕಾರಗಳ ನಂಬಿಕೆ. ಆದರೆ ಕಳೆದ 5 ವರ್ಷಗಳಲ್ಲಿ ಮೋದಿ–1 ಸರಕಾರ ದಯಪಾಲಿಸಿದ 4.32 ಲಕ್ಷ ಕೋಟಿ ರೂ.ಗಳ ದೇಶಕ್ಕೆ ಅವರು ಆಶ್ವಾಸನೆ ನೀಡಿದ್ದ 10 ಕೋಟಿ ಉದ್ಯೋಗಗಳನ್ನಂತೂ ನಿರ್ಮಿಸಲೇ ಇಲ್ಲ, ಬದಲಿಗೆ, ಹಿಂದಿನ 45 ವರ್ಷಗಳಲ್ಲೇ ಕಾಣದಷ್ಟು ನಿರುದ್ಯೋಗವನ್ನು ದೇಶ ಕಾಣುವಂತಾಯಿತು.

'ನಯಾಭಾರತ್' ಬಜೆಟ್‌ನಲ್ಲೂ ಮುಂದುವರೆದಿದೆ ಬಡವರ ಉಪೇಕ್ಷೆಯ ಪರಂಪರೆ

ಕಾರ್ಪೊರೇಟ್‌ಗಳಿಗೆ ರಿಯಾಯ್ತಿಗಳು ಮತ್ತು ಬಡವಿಭಾಗಗಳಿಗೆ ಕಡಿತಗಳ 'ಅಚ್ಛೇದಿನ್' ಪರಂಪರೆ ಈಗ ಘೋಷಿಸಿರುವ 'ನಯಾಭಾರತ್'ನಲ್ಲೂ ಮುಂದುವರೆದಿದೆ ಎಂಬುದಕ್ಕೆ ಕಳೆದ ವಾರ ಮಂಡಿಸಿದ ಈ 'ಹೊಸ' ಸರಕಾರದ ಮೊದಲ ಬಜೆಟ್ ಸಾಕ್ಷಿಯಾಗಿದೆ.

- ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಉದ್ಯೋಗಕ್ಕಾಗಿ ಬೇಡಿಕೆಗಳ ಪ್ರಮಾಣ ಅಗಾಧವಾಗಿ ಹೆಚ್ಚುತ್ತಿದೆ, ವಿಶೇಷವಾಗಿ ಕೃಷಿ ಬಿಕ್ಕಟ್ಟು ಮತ್ತು ಬರಗಾಲದ ಸನ್ನಿವೇಶದಲ್ಲಿ. 2018–19ರಲ್ಲಿ 9.11 ಕೋಟಿ ಮಂದಿ ಅರ್ಜಿ ಹಾಕಿದರು. ಇವರಲ್ಲಿ 1.34 ಕೋಟಿ, ಅಂದರೆ 15% ಮಂದಿಗೆ ಉದ್ಯೋಗ ಸಿಗಲಿಲ್ಲ. ಕಾರಣ ಅದಕ್ಕೆ ನೀಡಿದ ಬಜೆಟ್ ಹಣ ಖಾಲಿಯಾಗಿತ್ತು. ಪರಿಷ್ಕೃತ ಅಂದಾಜಿನ ಪ್ರಕಾರ ಇದಕ್ಕೆ ರೂ.61,084 ಕೋಟಿ ರೂ. ನೀಡಲಾಗಿತ್ತು. ಇದು ಒಟ್ಟು ವೆಚ್ಚದಲ್ಲಿ 2.49% ವಾಗಿತ್ತು. ಸಹಜವಾಗಿಯೇ ಬಡಜನಗಳ ಅಗತ್ಯಗಳನ್ನು ನೋಡಿದರೆ, ಮತ್ತು ಹಣದುಬ್ಬರವನ್ನು, ಬರಗಾಲವನ್ನು ಗಮನಿಸದೆಯೂ ಕನಿಷ್ಟ 15% ಹೆಚ್ಚು ಹಣ ನೀಡಬೇಕಾಗಿತ್ತು. ಆದರೆ ಕೊಟ್ಟಿರುವುದು ಪರಿಷ್ಕೃತ ಅಂದಾಜಿಗಿಂತಲೂ ಕಡಿಮೆ, ಕೇವಲ 60,000 ಕೋಟಿ ರೂ.ಒಟ್ಟು ವೆಚ್ಚದ 2.15% ಮಾತ್ರ.
- ಮಧ್ಯಾಹ್ನದ ಊಟ ಯೋಜನೆಗೆ 11,000 ಕೋಟಿ ರೂ. ನೀಡಲಾಗಿದೆ, ಇದು ಒಟ್ಟು ವೆಚ್ಚದ 0.39% 2014–15ರಲ್ಲಿ ಇದು 0.63% ಇತ್ತು. ಅದರೆ ಇದರ ಅಗತ್ಯ ಇರುವ ಮಕ್ಕಳ ಸಂಖ್ಯೆಯೇನೂ ಅರ್ಧಕ್ಕೆ ಇಳಿದಿಲ್ಲ, ಬದಲಿಗೆ ಬಹಳಷ್ಟು ಮಕ್ಕಳಿಗೆ ಈಗಲೂ ಇದು ಸಿಗುತ್ತಿಲ್ಲ. ಉದಾ: ಬಿಹಾರದಲ್ಲಿ ಕಳೆದ ವರ್ಷ 41% ಬಡಮಕ್ಕಳಿಗೆ ಇದು ಲಭ್ಯವಾಗಲಿಲ್ಲ.
- ವಿಧವೆಯರಿಗೂ ಸೇರಿದಂತೆ ವಿವಿಧ ಪೆನ್ಷನ್ ಯೋಜನೆಗಳನ್ನು ಒಳಗೊಂಡಿರುವ ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ(ಎನ್‌ಎಸ್‌ಎಪಿ) ಗೆ ನೀಡುವ ಹಣದ ಮೊತ್ತ ಒಟ್ಟು ವೆಚ್ಚದ 0.33% ಕ್ಕೆ ಇಳಿದಿದೆ. ಈ ಸರಕಾರದ ಆರಂಭದಲ್ಲಿ, 2014–15ರಲ್ಲಿ ಇದು 0.43% ಇತ್ತು.
- ಪರಿಶಿಷ್ಟ ಜಾತಿಗಳ ಕಲ್ಯಾಣದ ಹಲವಾರು ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ 5445.50 ಕೋಟಿ ರೂ., ಅಂದರೆ ಒಟ್ಟು ವೆಚ್ಚದ 0.2% ನೀಡಲಾಗಿದೆ. ಇದು ಕಳೆದ ವರ್ಷ 7609 ಕೋಟಿ ರೂ. ಅಂದರೆ ಒಟ್ಟು ವೆಚ್ಚದ 0.31% ದಷ್ಟಿತ್ತು. ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣದ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ನೀಡಲಾದ ಒಟ್ಟು ಮೊತ್ತದಲ್ಲಿ ಕಡಿತ ಮಾಡಲಾಗದಿದ್ದರೂ, ಹೆಚ್ಚಳವೇನೂ ಆಗಿಲ್ಲ. ಇದು ಕಳೆದ ಐದು ವರ್ಷಗಳಾದ್ಯಂತ 0.23% ದಿಂದ 0.25% ದ ನಡುವೆಯೇ ಉಳಿದಿದೆ.
- ಅಂಗನವಾಡಿ ಸೇವೆಗಳನ್ನೂ ಒಳಗೊಂಡಿರುವ ಐಸಿಡಿಎಸ್(ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು)ನ ವಿವಿಧ ಯೋಜನೆಗಳಿಗೆ ಸುಮಾರು 10% ದಷ್ಟು ಹೆಚ್ಚಿನ ಹಣ ನೀಡಲಾಗಿದೆ. ಆದರೆ ಒಟ್ಟು ವೆಚ್ಚದಲ್ಲಿ ಇದರ ಪ್ರಮಾಣವೂ ಇಳಿದಿದೆ.(ಮೇಲಿನ ಎಲ್ಲ ಅಂಕಿಅಂಶಗಳು, ಕೃಪೆ: ಪ್ರಥ್ವಿರಾಜ್ ರುಪಾವತ್, ನ್ಯೂಸ್‌ಕ್ಲಿಕ್, ಜುಲೈ 9)

ಸಬ್ ಕಾ ವಿಶ್ವಾಸ್ ಮತ್ತು ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿವೇತನ

ಬಜೆಟ್ ಪ್ರಕಟಣೆಗಳ ಮೊದಲು, ಮೋದಿ ಸರಕರ ಈ ಬಾರಿ ತನ್ನ 'ಸಬ್ ಕಾ ವಿಶ್ವಾಸ್' ಘೋಷಣೆಯ ಪ್ರಕಾರ, "ಕೋಮುವಾದದ ರೋಗವನ್ನು ನಿವಾರಿಸಲು" ಮತ್ತು "ತುಷ್ಟೀಕರಣದ ರಾಜಕೀಯ"ವನ್ನು ಕೊನೆಗಾಣಿಸಲು ಮುಂದಿನ ಐದು ವರ್ಷಗಳಲ್ಲಿ 5 ಕೋಟಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಕೊಡುತ್ತದೆ ಎಂದು ಪ್ರಕಟಿಸಲಾಗಿತ್ತು.

ಈಗ ಬಜೆಟ್ ಮಂಡನೆ ಆಗಿದೆ. ಹಣಕಾಸು ಮಂತ್ರಿಗಳ ಭಾಷಣದಲ್ಲಿ 'ಅಲ್ಪಸಂಖ್ಯಾತರು' ಎಂಬ ಪದ ಒಂದು ಬಾರಿಯೂ ಕೇಳಬರಲಿಲ್ಲ. ವಿವಿಧ ವಿದ್ಯಾರ್ಥಿವೇತನಗಳಿಗೆ ಹಣ ನೀಡಿಕೆಯಲ್ಲೂ ಹೆಚ್ಚಳವಾಗಿಲ್ಲ, ಕಡಿತವೇ ಆಗಿದೆ.(ಸಬ್‌ರಂಗ್ ಇಂಡಿಯಾ, ಜುಲೈ 8)

ವಿದ್ಯಾರ್ಥಿವೇತನಗಳಿಗಾಗಿ ಕೊಟ್ಟಿರುವ ಮೊತ್ತ ಕಳೆದ ವರ್ಷದ 2451 ಕೋಟಿ ರೂ. ನಿಂದ 2362 ಕೋಟಿಗೆ ಇಳಿದಿದೆ; ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಗಳಿಗೆ 1296 ಕೋಟಿಯಿಂದ 1220 ಕೋಟಿಗೆ ಇಳಿದಿದೆ; ಮೆಟ್ರಿಕೋತ್ತರ ವಿದ್ಯಾರ್ಥಿವೇತನಗಳಿಗೆ 500 ಕೋಟಿಯಿಂದ 496 ಕೋಟಿಗೆ ಇಳಿದಿದೆ.

ಮೌಲಾನಾ ಆಝಾದ್ ಫೌಂಡೇಶನ್‌ಗೆ ಬಜೆಟ್ ಹಣ 123 ಕೋಟಿ ರೂ.ಗಳಿಂದ 90 ಕೋಟಿಗೆ, ಮೌಲಾನಾ ಆಝಾದ್ ಫೆಲೋಶಿಪ್‌ಗಳಿಗೆ 155 ಕೋಟಿಯಿಂದ 153 ಕೋಟಿಗೆ ಇಳಿಕೆಯಾಗಿದೆ.ಎರಡು ವರ್ಷಗಳ ಹಿಂದೆ ಮುಸ್ಲಿಮ್ ಯುವಜನರಿಗೆ ಶಿಕ್ಷಣ ಒದಗಿಸುವ ಹೆಸರಿನಲ್ಲಿ ಹಜ್ ಸಬ್ಸಿಡಿಯನ್ನು ನಿಲ್ಲಿಸಲಾಯಿತು. ಆದರೆ ಈ ಆಶಯವೂ ಈ ಬಜೆಟಿನಲ್ಲಿ ಬಿಂಬಿತವಾಗಿಲ್ಲ.

ಅಲ್ಪಸಂಖ್ಯಾತ ವ್ಯವಹಾರಗಳ ಮಂತ್ರಾಲಯಕ್ಕೆ 'ಸಬ್ ಕಾ ವಿಶ್ವಾಸ್' ದಿನಗಳಲ್ಲಿ ನೀಡಿರುವ ಬಜೆಟ್ ಹಣ 4700 ಕೋಟಿ ರೂ, ಅಂದರೆ ಕಳೆದ ವರ್ಷದಷ್ಟೇ.


'ನಯಾಭಾರತ್'ನಲ್ಲಿ 'ಬೇಟಿ ಬಚಾವೊ'



'ನೀವು ನಿಮ್ಮ ರಾಜಕೀಯ ಮುಂದುವರೆಸಿ, ನಮಗೆ ಶಾಂತಿಯಿಂದ ಬದುಕಲು ಬಿಡಿ' ಇದು ಉತ್ತರಪ್ರದೇಶದ ಬರೇಲಿಯ ಶಾಸಕ ರಾಜೇಶ್ ಮಿಶ್ರ ಅಲಿಯಾಸ್ ಪಪ್ಪು ಭರ್ತ್ವಲ್ ಮಗಳು 23 ವರ್ಷದ ಸಾಕ್ಷಿ ಮಿಶ್ರ ತನ್ನ ತಂದೆಗೆ ಸಾಮಾಜಿಕ ಮಾಧ್ಯಮದಲ್ಲಿ ಒಂದು ವೀಡಿಯೋ ಮೂಲಕ ಮಾಡಿರುವ ಮನವಿ. ತನ್ನ ಗಂಡನ ಕುಟುಂಬದವರು ಒಳ್ಳೆಯ ಮನುಷ್ಯರು, ಪ್ರಾಣಿಗಳಲ್ಲ, ಅವರೊಂದಿಗೆ ತಾನು ಸುಖವಾಗಿರುತ್ತೇನೆ ಎಂದು ಹೇಳುತ್ತಲೇ ತನಗೆ, ತನ್ನ ಗಂಡನಿಗೆ ಮತ್ತು ಆತಮ ಕುಟುಂಬದವರಿಗೆ ಏನೇ ಆದರೂ ಅದಕ್ಕೆ ತಂದೆ, ಅಣ್ಣ ಮತ್ತು ಅವರ ಬಂಟರು ಕಾರಣವಾಗುತ್ತಾರೆ ಎಂದೂ ಎಚ್ಚರಿಸಿದ್ದಾಳೆ. ಆಕೆಯ ಪ್ರಕಾರ ದಲಿತ ಯುವಕ ಅಜಿತೇಶ್‌ನೊಂದಿಗೆ ಆಕೆ ಸ್ವಯಮಿಚ್ಛೆಯಿಂದ ಮದುವೆಯಾಗಿದ್ದು ಇದು ಆಕೆಯ ತಂದೆಗೆ ಮತ್ತು ಅಣ್ಣ(ವಿಕಿ ಭರ್ತ್ವಲ್)ನಿಗೆ ಇಷ್ಟವಿಲ್ಲ. ಅವರ ಬಂಟರು ಈ ದಂಪತಿಗಳನ್ನು ಬೆನ್ನಟ್ಟಿದ್ದು ಈ ಬಗ್ಗೆ ಸಾಕ್ಷಿ ಮಿಶ್ರ ಇದನ್ನು ಎದುರಿಸಲು ಎರಡು ವೀಡಿಯೋಗಳನ್ನು ಅಪ್‌ಲೋಡ್ ಮಾಡಿದ್ದಾಳೆ, ಒಂದರಲ್ಲಿ ಆಕೆ ತನ್ನ ತಂದೆಗೆ ಮತ್ತು ಅಣ್ಣನಿಗೆ ಈ ಬೇಟೆಯನ್ನು ನಿಲ್ಲಿಸಲು ಮನವಿ ಮಾಡಿಕೊಂಡಿದ್ದರೆ, ಇನ್ನೊಂದರಲ್ಲಿ ಇಬ್ಬರೂ ಶಾಸಕ ಮತ್ತು ಆತನ ಮಗ ಮತ್ತು ಅವರು ಕಳಿಸಿರುವವರು ಎನ್ನಲಾದ ಬಂಟರಿಂದ ರಕ್ಷಣೆ ಕೋರಿದ್ದಾರೆ.


ಈ ನಡುವೆ ಆ ಶಾಸಕ ತಾನೇನೂ ಈ ದಂಪತಿಗಳನ್ನು ಬೆನ್ನಟ್ಟಲು ಗೂಂಡಾಗಳನ್ನು ಕಳಿಸಿಲ್ಲ, ಆಕೆ ತನಗೆ ಸರಿಕಂಡಂತೆ ನಿರ್ಧರಿಸಲು ಸ್ವತಂತ್ರಳು ಎಂದಿರುವುದಾಗಿ ವರದಿಯಾಗಿದೆ. ಈತ ಬಿಜೆಪಿ ಶಾಸಕನಾಗಿರುವುದು ಕೇವಲ ಆಕಸ್ಮಿಕವಿರಬಹುದು.

ಅತ್ತ ಗುಜರಾತಿನ ಮಾಜಿ ಬಿಜೆಪಿ ಎಂಪಿ ದೀನು ಬೋಘ ಸೋಲಂಕಿಗೆ, ಇತರ ಆರು ಮಂದಿಯೊಂದಿಗೆ ಆರ್‌ಟಿಐ ಕಾರ್ಯಕರ್ತ ಅಮಿತ್ ಜೇಟ್ವಾ ಕೊಲೆ ಕೇಸಿನಲ್ಲಿ ಜೀವಾವಧಿ ಶಿಕ್ಷೆಯಾಗಿದೆ.



ಪ್ರಧಾನ ಮಂತ್ರಿಗಳು ಗಾಂಧೀ ಜಯಂತಿಯ 150ನೇ ವಾರ್ಷಿಕೋತ್ಸವದ ದಿನವಾದ ಅಕ್ಟೋಬರ್ 2ರಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮ ದಿನವಾದ ಅಕ್ಟೋಬರ್ 31 ರ ವರೆಗೆ ಎಲ್ಲ ಬಿಜೆಪಿ ಸಂಸತ್ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ 150 ಕಿ.ಮೀ. ಪಾದಯಾತ್ರೆ ನಡೆಸಬೇಕು ಎಂದು ತಾಕೀತು ಮಾಡಿರುವುದು ಬಹಳಷ್ಟು ವ್ಯಂಗ್ಯಚಿತ್ರಕಾರರ ಗಮನ ಸೆಳೆದಿದೆ. ಅವುಗಳಲ್ಲಿ ಒಂದು ಇಲ್ಲಿದೆ– ಪ್ರಸಕ್ತ ಕೇಂದ್ರ ಗೃಹಮಂತ್ರಿ–ಬಿಜೆಪಿ ಅಧ್ಯಕ್ಷರ ನೇತೃತ್ವದಲ್ಲಿ ಗುಜರಾತಿನ ಅಹಮದಾಬಾದಿನಲ್ಲಿ ನಡೆಯಬಹುದಾದ ಪಾದಯಾತ್ರೆಯ ಕಲ್ಪನೆ(ಕೃಪೆ: ಬಿಬಿಸಿ ನ್ಯೂಸ್–ಹಿಂದಿ). ದೇಶದ ಮೊದಲ ಕೇಂದ್ರ ಗೃಹಮ'ಂತ್ರಿಗಳಾಗಿ ಸರ್ದಾರ್ ಪಟೇಲ್ ಗಾಂಧೀಜಿಯ ಹತ್ಯೆಗಾಗಿ ಆರೆಸ್ಸೆಸ್ ನ್ನು ನಿಷೇಧಿಸಿದ್ದರು ಎಂಬುದನ್ನು ಕೂಡ ಇಲ್ಲಿ ನೆನಪಿಸಿಕೊಳ್ಳಬಹುದು.

ತೆರಿಗೆ ಆದಾಯದ ಬೆಳವಣಿಗೆಯಲ್ಲಿ ಜಡತ್ವ ಏಕೆ?



ಜಿಎಸ್‌ಟಿ ವ್ಯವಸ್ಥೆಯೇ ಕೇಂದ್ರ ಸರ್ಕಾರದ ತೆರಿಗೆ ಆದಾಯದ ಬೆಳವಣಿಗೆ ಜಡಗೊಳ್ಳುವಲ್ಲಿ ಪ್ರಧಾನ ದೋಷಿ. ಆರ್ಥಿಕ ಹಿಂಜರಿತದ ಕಾರಣದಿಂದಾಗಿಯೇ ಜಿಎಸ್‌ಟಿ ಆದಾಯದ ಬೆಳವಣಿಗೆ ಜಡಗೊಳ್ಳುತ್ತಿದೆ ಎಂಬ ವಿವರಣೆಯು ಸಮರ್ಥನೀಯವಲ್ಲ. ಹಾಗಾಗಿ, ಜಿಎಸ್‌ಟಿ ವ್ಯವಸ್ಥೆಯಲ್ಲಿಯೇ ಏನೋ ಒಂದು ದೋಷವಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ, ಜಿಎಸ್‌ಟಿ ಜಾರಿಯ ಕ್ರಮವು ಕಿರು ಉತ್ಪಾದನಾ ವಲಯದ ಮೇಲೆ, ಮುಖ್ಯವಾಗಿ ಅಕೌಂಟೆಂಟುಗಳ ದುಬಾರಿ ಸೇವೆಯನ್ನು ಪಡೆಯಬೇಕಾದ್ದರಿಂದ ಭಾರೀ ಆಘಾತ ಉಂಟುಮಾಡಿದೆ ಎಂಬುದನ್ನು ನೆನಪಿಸಿಕೊಳ್ಳಬಹುದು. ಇನ್ನೊಂದೆಡೆಯಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳ ತೆರಿಗೆ ಹೊರೆ ಇಳಿದಿರುವುದು ಕಾಣುತ್ತದೆ. ಜಿಎಸ್‌ಟಿ ಆಳ್ವಿಕೆಗೆ ಹೊರಳಿದ್ದ ಒಂದು ಕಾರಣವೇ ಆದಾಯದ ಬೆಳವಣಿಗೆ ಮಂದವಾಗಲು ಸಾಲದು ಎಂಬಂತೆ, ಅದರ ಜೊತೆಯಲ್ಲಿ, ಎಲ್ಲ ಆರ್ಥಿಕ ವಹಿವಾಟುಗಳು ನಿಧಾನವಾಗಿ ಇಳಿಯುತ್ತಿರುವ ಇನ್ನೊಂದು ಕಾರಣವೂ ಸೇರಿಕೊಂಡಿರುವುದರಿಂದ, ಆದಾಯ ಬೆಳವಣಿಗೆಯ ಮಂದಗತಿ ಅಧಿಕವಾಗಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಕಳೆದ ಎರಡು ವರ್ಷಗಳಿಂದಲೂ ಕೇಂದ್ರ ಸರ್ಕಾರದ ತೆರಿಗೆ ಆದಾಯದ ಬೆಳವಣಿಗೆಯು ಎದ್ದು ಕಾಣುವಷ್ಟು ನಿಧಾನಗೊಂಡಿದೆ. 2016–17ರಲ್ಲಿ, ಒಟ್ಟು ತೆರಿಗೆ ಆದಾಯವು, ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ, 17% ಬೆಳೆದಿತ್ತು. ಮುಂದಿನ ವರ್ಷ 2017–18ರಲ್ಲಿ ನಿಧಾನಗೊಂಡು ಬೆಳವಣಿಗೆ 11%ಗೆ ಇಳಿಯಿತು. ಅದರ ಮುಂದಿನ ವರ್ಷ 2018–19ರಲ್ಲಿ ಮತ್ತಷ್ಟು ನಿಧಾನಗೊಂಡ ಬೆಳವಣಿಗೆಯು ಕೇವಲ 8%ಗೆ ಇಳಿಯಿತು. ಇದು ನಾಮಮಾತ್ರದ ಬೆಳವಣಿಗೆ. ಅಂದರೆ ಇದರಲ್ಲಿ ಹಣದುಬ್ಬರದ ಅಂಶ ಪರಿಗಣನೆಯಾಗಿರುವುದಿಲ್ಲ. ಹಾಗೆ ಪರಿಗಣಿಸಿದಾಗ ನಿಧಾನಗತಿ ಇನ್ನೂ ಹೆಚ್ಚಪರುವುದು ಕಾಣುತ್ತದೆ. 2018–19ರಲ್ಲಿ 8% ಇತ್ತೆಂದು ಹೇಳಲಾದ ನಾಮಮಾತ್ರದ ಬೆಳವಣಿಗೆಯು ವಾಸ್ತವಿಕ ಲೆಕ್ಕಾಚಾರದಲ್ಲಿ ಸುಮಾರು 3%ಗೆ ಇಳಿಯುತ್ತದೆ. ವಾಡಿಕೆಯಾಗಿ, ಜಿಡಿಪಿ ಬೆಳೆದ ಮಟ್ಟದಲ್ಲೇ ತೆರಿಗೆ ಆದಾಯವೂ ಬೆಳೆಯುತ್ತದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ, ಜಿಡಿಪಿಗೆ ಹೋಲಿಸಿದರೆ, ತೆರಿಗೆ ಆದಾಯದ ಅನುಪಾತ ಇಳಿಯುತ್ತಿದೆ.

ತೆರಿಗೆ ಆದಾಯದ ಬೆಳವಣಿಗೆಯ ನಿಧಾನಗತಿ, ಮೂಲತಃ, ಜಿಎಸ್‌ಟಿ ಆಳ್ವಿಕೆಗೆ ಹೊರಳಿದ್ದ ಕ್ರಮದಿಂದ ಆರಂಭವಾಗಿದೆ. ತೆರಿಗೆ ಆದಾಯದ ಬೆಳವಣಿಗೆ ಕುಂಠಿತಗೊಂಡಿರುವುದು ಪರೋಕ್ಷ ತೆರಿಗೆ ಆದಾಯದಲ್ಲೇ. ನೇರ ತೆರಿಗೆ ಆದಾಯದ ಬೆಳವಣಿಗೆಯು, ಜಿಡಿಪಿಯು ಅನುಪಾತಕ್ಕೆ ಹೋಲಿಸಿದರೆ, ಹೆಚ್ಚು ಕಡಿಮೆ ಸ್ಥಿರವಾಗಿದೆ ಮತ್ತು ಪರೋಕ್ಷ ತೆರಿಗೆ ಆದಾಯ ಇಳಿದಿದೆ. 2016–17ರಲ್ಲಿ ಪರೋಕ್ಷ ತೆರಿಗೆ ಆದಾಯದಲ್ಲಿ 20% ಬೆಳವಣಿಗೆಯಾಗಿತ್ತು. ಜಿಎಸ್‌ಟಿ ಜಾರಿಯಾದ ನಂತರ, 2017–18ರಲ್ಲಿ ಪರೋಕ್ಷ ತೆರಿಗೆ ಆದಾಯದ ಬೆಳವಣಿಗೆ ಕೇವಲ 6.3%ಗೆ ಇಳಿಯಿತು. ಅದರ ಮುಂದಿನ ವರ್ಷ 2018–19ರಲ್ಲಿ ಮತ್ತಷ್ಟು ನಿಧಾನಗೊಂಡು 2.7% ಮಟ್ಟಕ್ಕೆ ಇಳಿಯಿತು. ಹಾಗಾಗಿ, ವಾಸ್ತವಿಕ ಲೆಕ್ಕಾಚಾರದಲ್ಲಿ, 2018–19ರಲ್ಲಿ ಜಿಎಸ್‌ಟಿಯು ಮೂಲಕ ಬಂದ ಆದಾಯವು ಇಳಿದಿರಲೇಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಜಿಎಸ್‌ಟಿ ವ್ಯವಸ್ಥೆಯೇ ಕೇಂದ್ರ ಸರ್ಕಾರದ ತೆರಿಗೆ ಆದಾಯದ ಬೆಳವಣಿಗೆ ಜಡಗೊಳ್ಳುವಲ್ಲಿ ಪ್ರಧಾನ ದೋಷಿ. ಇದಕ್ಕೆ ಮೊದಲಿಗೆ ಜಿಎಸ್‌ಟಿಯ 'ಆರಂಭಿಕ ವಿಘ್ನಗಳು' ಕಾರಣವೆಂದು ಹೇಳಲಾಗಿತ್ತು. ಹಾಗಾಗಿ, 2019–20 ವಿತ್ತೀಯ ವರ್ಷದ ಮೊದಲ ಕೆಲವು ತಿಂಗಳುಗಳಲ್ಲಿ ಜಿಎಸ್‌ಟಿ ಆದಾಯವು ಒಂದು ಲಕ್ಷ ಕೋಟಿ ರೂಪಾಯಿಗಳ ಗೆರೆ ದಾಟಿದಾಗ, 'ಆರಂಭಿಕ ವಿಘ್ನಗಳು' ಕೊನೆಗೊಂಡವು, ಇನ್ನುಮುಂದೆ ಜಿಎಸ್‌ಟಿ ಆದಾಯವು ಪುಷ್ಕಳವಾಗಿರುತ್ತದೆ ಎಂಬ ವಿಜಯೋತ್ಸಾಹದ ಭಾವನೆ ಅಧಿಕೃತ ವಲಯಗಳಲ್ಲಿತ್ತು. ಆದರೆ, ಲಭ್ಯವಿರುವ ತೀರ ಇತ್ತೀಚೆಗಿನ ದತ್ತಾಂಶಗಳ ಪ್ರಕಾರ, ಜೂನ್ 2019ರಲ್ಲಿ, ಜಿಎಸ್‌ಟಿ ಸಂಗ್ರಹವು ಮತ್ತೊಮ್ಮೆ ಒಂದು ಲಕ್ಷ ಕೋಟಿ ರೂಪಾಯಿಗಳ ಗೆರೆಯ ಕೆಳಗೆ ಇಳಿದಿರುವ ಪರಿಸ್ಥಿತಿಯು, ಹಿಂದಿನ ಭಯ ಮರುಕಳಿಸುವಂತೆ ಮಾಡಿದೆ.

ಪರೋಕ್ಷ ತೆರಿಗೆ ಆದಾಯದ ಬೆಳವಣಿಗೆಯ ನಿಧಾನಗೊಳ್ಳುವಿಕೆಗೆ, ಎಷ್ಟರ ಮಟ್ಟಿಗೆ ಅರ್ಥವ್ಯವಸ್ಥೆಯ ನಿಧಾನಗತಿಯೇ ಕಾರಣ ಮತ್ತು ಎಷ್ಟರ ಮಟ್ಟಿಗೆ ಜಿಎಸ್‌ಟಿ ಆಳ್ವಿಕೆಗೆ ಹೊರಳಿದ್ದ ಕ್ರಮವೇ ಕಾರಣ ಎಂಬ ಸಮಸ್ಯೆ ಇನ್ನೂ ಬಗೆಹರಿಯಬೇಕಿದೆ. ಅದೇನೇ ಇರಲಿ, ಅರ್ಥವ್ಯವಸ್ಥೆಯು ಮಂದಗತಿಯಲ್ಲಿದ್ದರೂ ಸಹ, ಪರೋಕ್ಷ ತೆರಿಗೆ ಆದಾಯವು ಜಿಡಿಪಿಯ ಬೆಳವಣಿಗೆ ದರಕ್ಕಿಂತಲೂ ನಿಧಾನವಾಗಿ ಬೆಳೆಯಲು ಕಾರಣವೇ ಇಲ್ಲ. ಆದ್ದರಿಂದ, ಆರ್ಥಿಕ ಹಿಂಜರಿತದ ಕಾರಣದಿಂದಾಗಿಯೇ ಜಿಎಸ್‌ಟಿ ಆದಾಯದ ಬೆಳವಣಿಗೆ ಜಡಗೊಳ್ಳುತ್ತಿದೆ ಎಂಬ ವಿವರಣೆಯು ಸಮರ್ಥನೀಯವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ, ಜಿಎಸ್‌ಟಿ ವ್ಯವಸ್ಥೆಯಲ್ಲಿಯೇ ಏನೋ ಒಂದು ದೋಷವಿದೆ ಎಂಬುದು ಸ್ಪಷ್ಟವಾಗುತ್ತದೆ.

ಈ ಸಂದರ್ಭದಲ್ಲಿ, ಜಿಎಸ್‌ಟಿ ಜಾರಿಯ ಕ್ರಮವು ಕಿರು ಉತ್ಪಾದನಾ ವಲಯದ ಮೇಲೆ ಹೇಳತೀರದ ಆಘಾತ ಉಂಟುಮಾಡಿದ್ದನ್ನು ನೆನಪಿಸಿಕೊಳ್ಳಬಹುದು. ಹಿಂದೆ ಯಾವುದೇ ತೆರಿಗೆ ಕೊಡದಿದ್ದ ಅನೇಕಾನೇಕ ಘಟಕಗಳು ತೆರಿಗೆ ಕೊಡುವ ಕ್ರಮಕ್ಕೆ ಒಳಗಾದದ್ದೇ ಅಲ್ಲದೆ, ತೆರಿಗೆ ಸಲ್ಲಿಸಿದ ವಿವರಗಳ ಬಗ್ಗೆ ಕಾಲ ಕಾಲಕ್ಕೆ ಒಂದು ವರದಿಯನ್ನೂ ಕಡ್ಡಾಯವಾಗಿ ಸಲ್ಲಿಸಬೇಕಾಗಿ ಬಂತು. ಪಾವತಿ ಮಾಡಿದ ತೆರಿಗೆಯಲ್ಲಿ ಹಣ ಹಿಂಪಡೆಯಲು ತಮ್ಮ ಲೆಕ್ಕವನ್ನು ಜಾಗರೂಕತೆಯಿಂದ ಇಟ್ಟುಕೊಳ್ಳಬೇಕಾಗಿತ್ತು ಮತ್ತು ಆ ಉದ್ದೇಶಕ್ಕಾಗಿ ಅಕೌಂಟೆಂಟುಗಳ ದುಬಾರಿ ಸೇವೆಯನ್ನು ಪಡೆಯಬೇಕಾಗಿತ್ತು.

ವರದಿ ಸಲ್ಲಿಕೆಯಲ್ಲಿ, ವಾಸ್ತವವಾಗಿ, ಒಂದು ಬೇರ್ಪಡಿಸಲಾಗದ ಅಂಶ ಸೇರಿಕೊಂಡಿದೆ. ಈ ವರದಿ ಸಲ್ಲಿಕೆಗೆ ತಗಲುವ ವೆಚ್ಚವು ಒಂದು ಸಂಸ್ಥೆಯ ವ್ಯವಹಾರದ ಗಾತ್ರಕ್ಕನುಗುಣವಾಗಿ ಹೆಚ್ಚುವುದಿಲ್ಲ. ಹಾಗಾಗಿ, ಈ ವರದಿ ಸಲ್ಲಿಕೆಯ ಕಾರ್ಯದಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳಿಗೆ ಹೆಚ್ಚು ಹೆಚ್ಚು ಉಳಿತಾಯವೂ ಮತ್ತು ಸಣ್ಣ ಸಣ್ಣ ಘಟಕಗಳಿಗೆ ಹೆಚ್ಚು ಹೆಚ್ಚು ವೆಚ್ಚವೂ ಆಗುತ್ತದೆ. ಈ ಕಾರಣದಿಂದಾಗಿ, ಕಿರು ಉತ್ಪಾದನಾ ವಲಯದ ಸಣ್ಣ ಸಣ್ಣ ಘಟಕಗಳು ಹೆಚ್ಚು ಹೆಚ್ಚು ಖರ್ಚುಮಾಡುವಂತಾಗಿ, ಅವು ಬದುಕುಳಿಯುವುದು ಸರ್ಕಾರದ ಅನುಗ್ರಹಕ್ಕೆ ಒಳಪಟ್ಟಿದೆ.

ಜಿಎಸ್‌ಟಿ ಆಳ್ವಿಕೆಯು ತೆರಿಗೆಯು ವರದಿ ಸಲ್ಲಿಕೆಯನ್ನು ಕಡ್ಡಾಯಗೊಳಿಸಿದೆ. ತೆರಿಗೆ ಪಾವತಿಸುವ ಮನೋವೃತ್ತಿಯನ್ನು ಬೆಳೆಸುತ್ತದೆ ಮತ್ತು ಬೊಕ್ಕಸಕ್ಕೆ ಹೆಚ್ಚು ತೆರಿಗೆಯನ್ನೂ ತರುತ್ತದೆ ಎಂಬ ನೆಲೆಯಲ್ಲಿ ವರದಿ ಸಲ್ಲಿಕೆಯನ್ನು ಕಡ್ಡಾಯಗೊಳಿಸಲಾಗಿತ್ತು. ಈ ಪ್ರಕ್ರಿಯೆಯಿಂದ, ವ್ರತವೂ ಇಲ್ಲ; ಸುಖವೂ ಇಲ್ಲ ಎಂಬಂತಾಗಿದೆ. ಹೇಗಾದರೂ ಸರಿಯೇ, ಹೆಚ್ಚು ತೆರಿಗೆ ಸಂಗ್ರಹಿಸಲೇಬೇಕು ಎಂಬ ಹಠದಿಂದ ಕಿರು ಉತ್ಪಾದಕರ ಮೇಲೆ ಹೇರಿದ ಹಿಂಡಿಕೆ ಮುಂದುವರಿದಿದ್ದರೂ ಸಹ, ಈಗ ಸಂಗ್ರಹವಾಗುತ್ತಿರುವ ಜಿಎಸ್‌ಟಿ ಆದಾಯವು, ಈ ಹಿಂಡುವಿಕೆ ಆರಂಭವಾಗುವ ಮೊದಲು ಬರುತ್ತಿದ್ದ ಆದಾಯಕ್ಕಿಂತಲೂ ಕಡಿಮೆಯೇ ಇದೆ. ಒಟ್ಟಾರೆಯಾಗಿ, ಜಿಎಸ್‌ಟಿ ಆಳ್ವಿಕೆಯಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳಿಗೆ ಅನುಕೂಲವಾಗಿದೆ: ಅವರ ವಹಿವಾಟಿನ ಗಾತ್ರಕ್ಕೆ ಹೋಲಿಸಿದರೆ, ಅವರ ತೆರಿಗೆ ಹೊರೆ ಇಳಿದಿರಲೇಬೇಕು. ಜಿಎಸ್‌ಟಿಯ ವ್ಯಾಪ್ತಿಗೆ ಒಳಪಟ್ಟಿರುವ ಘಟಕಗಳ ಸಂಖ್ಯೆ ಆಧರಿಸಿದ ತೆರಿಗೆ ತಳಹದಿಯ ವೈಶಾಲ್ಯ, ಮತ್ತು, ಜಿಡಿಪಿಗೆ ಹೋಲಿಸಿದಲ್ಲಿ, ಜಿಎಸ್‌ಟಿಯ ಮೂಲಕ ಬರುತ್ತಿರುವ ಆದಾಯವು, ಜಿಎಸ್‌ಟಿ–ಪೂರ್ವದ ವರ್ಷಗಳಲ್ಲಿ ಬರುತ್ತಿದ್ದ ಪರೋಕ್ಷ ತೆರಿಗೆ ಆದಾಯಕ್ಕಿಂತಲೂ ಕಡಿಮೆ ಇರುವುದರಿಂದ, ದೊಡ್ಡ ದೊಡ್ಡ ಉದ್ದಿಮೆಗಳ ತೆರಿಗೆ ಹೊರೆ ಇಳಿದಿದೆ ಎಂಬುದನ್ನು ಸುಲಭವಾಗಿ ಗ್ರಹಿಸಬಹುದು.

ಅರ್ಥವ್ಯವಸ್ಥೆಯು ಒಂದು ಹಿಂಜರಿತದತ್ತ ಸಾಗುತ್ತಿರುವಾಗ, ಸರ್ಕಾರವು ತನ್ನ ವೆಚ್ಚಗಳನ್ನು ಕಡಿತಗೊಳಿಸುವ ಮೂಲಕ ವಿತ್ತೀಯ ಕೊರತೆಯ ಗೆರೆ ದಾಟದಿರುವ ಗುರಿಗೆ ಅಂಟಿಕೊಂಡರೆ, ಮಂದವಾಗುತ್ತಿರುವ ಆರ್ಥಿಕ ಚಟುವಟಿಕೆಗಳು ಮತ್ತಷ್ಟು ಹದಗೆಡುತ್ತವೆ. ಸರ್ಕಾರದ ಖರ್ಚುಗಳನ್ನು, ಅದರಲ್ಲೂ ವಿಶೇಷವಾಗಿ ಕಲ್ಯಾಣ ಕಾರ್ಯಕ್ರಮ ಸಂಬಂಧಿತ ಖರ್ಚುಗಳನ್ನು ಏರಿಸಬೇಕಾಗುತ್ತದೆ. ಅದಕ್ಕಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು, ವಿತ್ತೀಯ ಕೊರತೆಯಲ್ಲ, ಸಂಪತ್ತು ತೆರಿಗೆಯೇ ಅತ್ಯುತ್ತಮ ಮಾರ್ಗ. ಸಂಪತ್ತು ತೆರಿಗೆಯ ಜೊತೆಗೆ ವಾರಸುದಾರಿಕೆ ತೆರಿಗೆಯೂ ಇರಬೇಕು. ಇಲ್ಲದಿದ್ದರೆ, ಸಂಪತ್ತುದಾರರು ತಮ್ಮ ಸ್ವತ್ತುಗಳನ್ನು ತಮ್ಮ ಸಂತತಿಗೆ ಹಂಚುವ ಮೂಲಕ ಸಂಪತ್ತು ತೆರಿಗೆ ತಪ್ಪಿಸಿಕೊಳ್ಳುತ್ತಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಿಎಸ್‌ಟಿ ಆದಾಯಗಳು ಜಂಟಿಯಾಗಿವೆ. ಹಾಗಾಗಿ, ಜಿಎಸ್‌ಟಿ ಆದಾಯವು ಇಳಿದಾಗ ರಾಜ್ಯ ಸರ್ಕಾರಗಳ ಆದಾಯಗಳೂ ಇಳಿದಿರಲೇಬೇಕು. ಅನುಭೋಗ ಪರಂಪರೆಯನ್ನು ಮೊದಲೇ ನಿರ್ಧರಿಸಿರುವ ಕಾರಣದಿಂದಾಗಿ, ಜಿಎಸ್‌ಟಿಯು ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸಿರುವುದೇ ಅಲ್ಲದೆ ರಾಜ್ಯಗಳನ್ನು ಕಠಿಣ ಆರ್ಥಿಕ ಪರಿಸ್ಥಿತಿಗಳಿಗೂ ತಳ್ಳಿದೆ. ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಟ್ಟಿರುವ ಆಲ್ಕೋಹಾಲ್, ತಂಬಾಕು, ತೈಲ ಉತ್ಪನ್ನಗಳು ಮತ್ತು ವಿದ್ಯುಚ್ಛಕ್ತಿ ಇವುಗಳ ಮೇಲಿನ ತೆರಿಗೆಗಳ ಮೂಲಕ ರಾಜ್ಯಗಳು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾದರೂ ಸಹ, ಸ್ವತಃ ಜಿಎಸ್‌ಟಿಯೇ ರಾಜ್ಯಗಳಿಗೆ ಅನ್ಯಾಯ ಮಾಡಿದಂತೆ ತೋರುತ್ತದೆ.

ಬಜೆಟ್ ಪ್ರಕಾರ, ಕೇಂದ್ರ ಸರ್ಕಾರದ ಆದಾಯದಲ್ಲಿ ನಿರೀಕ್ಷೆಗೆ ಮೀರಿ ಉಂಟಾಗಿರುವ ಬೃಹತ್ ಕೊರತೆಯು, ಜಿಎಸ್‌ಟಿ ಆದಾಯದ ಬೆಳವಣಿಗೆ ಜಡಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಕೊರತೆ ಬೀಳಬಹುದು ಎಂಬುದಾಗಿ ಮಾಡಿದ್ದ ಬಜೆಟ್ ಅಂದಾಜಿಗೆ ಹೋಲಿಸಿದರೆ, 2018–19ರಲ್ಲಿ, 1.6 ಲಕ್ಷ ಕೋಟಿ ರೂಪಾಯಿಗಳ ಆದಾಯದ ಕೊರತೆ ಉಂಟಾಗಿದೆ. ಫೆಬ್ರವರಿಯಲ್ಲಿ ಮಂಡನೆಯಾಗಿದ್ದ ಮಧ್ಯಂತರ ಬಜೆಟ್‌ನಲ್ಲಿ, 2019–20 ವರ್ಷದ ಕೊರತೆಯನ್ನು ಸರಿದೂಗಿಸುವ ಮಟ್ಟಿಗೆ ಜಿಎಸ್‌ಟಿ ಆದಾಯದ ಬೆಳೆಯುತ್ತದೆ ಎಂದು ಕಲ್ಪಿಸಿಕೊಳ್ಳಲಾಗಿತ್ತು. ಆದರೆ, ಅದು ಈಗ ಸಂಭವನೀಯವಲ್ಲ ಎಂದು ತೋರುತ್ತದೆ.

ಜಿಎಸ್‌ಟಿ ಆಳ್ವಿಕೆಗೆ ಹೊರಳಿದ್ದ ಒಂದು ಕಾರಣವೇ ಆದಾಯದ ಬೆಳವಣಿಗೆ ಮಂದವಾಗಲು ಸಾಲದು ಎಂಬಂತೆ, ಅದರ ಜೊತೆಯಲ್ಲಿ, ಎಲ್ಲ ಆರ್ಥಿಕ ವಹಿವಾಟುಗಳು ನಿಧಾನವಾಗಿ ಇಳಿಯುತ್ತಿರುವ ಇನ್ನೊಂದು ಕಾರಣವೂ ಸೇರಿಕೊಂಡಿರುವುದರಿಂದ, ಆದಾಯ ಬೆಳವಣಿಗೆಯ ಮಂದಗತಿ ಅಧಿಕವಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಸರ್ಕಾರವು ತನ್ನ ವೆಚ್ಚಗಳನ್ನು ಕಡಿತಗೊಳಿಸುವ ಮೂಲಕ ವಿತ್ತೀಯ ಕೊರತೆಯ ಗೆರೆ ದಾಟದಿರುವ ಗುರಿಗೆ ಅಂಟಿಕೊಂಡರೆ, ಮಂದವಾಗುತ್ತಿರುವ ಆರ್ಥಿಕ ಚಟುವಟಿಕೆಗಳು ಮತ್ತಷ್ಟು ಹದಗೆಡುತ್ತವೆ. ಇನ್ನೊಂದೆಡೆಯಲ್ಲಿ, ಆರ್ಥಿಕ ಚಟುವಟಿಕೆಗಳಿಗೆ ಬೆಂಬಲ ಕೊಡುವ ಸಲುವಾಗಿ ಸರ್ಕಾರವು ಕೆಲವು ವೆಚ್ಚಗಳನ್ನು ಕೈಗೊಂಡರೆ, ವಿತ್ತೀಯ ಕೊರತೆಯು 2019–20ರ ಮಧ್ಯಂತರ ಬಜೆಟ್‌ನಲ್ಲಿ ರೂಪಿಸಿಕೊಂಡಿದ್ದ ಅಂದಾಜನ್ನು ದಾಟುತ್ತದೆ.

ವಿತ್ತೀಯ ಕೊರತೆ ಹಿಗ್ಗಿದರೆ ಸಮಸ್ಯೆ ಉಂಟಾಗುತ್ತದೆ, ನಿಜ. ಆದರೆ, ಅದು ಬೂರ್ಷ್ವಾ ಅರ್ಥಶಾಸ್ತ್ರಜ್ಞರು ವ್ಯಾಖ್ಯಾನಿಸುವ ರೀತಿಯ ಸಮಸ್ಯೆಯಲ್ಲ. ವಿತ್ತೀಯ ಕೊರತೆಯಿಂದಾಗಿ ಹಣದುಬ್ಬರ ಉಂಟಾಗುತ್ತದೆ ಎಂಬ ಊಹೆಯು, ಇನ್ನೂ ಹೆಚ್ಚಿಗೆ ಸರಬರಾಜು ಆಗದಷ್ಟು ಪೂರ್ಣವಾಗಿ ಅರ್ಥವ್ಯವಸ್ಥೆಯು ಸಾಮರ್ಥ್ಯ ಬಳಕೆಯಾಗಿದೆ ಎಂಬ ಆಧಾರದ ಮೇಲೆ ನಿಂತಿದೆ. ಭಾರತದಲ್ಲಿ ಇಂದು ಇಂತಹ ಪರಿಸ್ಥಿತಿ ಇಲ್ಲ ಎಂಬುದಂತೂ ಸ್ಪಷ್ಟ. ಅಷ್ಟೇ ಏಕೆ, ಯಾವುದೇ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲೂ ಇಂತಹ ಪರಿಸ್ಥಿತಿ ಯಾವತ್ತೂ ಇದ್ದಿಲ್ಲ. ವಿತ್ತೀಯ ಕೊರತೆಯಿಂದ ನಿಜಕ್ಕೂ ಉಂಟಾಗುವ ಸಮಸ್ಯೆ ಎಂದರೆ, ಅದು, ಕೊರತೆಗೆ ಸಮನಾದ ಖಾಸಗಿ ಸಂಪತ್ತನ್ನು ಸೃಷ್ಟಿಸುತ್ತದೆ: ಅದಕ್ಕೆ ಕಾರಣವೂ ಇಲ್ಲ, ಹೂರಣವೂ ಇಲ್ಲ; ಅಂದರೆ, ಆ ಸಂಪತ್ತನ್ನು ಸಂಪಾದಿಸಲು ಖಾಸಗಿ ಸಂಪತ್ತುದಾರರು (ಬೂರ್ಷ್ವಾ ಚಿಂತನೆಯ ಮಾನದಂಡದ ಪ್ರಕಾರವಾಗಿಯೂ ಸಹ) ಏನೇನೂ ಪ್ರಯಾಸ ಪಟ್ಟಿರುವುದಿಲ್ಲ.

ವಿತ್ತೀಯ ಕೊರತೆಯು ಅವಶ್ಯವಾಗಿ ಖಾಸಗಿ ವಲಯವು ಕೂಡಿಟ್ಟ ನಿಧಿಯಿಂದ ಸಾಲ ಪಡೆಯುತ್ತದೆ ಎಂಬ ಒಂದು ತಪ್ಪು ಕಲ್ಪನೆ ಇದೆ. ವಿತ್ತೀಯ ಕೊರತೆಯು, ವಾಸ್ತವವಾಗಿ, ಸರ್ಕಾರ ಯಾರಿಂದ ಸಾಲ ಪಡೆದಿರುತ್ತದೆಯೋ ಅವರ ಕೈಯಲ್ಲೇ, ಅದನ್ನೇ ಇಡುತ್ತದೆ, ಅವರಿಗೆ ಅದರ ಅರಿವೇ ಇಲ್ಲದಂತೆ.

ಈ ಕ್ರಿಯೆ ಯಾವ ರೀತಿಯಲ್ಲಿ ಜರುಗುತ್ತದೆ ಎಂಬುದನ್ನು ಹೀಗೆ ಹೇಳಬಹುದು: ಒಂದು ವಿತ್ತೀಯ ಕೊರತೆಯಿಂದಾಗಿ ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಸೃಷ್ಟಿಯಾಗುತ್ತದೆ. ಅದರಿಂದಾಗಿ ಉತ್ಪಾದನೆ ಹೆಚ್ಚುತ್ತದೆ ಮತ್ತು ಆ ಮೂಲಕ ಖಾಸಗಿ ಕೈಗಳಿಗೆ ಲಾಭ ಸೇರುತ್ತದೆ, ಅದರ ಒಂದು ಭಾಗದ ಉಳಿತಾಯವಾಗುತ್ತದೆ. ಈ ಪ್ರಕ್ರಿಯೆ ಹೀಗೆಯೇ ಸಾಗುತ್ತದೆ, ಎಲ್ಲಿಯವರೆಗೆ ಎಂದರೆ, ಖಾಸಗಿಯವರು ಉಳಿತಾಯದ ಮೂಲಕ ಕೂಡಿಟ್ಟ ಹಣವು ವಿತ್ತೀಯ ಕೊರತೆಯ ಮೊತ್ತಕ್ಕೆ ಸರಿಸಮ ಆಗುವವರೆಗೆ. ಈ ಉಳಿತಾಯಗಳು ಖಾಸಗಿ ಸಂಪತ್ತಿಗೆ ಸೇರ್ಪಡೆಯಾಗುತ್ತವೆ. ಹಾಗಾಗಿ, ವಿತ್ತೀಯ ಕೊರತೆಯು ಖಾಸಗಿ ಸಂಪತ್ತನ್ನು ಹೆಚ್ಚಿಸುತ್ತದೆ.

ಖಾಸಗಿ ಸಂಪತ್ತಿಗೆ ಈ ರೀತಿಯ ಸೇರ್ಪಡೆಯನ್ನು ತಪ್ಪಿಸಬೇಕು ಎಂದಾದರೆ. ಖಾಸಗಿ ಲಾಭಗಳ ಮೇಲೆ ತೆರಿಗೆ ಹಾಕಬೇಕಾಗುತ್ತದೆ. ಖಾಸಗಿ ಸಂಪತ್ತಿನ ಮೇಲೆ ತೆರಿಗೆ ಹಾಕುವುದು ಇನ್ನೂ ಉತ್ತಮ. ಸಂಪತ್ತು ತೆರಿಗೆಯಿಂದ ಬರುವ ಆದಾಯವನ್ನು ಸರ್ಕಾರವು ತನ್ನ ಖರ್ಚುಗಳಿಗೆ ಬಳಸಿಕೊಳ್ಳಬಹುದು.

ಪರೋಕ್ಷ ತೆರಿಗೆ ಆದಾಯದ ಬೆಳವಣಿಗೆ ಜಡಗೊಳ್ಳುತ್ತಿರುವಾಗ ಮತ್ತು ಅರ್ಥವ್ಯವಸ್ಥೆಯು ಒಂದು ಹಿಂಜರಿತದತ್ತ ಸಾಗುತ್ತಿರುವಾಗ, ಸರ್ಕಾರದ ಖರ್ಚುಗಳನ್ನು, ಅದರಲ್ಲೂ ವಿಶೇಷವಾಗಿ ಕಲ್ಯಾಣ ಕಾರ್ಯಕ್ರಮ ಸಂಬಂಧಿತ ಖರ್ಚುಗಳನ್ನು ಏರಿಸಬೇಕಾಗುತ್ತದೆ. ಅದಕ್ಕಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು, ವಿತ್ತೀಯ ಕೊರತೆಯಲ್ಲ, ಸಂಪತ್ತು ತೆರಿಗೆಯೇ ಅತ್ಯುತ್ತಮ ಮಾರ್ಗ. ಸಂಪತ್ತು ತೆರಿಗೆಯ ಜೊತೆಗೆ ವಾರಸುದಾರಿಕೆ ತೆರಿಗೆಯೂ ಇರಬೇಕು. ಇಲ್ಲದಿದ್ದರೆ, ಸಂಪತ್ತುದಾರರು ತಮ್ಮ ಸ್ವತ್ತುಗಳನ್ನು ತಮ್ಮ ಸಂತತಿಗೆ ಹಂಚುವ ಮೂಲಕ ಸಂಪತ್ತು ತೆರಿಗೆ ತಪ್ಪಿಸಿಕೊಳ್ಳುತ್ತಾರೆ. •

ಗ್ರಾಮ ಪಂಚಾಯತಿ ನೌಕರರ ಬೇಡಿಕೆ ಈಡೇರಿಸಿ: ಭೀಮಶಿ ಕಲಾದಗಿ

ವಿಜಯಪುರ: ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ (ಸಿಐಟಿಯು) ವತಿಯಿಂದ ಜಿಲ್ಲಾ ಪಂಚಾಯಿತಿ ಹೆಬ್ಬಾಗಿಲಿನಿಂದ ಜಿಲ್ಲಾ ಪಂಚಾಯತಿಯವರೆಗೆ ಘೋಷಣೆಗಳನ್ನು ಕೂಗುತ್ತ, ತಮಟೆ ಹಾಗೂ ಕಹಳೆಯನ್ನು ಊದುತ್ತ ಬೃಹತ್ ಮೆರವಣಿಗೆ ಜಿಲ್ಲಾ ಪಂಚಾಯತಿಗೆ ಪ್ರತಿಭಟಿಸಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ ಮಾತನಾಡಿ, ಹಲವಾರು ವರ್ಷಗಳ ಹೋರಾಟದಿಂದ ಸರ್ಕಾರದಿಂದ ವೇತನ ಪಡೆಯಲು ಮಾರ್ಚ್ 2018 ರಿಂದ ಸಾಧ್ಯವಾಗಿದೆ. ಗ್ರಾಮ ಪಂಚಾಯಿತಿಯ 61000 ನೌಕರರಿಗೆ ಈಗಿನ ಕನಿಷ್ಠ ಕೂಲಿ ಮತ್ತು ತುಟ್ಟಿಭತ್ಯೆ ಸೇರಿ ವೇತನ ನೀಡಲು 830 ಕೋಟಿ ಹಣ ಬೇಕಾಗುತ್ತದೆ. ವೇತನಕ್ಕಾಗಿ ಕಳೆದ ವರ್ಷ ನಿಗಧಿಯಾಗಿದ್ದ ಹಣವನ್ನು ರೈತರ ಸಾಲ ಮನ್ನಾದ ಹೆಸರಿನಲ್ಲಿ 312 ಕೋಟಿ ಹಣ ಬಿಡುಗಡೆ ಮಾಡಲು ಸಾಧ್ಯವಾಗಿಲ್ಲ. ವೇತನಕ್ಕಾಗಿ ಬೇಕಾಗುವ ಹೆಚ್ಚುವರಿ ಹಣಕ್ಕಾಗಿ ಹಣಕಾಸು ಇಲಾಖೆಗೆ ಪತ್ರ ಬರೆದಿದ್ದಾರೆ. ಹೆಚ್ಚುವರಿ ಹಣ ಬರೆದು ಗ್ರಾಮ ಪಂಚಾಯಿತಿ ನೌಕರರ ಸಮಸ್ಯೆ ಬಗೆಹರಿಯುವುದಿಲ್ಲ. 18 ಸಾವಿರ ಗ್ರಾಮ ಪಂಚಾಯಿತಿ ನೌಕರರು ಈಎಫ್‌ಎಮ್‌ಎಸ್ ಗೆ ಸೇರಲಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಈ ಎಫ್‌ಎಮ್‌ಎಸ್ ಗೆ ಸೇರಿಸಲು ತೊಂದರೆ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. 18 ಸಾವಿರ ನೌಕರರಿಗೆ ಈಎಫ್‌ಎಮ್‌ಎಸ್‌ನಿಂದ ಅನುಮೋದನೆ ಸಿಕ್ಕಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಶೇ.40% ತೆರಿಗೆ ವಸೂಲಾತಿಯಲ್ಲಿ ಕೊಡಬೇಕೆಂದು ಆದೇಶವಿದ್ದರು ಸಂಬಳ ಕೊಡಲಾರದೆ ನೌಕರರಿಗೆ ಸತಾಯಿಸುತ್ತಿದ್ದಾರೆ. ಸರ್ಕಾರಿ ಆದೇಶವನ್ನೇ ಉಲ್ಲಂಘನೆ ಮಾಡುತ್ತಿದ್ದಾರೆ.



ಗ್ರಾಮ ಪಂಚಾಯಿತಿ ಸ್ವತಂತ್ರ್ಯವಾಗಿ, ಸ್ವಯಂ ಆಡಳಿತವಾಗಿ ಆಡಳಿತ ನಡೆಸಬೇಕೆಂದು ಆದೇಶವಿದ್ದರು ಗ್ರಾಮಪಂಚಾಯಿತಿ ಆಡಳಿತ ನೌಕರರ ಬಗ್ಗೆ ಮಲತಾಯಿ ಧೋರಣೆ ತಾಳಿದ್ದಾರೆ. ರಾಜ್ಯದಲ್ಲಿ 34 ಸಾವಿರ ಪಂಪ್ ಆಫರೇಟರ್/ವಾಟರ್‌ಮನ್‌ಗಳು, 75 ಸಾವಿರ ಕುಡಿಯುವ ನೀರು ಸ್ಥಾವರಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ವೇತನ ಖಾಯಂತಿ, ಬಡ್ತಿ, ಅನುಮೋದನೆ ಕಡೆಗಣಿಸಲಾಗುತ್ತಿದೆ. ತೆರಿಗೆ ವಸೂಲಾತಿ ಹಣದಲ್ಲಿ ಬಾಕಿ ಉಳಿದ ವೇತನ, ನಿವೃತ್ತಿ ಹೊಂದಿದವರಿಗೆ ನಿವೃತ್ತಿ ಉಪಧನ (ಗ್ರಾಚ್ಯುಟಿ) ಸಿಗಲಾರದೆ ನೌಕರರು ತುಂಬಾ ಕಷ್ಟ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಅಣ್ಣಾರಾಯ ಈಳಗೇರ ಮಾತನಾಡಿ, ಗ್ರಾಮ ಪಂಚಾಯಿತಿ ನೌಕರರಿಗೆ ಸೇವಾಪುಸ್ತಕ ಬರೆಯುವುದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಕರ್ತವ್ಯವಾಗಿದೆ. ನೌಕರರನ್ನು ಗೌರವದಿಂದ ನಡೆಸಿಕೊಳ್ಳದೆ ಇರುವ ಪ್ರವೃತ್ತಿ ಕೂಡ ಇದೆ. ಅದಕ್ಕಾಗಿ ಸಕಾರ ಮಾಡಿದ ಆದೇಶಗಳ ಜಾರಿಗಾಗಿ, ಸಂಬಳಕ್ಕೆ ಬೇಕಾಗುವ ನಿಧಿಗಾಗಿ ಹೋರಾಟ ಅನಿವಾರ್ಯವಾಗಿದೆ. ಈ ವಾಟರ್‌ಮನ್ ಸಿಪಾಯಿ ಸ್ವಚ್ಛತಾಗಾರರು ಎಸ್.ಎಸ್.ಎಲ್.ಸಿ. ಪಾಸಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ ಕ್ಲರ್ಕ ಹುದ್ದೆಗೆ ಬಡ್ತಿಗೆ ಪರಿಗಣಿಸಬೇಕು. ಅಪರ ಕಾರ್ಯದರ್ಶಿಗಳಾದ ಸ್ವಾಮಿರವರ ವರದಿಯಂತೆ ಎಲ್ಲಾ ನೌಕರರನ್ನು ಏಕಕಾಲದಲ್ಲಿ ಅನುಮೋದನೆ ನೀಡಬೇಕು. ಕಳೆದ ಒಂದು ವರ್ಷದಿಂದ ಬಾಕಿ ಉಳಿದ ವೇತನ ಈಎಫ್‌ಎಮ್‌ಎಸ್‌ಗೆ ಸೇರಿದಿರುವವರ ವೇತನ ತೆರಿಗೆ ಸಂಗ್ರಹದಲ್ಲಿ ಕೊಡುವಂತಾಗಬೇಕು. 40% ತೆರಿಗೆ ಸಂಗ್ರಹದ ಹಣ ವೇತನ ಖಾತೆಗೆ ಜಮಾಮಾಡಬೇಕು. ನಿವೃತ್ತಿ ಹೊಂದಿದ ನೌಕರರಿಗೆ ನಿವೃತ್ತಿ ಉಪಧನ ಕೊಡಬೇಕು. ಎಲ್ಲಾ ನೌಕರರಿಗೆ ಸೇವಾ ಪುಸ್ತಕ ತೆರೆಯಬೇಕು. ಬಹಳ ದಿನಗಳಿಂದ ನೆನಗುದಿಗೆ ಬಿದ್ದಿರುವ ಸೇವಾ ನಿಯಮಾವಳಿ ರಚಿಸಬೇಕು. ನಿವೃತ್ತಿ ವೇತನ, ಗಳಿಕೆ ರಜೆ, ವಾರಕ್ಕೊಂದು ವೇತನ ಸಹಿತ ರಜೆ, ವೈದ್ಯಕೀಯ ವೆಚ್ಚ, ಸರ್ಕಾರಿ ನೌಕರರಿಗೆ ನೀಡುವಂತೆ ಎಲ್ಲಾ ನೌಕರರಿಗೂ ನೀಡಬೇಕು. ಪಂಚಾಯತಿ ನೌಕರರಿಂದ ಬಿಲ್ ಕಲೆಕ್ಟರ್ ಹುದ್ದೆಗೆ ಬಡ್ತಿ ನೀಡಬೇಕು. ಹೊಸ ಬಿಲ್ ಕಲೆಕ್ಟರ್ ನೇಮಕಾತಿ ಮಾಡಬಾರದು ಎಂದರು.

ಈ ಸಂದರ್ಭದಲ್ಲಿ ವಿಠ್ಠಲ ಹೊನಮೋರೆ ಮಾತನಾಡಿ, ಬಿಲ್ ಕಲೆಕ್ಟರ್ ಹುದ್ದೆಯಿಂದ ಗ್ರೇಡ್ 2 ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕ ಹುದ್ದೆಗೆ ಬಡ್ತಿ ನೀಡಲು 2019ರ ಜೇಷ್ಠತಾ ಪಟ್ಟಿ ಸಿದ್ದಪಡಿಸುವುದು, ಪವಿತ್ರ ಕೇಸಿನಲ್ಲಿ ಸುಪ್ರಿಂ ಕೋರ್ಟ್‌ನ ತೀರ್ಪು ಬಂದಿದ್ದರಿಂದ ಪಿಡಿಓ ಬಡ್ತಿ ಗ್ರೇಡ್ 1 ಬಡ್ತಿ ನೀಡಿ ಖಾಲಿಯಾದ ಗ್ರೇಡ್ 2 ಕಾರ್ಯದರ್ಶಿ ಮತ್ತು ಲೆಕ್ಕಸಹಾಯಕ ಹುದ್ದೆಗೆ ನೇಮಕಾತಿ ಮಾಡುವಂತಾಗಬೇಕು. ಕ್ಲರ್ಕ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಬಡ್ತಿಗೆ ಪರಿಗಣಿಸುವುದು. ಈಎಫ್‌ಎಮ್‌ಎಸ್ ಎಲ್ಲಾ ನೌಕರರಿಗೆ ಈಎಫ್‌ಎಮ್‌ಎಸ್‌ಗೆ ಸೇರಿಸಬೇಕು. ಪ್ರತಿ ತಿಂಗಳು ವೇತನಕ್ಕೆ ಬೇಕಾಗುವ ಹಣದ ಪ್ರಸ್ತಾವನೆ ಸರಕಾರಕ್ಕೆ ಕಳುಹಿಸಬೇಕು ಎಂದರು.

ಮನವಿ ಸ್ವೀಕರಿಸಿದ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಅಂಬರೀಶ ನಾಯಕ ಅವರು ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಹಾಗೂ ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಲಿಖಿತರೂಪದಲ್ಲಿ ಮನವಿ ಸಲ್ಲಿಸಲಾಗಿದೆ ಎಂದು ಧರಣಿ ನಿರತ ನೌಕರರಿಗೆ ತಾವು ಕಳುಹಿಸಿದ ಪತ್ರವನ್ನು ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ ವಿಜಯಪುರ ಜಿಲ್ಲಾ ಅಧ್ಯಕ್ಷ ಕುಮಾರ ರಾಠೋಡ, ಉಪಾಧ್ಯಕ್ಷ ರಾಜು ಜಾಧವ, ಭಾರತಿ ನಡುವಿನಕೇರಿ, ಗಜರಾಬಾಯಿ ಮಸಳಿಕೇರಿ, ಸಕ್ಕುಬಾಯಿ ಹರಿಜನ, ಚಂದ್ರಕಾಂತ ವಾಲಿಕಾರ, ಅಲ್ಲಾವುದ್ದೀನ ಇಂಡಿ, ಇಂಡಿಯಿಂದ ಚಿಕ್ಕಯ್ಯ ಹೋಕಳೆ, ತುಕಾರಾಮ ಬೇನೂರ, ಶಿವಪ್ಪ ಲಾಡರ, ಯಲ್ಲಪ್ಪ ತೋಳೆ, ಗುರಣ್ಣ ಮನಗೂಳಿ, ಅಲ್ಲೂ ಹತ್ತೂರಕರ, ಪವನ ಕುಲಕರ್ಣಿ, ವಿಠ್ಠಲ ಬಬಲಾದಿ, ಸಿಂದಗಿ ಅಧ್ಯಕ್ಷ ಎಂ.ಕೆ.ಚಳ್ಳಗಿ, ಪ್ರ.ಕಾ. ಮಡಿವಾಳಪ್ಪ ಕೊಂಡಗೂಳಿ, ಮುದ್ದೇಬಿಹಾಳದ ಅಧ್ಯಕ್ಷರಾದ ಅಬ್ದುಲ ತಮದಡ್ಡಿ, ಪ್ರ.ಕಾ. ಶಿವು ನಾಲ್ಕಮಕ್ಕಳ, ಬಾಗೇವಾಡಿ ಪ್ರ. ಕಾ. ಶೇಖು ಲಮಾಣಿ, ಚನಮಲ್ಲಪ್ಪ ಗುಡ್ಡೆದ, ದುರ್ಗಪ್ಪ ಬುದ್ನಿ ಸುರೇಶ ಮುಂತಾದವರು ಭಾಗವಹಿಸಿದ್ದರು.

–ವಿಠ್ಠಲ ಹೊನಮೋರೆ ●

ಅಂಗನವಾಡಿ ನೌಕರರಿಂದ ರಾಜ್ಯಾದ್ಯಂತ ಧರಣಿ....

ಪುಟ 16 ರಿಂದ

ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಸಂಚಾಲಕ ವಿನಾಯಕ ಕುರುಬರ ಮಾತನಾಡಿ ರಾಜ್ಯದ ಮಾನವ ಸಂಪನ್ಮೂಲಗಳ ಬೆಳವಣಿಗೆಗೆ ಅಂಗನವಾಡಿಗಳು ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಇಂತಹ ಯೋಜನೆಯನ್ನು ಸಬಲೀಕರಿಸುವ ಬದಲಿಗೆ ಸರ್ಕಾರ ಸರ್ಕಾರಿ ಶಾಲೆಗಳಲ್ಲಿ ದಾಖಾಲಾತಿಯನ್ನು ಹೆಚ್ಚಿಸಲು ಅಂಗನವಾಡಿ ಕೇಂದ್ರದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಯನ್ನು ಸರ್ಕಾರಿ ಶಾಲೆಗಳು ನಿರ್ವಹಿಸುವುದು ಪ್ರಾಯೋಗಿಕವಲ್ಲ. ಆದ್ದರಿಂದ ಅಂಗನವಾಡಿ ಕೇಂದ್ರಗಳಲ್ಲಿಯೇ ಐಎಲು–ಗಎಲು ಯನ್ನು ಪ್ರಾರಂಭಿಸಬೇಕು. ಅಂಗನವಾಡಿ ನೌಕರರ ಬೇಡಿಕೆಗಳ ಕುರಿತು ಹಲವು ಬಾರಿ ಮನವಿ ಪತ್ರಗಳು, ಹೋರಾಟಗಳು, ಜಂಟೀ ಸಭೆಗಳು ನಿರಂತರವಾಗಿ ನಡೆಯುತ್ತಿವೆ. ಆದರೆ ಪ್ರಮುಖ ಬೇಡಿಕೆಗಳಿಗೆ ಸೂಕ್ತ ಪರಿಹಾರ ಸಿಗದಿರುವುದು ದುರಾದೃಷ್ಟಕರವಾಗಿದೆ. ಆದ್ದರಿಂದ ವಿವರವಾಧ ಬೇಡಿಕೆಗಳನ್ನು ಪುನಃ ಸರ್ಕಾರಕ್ಕೆ ಸಲ್ಲಿಸುತ್ತಿದ್ದೇವೆ. ಸೇವಾ ಜೇಷ್ಠತೆಯ ಆಧಾರದಲ್ಲಿ ಕನಿಷ್ಠ ವೇತನ ಜಾರಿ ಮಾಡಬೇಕು. 45 ಎಲ್.ಐ.ಸಿ ಯ ಶಿಫಾರಸ್ಸಿನ ಪ್ರಕಾರ 18,000 ಕನಿಷ್ಠ ವೇತನ ಜಾರಿ ಮಾಡಬೇಕು. ದಿನಕ್ಕೆ 6–30 ಘಂಟೆ ಕೆಲಸ ಮಾತೃಪೂರ್ಣ ಮುಂತಾದ ಕೆಲಸ ಹೊರೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಮತ್ತೊಂದಡೆ ಬೆಲೆಯೇರಿಕೆ, ಮಾತ್ರವಲ್ಲದೆ ಹರಿಯಾಣ, ತೆಲಂಗಾಣ, ಆಂದ್ರಪ್ರದೇಶ, ತಮಿಳುನಾಡು, ಗೋವಾ, ಪಾಂಡಿಚೇರಿ, ಕೇರಳ ಮುಂತಾದ ರಾಜ್ಯಗಳಲ್ಲಿ 11 ರಿಂದ 12 ಸಾವಿರ ವೇತನ ಹೆಚ್ಚಳವಾಗಿದೆ. ಆದ್ದರಿಂದ ರಾಜ್ಯದಲ್ಲಿಯೂ ಕೂಡಾ ಗೌರವಧನ ಹೆಚ್ಚಳವಾಗಬೇಕು ಮತ್ತು ಸೇವಾ ಜೇಷ್ಠತೆಯ ಆಧಾರದಲ್ಲಿ ವೇತನವನ್ನು ನಿಗದಿಪಡಿಸಬೇಕು ಎಂದು ವಿನಾಯಕ ಕುರುಬರ ಸರ್ಕಾರವನ್ನು ಒತ್ತಾಯಿಸಿದರು.

ಅಂಗನವಾಡಿ ನೌಕರರ ಸಂಘದ ಮುಖಂಡರಾದ ಉಮಾ ಪಾಟೀಲ ಮಾತನಾಡಿ ಅಂಗನವಾಡಿ ಕೇಂದ್ರಗಳಿಗೆ ಎಲ್ಲಾ ರೀತಿಯ ಗುಣಾತ್ಮಕ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಮಾತೃಪೂರ್ಣ ಯೋಜನೆಯ ನಂತರ ಸಹಾಯಕಿಯರ ಕೆಲಸ ದುಪ್ಪಟ್ಟು ಆಗಿರುವುದರಿಂದ ಕಾರ್ಯಕರ್ತೆಯರಿಗೆ ನೀಡುವ ಗೌರವಧನದ 75% ಸಹಾಯಕಿಯರಿಗೂ ಕೊಡಬೇಕು. ಅಂಗನವಾಡಿ ಕೇಂದ್ರದ ಪಲಾನುಭವಿಗಳಿಗೆ ನೇರ ನಗದು ವರ್ಗಾವಣೆಯನ್ನು ಸೂಚನೆಯನ್ನು ರಾಜ್ಯ ಸರ್ಕಾರ ಒಪ್ಪಬಾರದು ಎಂದು ತಮ್ಮ ಬೇಡಿಕೆಗಳನ್ನು ಇಡೇರಿಸುವಂತಾಗಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಂಗನವಾಡಿ ನೌಕರರ ಸಂಘದ ಮುಖಂಡರಾದ ಹೇಮಾ ಆಸಾದಿ. ಹೇಮಾವತಿ ಎಲಿ. ಗೌರಮ್ಮ ನಾಯ್ಕರ. ಪರಮೇಶ್ವರಿ ಮದ್ಯಾನ್ನಾದ. ಶಶಿಕಲಾ ಪುರಾಣಿಕ ಮಠ. ಕವಿತಾ ನಾಡಗೇರ. ಜ್ಯೋತಿ ಕದರ ಮಂಡಲಗಿ. ಮಲ್ಲಮ್ಮ ಛಲವಾದಿ. ಸಿಐಟಿಯು ಮುಖಂಡರಾದ ಮಹಾಂತೇಶ ಎಲಿ.ವ್ಹಿಕೆ ಬಾಳಿಕಾಯಿ. ಎಸ್‌ಎಫ್‌ಐ ಮುಖಂಡ ಬಸವರಾಜ ಭೋವಿ. ಸಾಮಾಜಿಕ ಪರಿವರ್ತನಾ ಜನಾದೋಲನದ ಸಂಚಾಲಕರಾದ ಹಸೀನಾ ಹೇಡಿಯಾಲ. ಡಿವೈಎಫ್‌ಐ ಮುಖಂಡ ಮುಕ್ತಾನಂದ ಹಿರೇಮನಿ ಮುಂತಾದವರು ಇದ್ದರು.

ವಿಜಯಪುರ:

ಅಂಗನವಾಡಿ ಕೇಂದ್ರಗಳಲ್ಲಿ ಎಲ್.ಕೆ.ಜಿ & ಯುಕೆಜಿ ಪ್ರಾರಂಭಿಸಲು ಒತ್ತಾಯಿಸಿ ಬಾಕಿ ಗೌರವಧನ, ಕೋಳಿ ಮೊಟ್ಟೆ, ತರಕಾರಿ ಹಣದ ಬಿಡುಗಡೆಗಾಗಿ ಮತ್ತು ಕೇಂದ್ರ ಸರ್ಕಾರದಿಂದ 2018 ಅಕ್ಟೋಬರ್‌ನಲ್ಲಿ ಹೆಚ್ಚಳವಾದ ಗೌರವಧನ ಬಿಡುಗಡೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ಜಿಲ್ಲಾ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾ ಮೆರವಣಿಗೆಯು ನಗರದ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಆರಂಭಗೊಂಡು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಸಭೆಯಾಗಿ ಮಾರ್ಪಟ್ಟಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ ಮಾತನಾಡಿ, 6 ವರ್ಷದೊಳಗಿನ ಮಕ್ಕಳಲ್ಲಿ 40% ದೈಹಿಕ ಬೆಳವಣಿಗೆ 80% ಮಾನಸಿಕ ಬೆಳವಣಿಗೆ ನಡೆಯುವ ಸಂದರ್ಭದಲ್ಲಿ ಪೂರಕ ಪೌಷ್ಠಿಕ ಆಹಾರ ಮತ್ತು ಪ್ರಾಥಮಿಕ ಆರೋಗ್ಯವನ್ನು ಪೂರೈಸುವ ಸಲುವಾಗಿಯೇ 1975 ರಲ್ಲಿ ಪ್ರಾರಂಭವಾದ ಯೋಜನೆ ಐಸಿಡಿಎಸ್. 3 ವರ್ಷದೊಳಗಿನ ಮಗು ತಾಯಿಯ ಆರೈಕೆಯಲ್ಲಿರಬೇಕಾದ್ದರಿಂದ ಆ ಮಕ್ಕಳಿಗೆ ಮನೆಗೆ ಪೌಷ್ಠಿಕ ಆಹಾರವನ್ನು ಕೊಟ್ಟು ಮಕ್ಕಳಿಗೆ ಪ್ರಾರ್ಥನೆ, ಆಟ, ಮುಕ್ತ ಸಂಭಾಷಣೆ, ವಿಷಯಗಳ ಪರಿಚಯ, ಹಾಡುಗಳ, ಅಭಿನಯ ಗೀತೆ, ಅಕ್ಷರಗಳು, ಸಂಖ್ಯೆಗಳ ಪರಿಚಯ ಅಭ್ಯಾಸ, ಕ್ರಿಯಾತ್ಮಕ, ಬೌದ್ಧಿಕ, ಗ್ರಹಣ ಶಕ್ತಿ ಚಟುವಟಿಕೆಗಳು, ಕಥೆ, ಪಾತ್ರಾಭಿನಯಗಳನ್ನು ಲಿಸುವುದು, ಮಧ್ಯಾಹ್ನ ಮಕ್ಕಳಿಗೆ ನಿದ್ದೆ ಮಾಡಿಸುವ ಸಲುವಾಗಿಯೇ ಅಂಗನವಾಡಿ ಕೇಂದ್ರಗಳನ್ನು ತೆರೆದು ರಾಜ್ಯದಲ್ಲಿ 62, 580 ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು 45 ವರ್ಷಗಳಿಂದ ಕಾರ್ಯಚರಿಸುತ್ತಿದೆ. ಇಂದು ಅಂಗನವಾಡಿ ಕೇಂದ್ರಗಳಲ್ಲಿ 0 ಯಿಂದ 3 ವರ್ಷದ ಮಕ್ಕಳು 23, 23,347 ಮಕ್ಕಳು, 3 ರಿಂದ 6 ವರ್ಷದ ಮಕ್ಕಳು 16,40,170 ಮಕ್ಕಳು, 8,95,465 ಗರ್ಭಿಣಿ, ಬಾಣಂತಿಯರನ್ನೊಳಗೊಂಡಂತೆ 51.04 ಲಕ್ಷ ಒಟ್ಟು ಫಲಾನುಭವಿಗಳಿದ್ದಾರೆ. ಈ ಯೋಜನೆಯಿಂದ ರಾಜ್ಯದ ಮಾನವ ಸಂಪನ್ಮೂಲಗಳ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಇಂತಹ ಯೋಜನೆಯನ್ನು ಸಬಲೀಕರಿಸುವ ಬದಲಿಗೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಹೆಚ್ಚಿಸಲು ಅಂಗನವಾಡಿ ಕೇಂದ್ರದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಯನ್ನು ಸರ್ಕಾರಿ ಶಾಲೆಗಳು ನಿರ್ವಹಿಸುವುದು ಪ್ರಾಯೋಗಿಕವಲ್ಲ. ಆದ್ದರಿಂದ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ ಮತ್ತು ಯುಕೆಜಿ ಯನ್ನು ಪ್ರಾರಂಭಿಸಬೇಕು.

ರಾಜ್ಯದ ಹಲವಾರು ಜಿಲ್ಲೆಗಳಲಿ 3–4 ತಿಂಗಳ ಗೌರವಧನ ಬಂದಿಲ್ಲ ಕೋಳಿ ಮೊಟ್ಟೆ. ತರಕಾರಿ ಹಣ 3–4 ತಿಂಗಳಿಂದ ಬಂದಿಲ್ಲ. ಸರಿಯಾಗಿ ಗ್ಯಾಸ್ ವಿತರಣೆಯಿಲ್ಲ. ಅಂಗನವಾಡಿ ನೌಕರರು ಖಾಯಿಲೆ ಬಿದ್ದಾಗ ಮತ್ತು ಮರಣ ಹೊಂದಿದಾಗ ಬರುವ ಹಣ ಬರುತ್ತಿಲ್ಲ ಮಾತ್ರವಲ್ಲದೆ ನಿವೃತ್ತಿಯಾದ ನೌಕರರಿಗೆ ಏನೊಂದು ಸೌಲಭ್ಯವಿಲ್ಲ ಇಂತಹ ಸಂದರ್ಬದಲ್ಲಿಯೂ ಅಂಗನವಾಡಿನೌಕರರು ದುಡಿಯುತ್ತಿದ್ದಾರೆ. ಏನನ್ನು ಸಕಾಲಕ್ಕೆ ಪೂರೈಸದೇ ಅಂಗನವಾಡಿ ನೌಕರರ ಮೇಲೆ ಶಿಸ್ತು ಕ್ರಮ ಮಾತ್ರ ಜರುಗುತ್ತಲೇ ಇದೆ. ಗೌರವಧನದ ಆಧಾರದಲ್ಲಿ ದುಡಿಯುವ ಇವರನ್ನು ಮತ್ತಷ್ಟು ಶೋಷಿಸಬಾರದು.

ಸಿಐಟಿಯು ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ, ಅಂಗನವಾಡಿ ನೌಕರರ ಬೇಡಿಕೆಗಳ ಕುರಿತು ಹಲವು ಬಾರಿ ಮನವಿ ಪತ್ರಗಳು. ಹೋರಾಟಗಳು, ಜಂಟೀ ಸಭೆಗಳು ನಿರಂತರವಾಗಿ ನಡೆಯುತ್ತಿವೆ. ಆದರೆ ಪ್ರಮುಖ ಬೇಡಿಕೆಗಳಿಗೆ ಸೂಕ್ತ ಪರಿಹಾರ ಸಿಗದಿರುವುದು ದುರಾದೃಷ್ಟಕರ. ಈಗಿರುವ ನಿವೃತ್ತಿ ಸೌಲಭ್ಯವನ್ನು ಬದಲಾಯಿಸಿ ಐ.ಎಲ್.ಸಿ. ಆಧಾರಿತ ಪೆನ್‌ಷನ್ ನೀಡಬೇಕು. ರಾಜ್ಯ ಮತ್ತು ಕೇಂದ್ರ ➔

ಸುಡಾನಿನಲ್ಲಿ ಮಧ್ಯಂತರ ಸರಕಾರ



ಸುಡಾನಿನಲ್ಲಿ ಮಿಲಿಟರಿ ಸರಕಾರ (ಟಿ.ಎಂ.ಸಿ– ಟ್ರಾನ್ಸಿಶನಲ್ ಮಿಲಿಟರಿ ಕೌನ್ಸಿಲ್) ಮತ್ತು ಅದರ ವಿರುದ್ಧ ಪ್ರತಿಭಟನಾ ಚಳುವಳಿಯ ನಾಯಕತ್ವ (ಡಿ.ಎಫ್.ಸಿ.ಎಫ್ – ಡಿಕ್ಲರೇಶನ್ ಆಫ್ ಫ್ರೀಡಂ ಅಂಡ್ ಚೇಂಜ್ ಫೋರ್ಸಸ್) ಒಂದು ಮಧ್ಯಂತರ ಒಪ್ಪಂದಕ್ಕೆ ಬಂದಿದೆ. ಅವರು ಈ ಹಿಂದೆ ವಿವಾದಾತ್ಮಕವಾಗಿದ್ದ ಅಧ್ಯಕ್ಷೀಯ ಮಂಡಳಿಯ ರಚನೆ ಬಗ್ಗೆ ಸಹಮತಕ್ಕೆ ಬಂದಿದ್ದಾರೆ. ಡಿ.ಎಫ್.ಸಿ.ಎಫ್ ಮಿಲಿಟರಿ ಸರಕಾರದ ವಿರುದ್ಧ ಹೋರಾಡುವ ರಾಜಕೀಯ ಪಕ್ಷಗಳ, ಚಳುವಳಿಗಳ ಮತ್ತು ಯೂನಿಯನುಗಳನ್ನು ಪ್ರತಿನಿಧಿಸುವ ಸಂಘಟನೆ. ಹಿಂದಿನ ಆಡಳಿತ ನಡೆಸಿದ ಯುದ್ಧ–ಅಪರಾಧಗಳು ಮತ್ತು ಮಾನವ ಹಕ್ಕು ಉಲ್ಲಂಘನೆಗಳ ಬಗ್ಗೆ ತನಿಖೆ ನಡೆಸುವ ವ್ಯವಸ್ಥೆ ಸ್ಥಾಪಿಸುವ ಬಗ್ಗೆ ಸಹಮತ ಮೂಡಿದೆ. ಇದು ಡಿ.ಎಫ್.ಸಿ.ಎಫ್ ನಾಯಕತ್ವದಲ್ಲಿ ಜೂನ್ ತಿಂಗಳಲ್ಲಿ ವ್ಯಾಪಕವಾಗಿ ನಡೆದ ಹಲವು ಸಾಮೂಹಿಕ ಪ್ರತಿಭಟನೆಗಳ ಫಲವಾಗಿ ಸಾಧ್ಯವಾಗಿದೆ. ಜೂನ್ 30ರಂದು 'ಹತ್ತು ಲಕ್ಷ ಜನರ ಜಾಥಾ' ಮತ್ತು ಜುಲೈ 14 ರಂದು ಹಮ್ಮಿಕೊಳ್ಳಲಾಗಿದ್ದ ಸಾಮೂಹಿಕ 'ಕಾಯಿದೆ ಭಂಗ'ದ ನಿಟ್ಟಿನಲ್ಲಿ ನಡೆದ ಗಂಭೀರ ತಯಾರಿಗಳ ಬೆದರಿಕೆ ಸಹ ಕೆಲಸ ಮಾಡಿದಂತೆ ಕಾಣುತ್ತದೆ.

ಟಿ.ಎಂ.ಸಿ. ಜುಲೈ 3ರಂದು ಸಶಸ್ತ್ರ ದಂಗೆಯಲ್ಲಿ ಭಾಗವಹಿಸಿದ ಗುಂಪುಗಳು ಸೇರಿದಂತೆ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿದೆ. ಡಿ.ಎಫ್.ಸಿ.ಎಫ್ ಆಫ್ರಿಕನ್ ಯೂನಿಯನ್ ಮತ್ತು ಇಥಿಯೋಪಿಯಾ ದ ಪ್ರತಿನಿಧಿಗಳ ಮಧ್ಯಸ್ತಿಕೆಯಲ್ಲಿ ನಡೆಯುತ್ತಿದ್ದ ಮಾತುಕತೆಗಳನ್ನು ಮುಂದುವರೆಸಲು ಒಪ್ಪಿದೆ.

ಈಗಿನ ಒಪ್ಪಂದದ ಪ್ರಕಾರ ನಾಗರಿಕರೇ ಪ್ರಧಾನ ಪಾತ್ರದಲ್ಲಿರುವ ಮಧ್ಯಂತರ ಸರಕಾರ ಮುಂದಿನ 39ತಿಂಗಳುಗಳ ಕಾಲ ಆಡಳಿತ ನಡೆಸಲಿದೆ. ಈ ಸರಕಾರ ಮೂರು ಅಂಗಗಳನ್ನು– ಅಧ್ಯಕ್ಷ ಮಂಡಳಿ, ಸಚಿವ ಸಂಪುಟ ಮತ್ತು ವಿಧಾನ ಪರಿಷತ್ತು – ಹೊಂದಲಿದೆ.

ಅಧ್ಯಕ್ಷ ಮಂಡಳಿಯಲ್ಲಿ ತಲಾ ಐದು ಸದಸ್ಯರು ನಾಗರಿಕ ಸಂಘಟನೆಗಳು ಮತ್ತು ಮಿಲಿಟರಿ (ಟಿ.ಎಂ.ಸಿ.)ಯಿಂದ ಇರುತ್ತಾರೆ. ಎರಡೂ ಪಕ್ಷಗಳಿಗೂ ಅಂಗೀಕಾರ್ಹನಾದ ಮಿಲಿಟರಿ ಹಿನ್ನೆಲೆ ಇರುವ ನಾಗರಿಕನನ್ನು ಇನ್ನೊಬ್ಬ ಸದಸ್ಯನಾಗಿ ನೇಮಿಸಲಾಗುವುದು. ಮೊದಲ 21 ತಿಂಗಳುಗಳ ಕಾಲ ಒಬ್ಬ ಮಿಲಿಟರಿ ಅಧಿಕಾರಿ ಅಧ್ಯಕ್ಷ ಮಂಡಳಿಯ ಮುಖ್ಯಸ್ಥ ಮತ್ತು ದೇಶದ ಅಧ್ಯಕ್ಷನಾಗಿರುತ್ತಾನೆ. ಡಿ.ಎಫ್.ಸಿ.ಎಫ್ ಸೂಚಿಸುವ ನಾಗರಿಕ ಪ್ರತಿನಿಧಿಯೊಬ್ಬ ಉಳಿದ 18 ತಿಂಗಳುಗಳ ಕಾಲ ಅಧ್ಯಕ್ಷನಾಗಿರುತ್ತಾನೆ. ಡಿ.ಎಫ್.ಸಿ.ಎಫ್ ಸಚಿವ ಸಂಪುಟ ರಚಿಸುತ್ತದೆ ಮತ್ತು ವಿಧಾನ ಪರಿಷತ್ತಿನ ಮೂರನೇ ಎರಡು ಭಾಗದ ಸದಸ್ಯರ ಆಯ್ಕೆ ಮಾಡುತ್ತದೆ. ಉಳಿದ ಸದಸ್ಯರು ಪದಚ್ಯುತಗೊಳಿಸಲಾದ ಒಮರ್ ಅಲ್–ಬಶೀರ್ ಸರಕಾರದಲ್ಲಿ ಭಾಗಿಯಾಗಿರದಿದ್ದ ರಾಜಕೀಯ ಪಕ್ಷಗಳಿಗೆ ಸೇರಿದವರಾಗಿರುತ್ತಾರೆ. ಅಂದರೆ ಪತನಗೊಂಡ ಅಧ್ಯಕ್ಷರ ನೇಶನಲ್ ಕಾಂಗ್ರೆಸ್ ಪಾರ್ಟಿ ಮತ್ತು ಅದರಿಂದ 1999 ಪ್ರತ್ಯೇಕವಾದ ಆದರೆ ಸರಕಾರದಲ್ಲಿ ಅದರ ಜತೆ ಭಾಗಿಯಾಗಿದ್ದ ಇಸ್ಲಾಮಿಸ್ಟ್ ಪಾಪ್ಯುಲರ್ ಕಾಂಗ್ರೆಸ್ ಪಾರ್ಟಿಗಳಿಗೆ ವಿಧಾನ ಪರಿಷತ್ತಿನಲ್ಲಿ ಪ್ರಾತಿನಿಧ್ಯವಿರುವುದಿಲ್ಲ.



ಇದಕ್ಕೆ ಮೊದಲು ಅಧ್ಯಕ್ಷ ಮಂಡಳಿಯ ಕುರಿತು ಸಹಮತ ಸಾಧ್ಯವಾಗಿರಲಿಲ್ಲ. ಆಗ ಮಿಲಿಟರಿ ಸರಕಾರ ಕುಖ್ಯಾತ ಖಾಸಗಿ ಪಡೆಯನ್ನು ಜನ ಚಳುವಳಿಗಳ ಮೇಲೆ ಹರಿಯ ಬಿಟ್ಟಿತ್ತು. ಖಾರ್ಟೂಂನಲ್ಲಿ ನಡೆದ ತೀವ್ರ ಪ್ರತಿಭಟನೆಯ ಮೇಲೆ ದಾಳಿಯಿಂದಾಗಿ ನೂರು ಜನ ಕೊಲೆಯಾಗಿದ್ದರು ಮತ್ತು ನೂರಾರು ಜನ ಗಾಯಗೊಂಡಿದ್ದರು. ಇದರಿಂದ ಕುಪಿತರಾದ ಡಿ.ಎಫ್.ಸಿ.ಎಫ್ ನಾಯಕತ್ವದ ಪ್ರತಿರೋಧದ ಚಳುವಳಿ ಹಲವು ಮುಷ್ಕರಗಳು, ಹರತಾಳಗಳು, ಕಾಯಿದೆ ಭಂಗ ಚಳುವಳಿಗಳ ಮೂಲಕ ದೇಶವನ್ನು ನಿಲುಗಡೆಯ ಹಂತಕ್ಕೆ ತಂದಿತು. ಆದರೆ ಬೀದಿಗಳಲ್ಲಿ ಸರಕಾರ ಮತ್ತು ಅದನ್ನು ಬೆಂಬಲಿಸುವ ಖಾಸಗಿ ಪಡೆಗಳ ಕೈ ಮೇಲಾಗಿತ್ತು. ಆದರೆ ಜೂನ್ ತಿಂಗಳ ಕೊನೆಯ ಹೊತ್ತಿಗೆ ಹಲವಾರು ರಾತ್ರಿ ಜಾಥಾಗಳು ಮತ್ತು ಅಂತಿಮವಾಗಿ ಜೂನ್ 30ರಂದು 'ಹತ್ತು ಲಕ್ಷ ಜನರ ಜಾಥಾ' ಪ್ರತಿರೋಧದ ಶಕ್ತಿ ಪ್ರದರ್ಶನ ಮಾಡಿತು. ಅದರ ನಂತರ ಮಿಲಿಟರಿ ಮತ್ತು ನಾಗರಿಕ ಚಳುವಳಿಗಳ ನಾಯಕರ ನಡುವೆ ಗಂಭೀರ ಮಾತುಕತೆಗಳು ಚೌಕಾಶಿಗಳು ನಡೆದಿದ್ದವು. ಅಧ್ಯಕ್ಷ ಮಂಡಳಿಯ ಸಂರಚನೆ ಮತ್ತು ಅದರಲ್ಲಿ ಮಿಲಿಟರಿ ಭಾಗಹಿಸುವ ಬಗ್ಗೆ ಡಿ.ಎಫ್.ಸಿ.ಎಫ್ ಯ ತೀವ್ರ ವಿರೋಧವಿತ್ತು. ಇನ್ನೂ ಅಲ್ಲಲ್ಲಿ ನಡೆಯುತ್ತಿರುವ ಆಂತರಿಕ ಯುದ್ಧವನ್ನು ನಿಲ್ಲಿಸುವ ಮತ್ತು ಹಿಂದಿನ ಆಡಳಿತದ ನಡೆಸಿದ ಯುದ್ಧ ಅಪರಾಧಗಳ ಬಗ್ಗೆ ನಿಷ್ಪಕ್ಷಪಾತಿ ತನಿಖೆ ನಡೆಸುವ ಮಧ್ಯಂತರ ಸರಕಾರದ ಪ್ರಮುಖ ಕೆಲಸಕ್ಕೆ ಇದು ಅಡ್ಡಿಯಾಗುತ್ತದೆ ಎಂಬುದು ಅದರ ಧೋರಣೆಯಾಗಿತ್ತು. ಅಂತಿಮವಾಗಿ ಆದ ಒಪ್ಪಂದದ ಪ್ರಕಾರ, ಡಿ.ಎಫ್.ಸಿ.ಎಫ್ ಇದಕ್ಕಾಗಿ ಒಂದು ಸ್ವತಂತ್ರ ರಾಷ್ಟ್ರೀಯ ಸಮಿತಿಯನ್ನು ನೇಮಿಸುತ್ತದೆ. ಅದು ಆಫ್ರಿಕನ್ ಯೂನಿಯನಿನ ಮೇಲುಸ್ತುವಾರಿಯಲ್ಲಿ ಹಿಂದಿನ ಆಡಳಿತ ನಡೆಸಿದ ಯುದ್ಧ–ಅಪರಾಧಗಳು ಮತ್ತು ಮಾನವ ಹಕ್ಕು ಉಲ್ಲಂಘನೆಗಳ ಬಗ್ಗೆ ತನಿಖೆ ನಡೆಸುತ್ತದೆ.

ವೆನೆಜುವೇಲಾ ದಲ್ಲಿ ಕಾರ್ಮಿಕರ ವೇತನ ಏರಿಕೆಗೆ ಐ.ಎಲ್.ಒ. ವಿರೋಧ!

ವಿಚಿತ್ರ ಆದರೂ ನಿಜ! ಕಾರ್ಮಿಕರ ಹಿತಾಸಕ್ತಿಯನ್ನು ಜಗದ ಎಲ್ಲೆಡೆ ಕಾಪಾಡಬೇಕಾದ ಐಎಲ್.ಒ. ವೆನೆಜುವೇಲಾದಲ್ಲಿ ಕಾರ್ಮಿಕರ ವೇತನ ಏರಿಕೆಯನ್ನು ವಿರೋಧಿಸಿದೆ. ಮೇ 2018ರ ಚುನಾವಣೆಯ ಮೊದಲು ಮದುರೊ ಸರಕಾರ ಕಾರ್ಮಿಕರ ವೇತನವನ್ನು 'ಏಕಪಕ್ಷೀಯವಾಗಿ ಏರಿಸಿದ್ದನ್ನು' ಖಂಡಿಸಿತ್ತು. ಮಾರ್ಚ್ 21, 2018ರಲ್ಲಿ 'ತ್ರಿಪಕ್ಷೀಯ ಸಂಧಾನ', 'ಸಂಘಟನೆಯ ಸ್ವಾತಂತ್ರ್ಯ'ಗಳ ಬಗ್ಗೆ ಐಎಲ್.ಒ ಒಪ್ಪಂದಗಳನ್ನು 'ಉಲ್ಲಂಘಿಸಿದ್ದಕ್ಕಾಗಿ' ಮದುರೊ ಸರಕಾರದ ವಿರುದ್ಧ ತನಿಖೆಗೆ ಆಜ್ಞೆ ಮಾಡಿತ್ತು. ಇದು ಮದುರೊ ಅವರ ವಿರೋಧಿ ಅಭ್ಯರ್ಥಿಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ಸಹಾಯ ಮಾಡಲು ಎಂಬುದು ಸ್ಪಷ್ಟ.



ಮಾಲಕರ ಸಂಘಟನೆಯಾದ 'ಫೆಡೆಕೆಮರಾಸ್' ನ ವಿರುದ್ಧ ಸರಕಾರ ದಾಳಿ, ಕಿರುಕುಳ ಮತ್ತು ಮಾನಹಾನಿ'ಗಳಿಗೆ ಪ್ರಯತ್ನಿಸಿದೆ ಎಂದೂ ಐಎಲ್.ಒ ಆಪಾದಿಸಿತ್ತು. ಕನಿಷ್ಟ ಕೂಲಿಯನ್ನು ಏರಿಸುವಾಗ ಮಾಲಕರ ಸಂಘಟನೆಗಳು ಮತ್ತು ಕಾರ್ಮಿಕ ಸಂಘಗಳ ಜತೆ ತ್ರಿಪಕ್ಷೀಯ ಸಂಧಾನ ಮಾಡಿಲ್ಲ ಎಂದು ಆಪಾದಿಸಿತ್ತು.

ಐಎಲ್.ಒ ತನಿಖೆಗೆ ಉತ್ತರಿಸುತ್ತಾ, ದೇಶದ ಮುನಿಸಿಪಲ್, ಪ್ರಾದೇಶಿಕ ಮತ್ತು ಅಧ್ಯಕ್ಷೀಯ ಚುನಾವಣೆಗಳಲ್ಲಿ ಬುಡಮೇಲು ಕೃತ್ಯ ಎಸಗಲು, ಐಎಲ್.ಒ ಮಾಲಕರ ಸಂಘಟನೆಯಾದ 'ಫೆಡೆಕೆಮರಾಸ್' ಮತ್ತು ದೇಶದ ವಿರೋಧ ರಾಜಕೀಯ ಪಕ್ಷಗಳ ಅಪ್ರಜಾಸತ್ತಾತ್ಮಕ ವಿಭಾಗದ ಜತೆ ಸೇರಿ ಪಿತೂರಿ ಹೂಡಿರುವುದು ದುರದೃಷ್ಟಕರ ಎಂದಿದ್ದಾರೆ, ವೆನೆಜುವೇಲಾದ ಉಪ ಕಾರ್ಮಿಕ ಮಂತ್ರಿ.

'ಫೆಡೆಕೆಮರಾಸ್' ವೆನೆಜುವೇಲಾದ ಉದ್ಯಮಿ ಮತ್ತು ವಾಣಿಜ್ಯ ಕಂಪನಿಗಳ ಮಾಲಕರ ಮುಖ್ಯ ಸಂಘಟನೆ. ಅಧ್ಯಕ್ಷ ಚವೇಝರ ಕಾಲದಿಂದಲೂ ಅದು ಪ್ರಗತಿಪರ ಸರಕಾರಗಳನ್ನು ವಿರೋಧಿಸುತ್ತಾ ಬಂದಿದೆ. ಎಪ್ರಿಲ್ 2002ರಲ್ಲಿ ಅಧ್ಯಕ್ಷ ಚವೇಝರ ವಿರುದ್ಧ ಕ್ಷಿಪ್ರಕ್ರಾಂತಿಯ ಪ್ರಯತ್ನ ನಡೆದಾಗ ಆಗಿನ 'ಫೆಡೆಕೆಮರಾಸ್' ಅಧ್ಯಕ್ಷ ಪೆಡ್ರೊ ಕರ್ಮೊನಾ ಎರಡು ದಿನಗಳ ಕಾಲ ದೇಶದ ಅಧ್ಯಕ್ಷರಾಗಿದ್ದರು ಎಂದು ಇಲ್ಲಿ ನೆನೆಸಿಕೊಳ್ಳಬಹುದು. ಆ ಮೇಲೆ ಸಹ ಅಮೆರಿಕದ ಮತ್ತು ಸ್ಥಳೀಯ ಬಲಪಂಥೀಯ ಶಕ್ತಿಗಳ ಜತೆ ಸೇರಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಪ್ರಗತಿಪರ ಸರಕಾರದ ವಿರುದ್ಧ 'ಫೆಡೆಕೆಮರಾಸ್' ಪಿತೂರಿ ನಡೆಸುತ್ತಲೇ ಬಂದಿದೆ.



➔ ಸರ್ಕಾರಿ ನೌಕರರಿಗೆ ಕೊಡುವ ಎನ್.ಪಿ.ಎಸ್. ಮಾನದಂಡಗಳನ್ನು ಅನುಸರಿಸಬೇಕು. ನಿವೃತ್ತಿ ಆದ ಕಾರ್ಯಕರ್ತೆ ಸಹಾಯಕಿಗೆ ಇಡುಗಂಡು ತಕ್ಷಣ ಬಿಡುಗಡೆ ಆಗಬೇಕು. ಈಗಾಗಲೇ ನಿವೃತ್ತಿ ಆದವರಿಗೆ ಕನಿಷ್ಠ 300/– ಪಿಂಚಣಿ ನೀಡಬೇಕು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ವಿಜಯಪುರ ಜಿಲ್ಲಾಧ್ಯಕ್ಷರಾದ ಸುನಂದಾ ನಾಯಕ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ಶಿಕ್ಷಣ ನೀಡಿ ಸಮಾಜ ಬದಲಾವಣೆಯನ್ನು ಬಯಸುತ್ತಿದೆ ಆದರೆ ಅಂಗನವಾಡಿ ಕೇಂದ್ರಗಳು ಮಾತ್ರ ಹಳೆಯ ರೀತಿಯಲ್ಲಿಯೇ ಕಾರ್ಯಚರಿಸುತ್ತಿವೆ. ಬದಲಾದ ಸಮಾಜ ರೀತಿಯಲ್ಲಿ ಅಂಗನವಾಡಿ ಕೇಂದ್ರಗಳು ಮಕ್ಕಳನ್ನು ಆಕರ್ಷಿಸುವ ಕೇಂದ್ರಗಳಾಗಬೇಕು. ಆದ್ದರಿಂದ ಅಂಗನವಾಡಿ ಕೇಂದ್ರಗಳನ್ನು ಪಾಲನಾ ಮತ್ತು ಕಲಿಕೆಯ ಕೇಂದ್ರಗಳನ್ನಾಗಿಸಬೇಕು ಎಂದರು.

ಈ ಸಂದರ್ಭದಲ್ಲಿ ರಾಜ್ಯದ ಉಪಾಧ್ಯಕ್ಷ ಭಾರತಿ ವಾಲಿ ಮಾತನಾಡಿ, ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಡಿ.20 ರಂದು ತುಮುಕೂರಿನಿಂದ ಬೆಂಗಳೂರಿನ ವರೆಗೆ ಪಾದ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಎಚ್ಚರಿಸಿದರು. ಮೇಲ್ವಿಚಾರಕಿಯಾಗಿ ಮುಂಬಡ್ತಿ ಹೊಂದುವ ಹುದ್ದೆಗಳನ್ನು ಸಂಪೂರ್ಣ ಅಂಗನವಾಡಿ ನೌಕರರಿಗೆ ಕೊಡಬೇಕು. ಮೇಲ್ವಿಚಾರಕಿಯರ ಹುದ್ದೆಗಳಿಗೆ 2015 ರ ಭಾರತ ಸರ್ಕಾರದ ಸುತ್ತೋಲೆ ಪ್ರಕಾರ ಈಗಾಗಲೇ ಇರುವಂತೆ 50% ಹುದ್ದೆಗಳಿಗೆ ಮುಂಬಡ್ತಿ ಪ್ರಕ್ರಿಯೆಯನ್ನು ತಕ್ಷಣ ಪ್ರಾರಂಭಿಸಬೇಕು 2015ರ ಸುತ್ತೋಲೆ ಪ್ರಕಾರ ಮೇಲ್ವಿಚಾರಕಿಯರ ಹುದ್ದೆಗೆ ಮುಂಬಡ್ತಿ ಕೊಡಲು ಸೂಕ್ತ ಕಾನೂನು ಕ್ರಮವನ್ನು ವಹಿಸಬೇಕು ಎಂದರು.

ಜಿಲ್ಲಾ ಗೌರವಾಧ್ಯಕ್ಷರಾದ ಸರಸ್ವತಿ ಮಠ ಮಾತನಾಡಿದರು.

ಚಡಚಣ ತಾಲೂಕಿನ ಅಧ್ಯಕ್ಷರಾದ ಅಶ್ವಿನಿ ತಳವಾರ ಅವರು ಅಪರ ಜಿಲ್ಲಾಧಿಕಾರಿಗಳಿಗೆ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ನೀಡಿದರು.

ಈ ಸಂದರ್ಭದಲ್ಲಿ ಮುದ್ದೇಬಿಹಾಳ ತಾಲೂಕಿನ ಅಧ್ಯಕ್ಷರು ಆರತಿ ಜಾನಕರ, ಕಾರ್ಯದರ್ಶಿ ಸರೋಜಿನಿ ಸಿಂಪಿಗೇರ, ಬಾಗೇವಾಡಿ ರುಕ್ಮೀಣಿ ಮಾನಕರ, ಸರಸ್ವತಿ ಚೌಕಿಮಠ, ವಿಜಯಪುರ ಜಿಲ್ಲೆ ಕಾರ್ಯದರ್ಶಿ ಸುವರ್ಣ ಹಲಗಣಿ, ಸಿಂದಗಿ ವೈ.ವಿ.ಸರಾಫ, ಇಂಡಿ ದಾನಮ್ಮ ಗುಗ್ಗರೆ, ಪ್ರತಿಭಾ ಬುರಡೆ, ಚಡಚಣ ಶೋಭಾ ಕಬಾಡೆ ಸೇರಿದಂತೆ 5 ತಾಲೂಕಿನ ಪದಾಧಿಕಾರಿಗಳು, ಅಂಗನವಾಡಿ ಕಾರ್ಯರ್ತರು ಉಪಸ್ಥಿತರಿದ್ದರು.

ತದ ನಂತರ ಜಿಲ್ಲಾಧಿಕಾರಿ ವೈ.ಎಸ್.ಪಾಟೀಲ ಅವರು ಸ್ಥಳೀಯ ಬೇಡಿಕೆಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

ಅಂಗನವಾಡಿ ನೌಕರರಿಂದ ಉಡುಪಿಯಲ್ಲಿ ಧರಣಿ

ಪಬ್ಲಿಕ್ ಶಾಲೆಗಳ ಬದಲು ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭಿಸುವುದು ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು)ದ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಜುಲಾಯಿ 10 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಧರಣಿ ನಡೆಸಿದರು.

ಧರಣಿಯನ್ನುದ್ದೇಶಿಸಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಶೀಲ ನಾಡ ಮಾತನಾಡಿದರು. ಜಿಲ್ಲಾಧ್ಯಕ್ಷೆ ಭಾರತಿ, ಖಜಾಂಚಿ ಯಶೋಧ, ಜಿಲ್ಲೆಯ ತಾಲೂಕುಗಳ ಅಂಗನವಾಡಿ ನೌಕರರ ಮುಖಂಡರು, ಸಿಐಟಿಯು ಉಡುಪಿ ಜಿಲ್ಲಾ ಮುಖಂಡರಾದ ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ ಧರಣಿಯಲ್ಲಿ ಭಾಗವಹಿಸಿದ್ದರು. ●

JANASHAKTHI KANNADA VARA PATRIKE JULY 15-21, 2019 Price: Rs. 10/- Date of Publication: 12 JULY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ಅಂಗನವಾಡಿ ನೌಕರರಿಂದ ರಾಜ್ಯಾದ್ಯಂತ ಧರಣಿ

ಐಸಿಡಿಎಸ್ ಉಳಿಸಿ; ಎಲ್.ಕೆ.ಜಿ ಮತ್ತು ಯುಕೆಜಿ ಶಾಲಾಪೂರ್ವ ಶಿಕ್ಷಣ ಅಂಗನವಾಡಿ ಕೇಂದ್ರದಲ್ಲೇ ನಡೆಸಲು, ಮಕ್ಕಳ-ಆಹಾರ-ಆರೋಗ್ಯ ಶಿಕ್ಷಣದ ಹಕ್ಕುಗಳ ರಕ್ಷಣೆಗೆ, ನೇರ ನಗದು ವರ್ಗಾವಣೆ ಮತ್ತು ಅನುದಾನ ಕಡಿತದ ವಿರುದ್ಧ, ಒಂದು ವರ್ಷದಿಂದ ಕೇಂದ್ರ ಸರ್ಕಾರವು ಬಿಡುಗಡೆ ಮಾಡದೇ ಇರುವ ಹೆಚ್ಚುವರಿ ಹಣ ಮತ್ತು ಮಾತೃವಂದನಾ ಹಣ ನೀಡಲು, ರಾಜ್ಯ ಸರ್ಕಾರದಿಂದ ಮಾತೃಪೂರ್ಣ ಯೋಜನೆಗೆ ಬರಬೇಕಾದ ಮೊಟ್ಟೆ, ತರಕಾರಿ ಇನ್ನಿತರೇ ಹಣ ನೀಡಲು ಮತ್ತು ಭಾರತ ಕಾರ್ಮಿಕ ಸಮ್ಮೇಳನದ ಶಿಫಾರಸ್ಸು ಜಾರಿಗೆ, ಸ್ಥಳೀಯ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತದಿಂದ ಜಂಟಿ ಸಭೆ ಕರೆಯಲು ಒತ್ತಾಯಿಸಿ ಜುಲೈ 10, 2019 ಬೇಡಿಕೆ ದಿನದ ನಿಮಿತ್ತ ಉತ್ತರ ಕನ್ನಡ ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆ ನಡೆಸಲಾಯಿತು.

ತಮಗೆ ತಿಳಿದಿರುವಂತೆ, ಐಸಿಡಿಎಸ್ ಯೋಜನೆಯು ರಾಜ್ಯದ ಮತ್ತು ದೇಶದ ಮಾನವ ಸಂಪನ್ಮೂಲಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಈಗ ರಾಜ್ಯದಲ್ಲಿ ಒಟ್ಟು 62580 ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಗರ್ಭಾವಸ್ಥೆಯಿಂದ 3 ವರ್ಷದ ಒಳಗಿನ ಮಕ್ಕಳು 23,23,347 ಇದ್ದಾರೆ. 3 ರಇಂದ 6 ವರ್ಷದೊಳಗೆ 16,40,170 ಮಕ್ಕಳಿದ್ದಾರೆ. 8,95,465 ಗರ್ಭಿಣಿ ಬಾಣಂತಿಯರಿದ್ದಾರೆ. ಒಟ್ಟು 51.04 ಲಕ್ಷ ಫಲಾನುಭವಿಗಳಿದ್ದಾರೆ. ಇಂಥ ಮಹತ್ವದ ಯೋಜನೆಯು ಇಂದು ಸರ್ಕಾರದ ಮತ್ತು ಖಾಸಗಿ ದಮನಕಾರಿ ನೀತಿಗೆ ಒಳಗಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಒಂದೆಡೆ ಅನುದಾನ ಕಡಿತ ಮಾಡುವ, ಒನ್ನೊಂದೆಡೆ ಶಾಲಾಪೂರ್ವ ಶಿಕ್ಷಣದ ಕೆಲಸವನ್ನು ಬದಿಗೊತ್ತಿ ಕೇವಲ ಗರ್ಭಿಣಿ ಬಾಣಂತಿ ತಪಾಸಣಾ ಕೇಂದ್ರ ಮಾಡುವ ಆದೇಶ ಮಾಡಲಾಗುತ್ತಿದೆ. ಇದೀಗ ಕೇಂದ್ರ ಅನುದಾನವನ್ನು 25% ಗೆ ಇಳಿಸಿ ಐಸಿಡಿಎಸ್ ನ್ನೇ ಮುಚ್ಚುವಂಥ ನೀತಿಯನ್ನು ಕೇಂದ್ರ ಸರ್ಕಾರ ತಂದಿದೆ. ರಾಜ್ಯದಲ್ಲಿ ಕೂಡ ಅಂಗನವಾಡಿ ಫಲಾನುಭವಿ ಮಕ್ಕಳನ್ನು ಎಲ್.ಕೆ.ಜಿ ಯುಕೆಜಿಗಾಗಿ ಪ್ರಾಥಮಿಕ ಶಾಲೆಗಳಿಗೆ ಸೇರಿಸಲು ನಿರ್ಧರಿಸಿದ್ದಾರೆ. ಇದರಿಂದ ವೈಜ್ಞಾನಿಕವಾಗಿ 6 ವರ್ಷದೊಳಗಿನ ಮಕ್ಕಳ 40% ದೈಹಿಕ ಬೆಳವಣಿಗೆಗೆ 80% ಮಾನಸಿಕ ಬೆಳವಣಿಗೆ ನಡೆಯುವ ಕ್ರಿಯೆಗೆ ತಡೆಯಾಗುತ್ತದೆ. ಅಲ್ಲದೇ ಇದು ಐಸಿಡಿಎಸ್ ಮ್ಯಾನ್ಯುಅಲ್ ಹಾಗೂ ಅಂಗನವಾಡಿ ವಿರೋಧಿಯಾದ ನಿಲುವು ಆಗಿದೆ.

ಐಸಿಡಿಎಸ್ ಯೋಜನೆಯಡಿಯಲ್ಲಿ, ಶಾಲಾ ಪೂರ್ವ ಶಿಕ್ಷಣ ಮತ್ತು ಒಟ್ಟು 500 ಕ್ಯಾಲೋರಿ ಆಹಾರ ನೀಡಿಕೆ ಮಾಡುತ್ತಿರುವ ಇವರು ಅತ್ಯಂತ ಕಡಿಮೆ ಸವಲತ್ತುಗಳಿಗೆ ದಿನವಿಡೀ ಕೆಲಸ ಮಾಡುತ್ತಾ, ಅದರ ಜೊತೆಗೆ, ಇಲಾಖೆಯ, ಆದರೆ ಐಸಿಡಿಎಸ್ ಯೋಜನೆಯದಲ್ಲದ ಎಲ್ಲಾ ತರಹದ ಇನ್ನಿತರೇ ಕೆಲಸಗಳು, ಚುನಾವಣೆ, ಸರ್ವೆಗಳು, ಭಾಗ್ಯಲಕ್ಷ್ಮೀ, ಸ್ತ್ರೀಶಕ್ತಿ, ಅಂಗವಿಕಲರಿಗೆ ಸಂಬಂಧಿಸಿದ ಕೆಲಸಗಳು, ಕೆಲವೆಡೆ ಶೌಚಾಲಯಗಳನ್ನು ಕಟ್ಟಿಸಲು ಕೂಡಾ ಬಳಸುತ್ತಿರುವುದು, ಸಮುದಾಯ ಸಂಬಂಧಿ ಕೆಲಸ ಮಾಡಿಸಲಾಗುತ್ತಿದೆ. ಜೊತೆಗೆ ಕೇಂದ್ರ ಸರ್ಕಾರದ ಇತ್ತೀಚೆಗೆ ಯಾವುದೇ ಸಂಭಾವನೆ ಇಲ್ಲದೇ ಮಾತೃವಂದನ ಯೋಜನೆಯನ್ನು ಮತ್ತು ರಾಜ್ಯ ಸರ್ಕಾರ ಹೊಸದಾಗಿ ಪ್ರಕಟಿಸಿದ ಮಾತೃಪೂರ್ಣ, ಮಾತೃಶ್ರೀ ಯೋಜನೆಯನ್ನು ಜಾರಿಗೊಳಿಸಲಿಕ್ಕೂ ಹೀಗೆ ಅತ್ಯಂತ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ.

ಹಾಗಾಗಿ ಈ ಕೆಳಕಂಡ ಬೇಡಿಕೆಗಳಿಗೆ ಒತ್ತಾಯಿಸಿ ಜುಲೈ 10 ರಂದು ದೇಶವ್ಯಾಪಿ ಮುಷ್ಕರವನ್ನು ಸಂಘಟಿಸಲಾಗಿತ್ತು.

1. ಶಿಕ್ಷಣ ಹಕ್ಕು ಕಾಯ್ದೆ ಮತ್ತು ಆಹಾರ ಹಕ್ಕು ಕಾಯ್ದೆಯ ಅಡಿಯಲ್ಲಿ ಅಂಗನವಾಡಿಗಳನ್ನು ತಂದು, ಭಾರತ ಕಾರ್ಮಿಕ ಸಮ್ಮೇಳನದ ಶಿಫಾರಸ್ಸು ಜಾರಿ ಮಾಡಿ. ಅಂಗನವಾಡಿಯಲ್ಲೇ ಎಲ್.ಕೆ.ಜಿ ಯುಕೆಜಿ ಯನ್ನು ಪ್ರಾರಂಭಿಸಿ, ಅಂಗನವಾಡಿ ನೌಕರರಿಗೆ ಈ ಕೆಲಸವನ್ನು ಅಧಿಕೃತವಾಗಿ ವಹಿಸಬೇಕು. ಮಾತೃಪೂರ್ಣ ಯೋಜನೆ ಕೆಲಸಕ್ಕೆ ಓರ್ವ ಹೆಚ್ಚುವರಿ ಸಹಾಯಕಿಯನ್ನು ನೇಮಕ ಮಾಡಿಕೊಳ್ಳಬೇಕು. ಈಗಿರುವ ಸಹಾಯಕಿಯು ಅಂಗನವಾಡಿ ಕೇಂದ್ರದ ದಿನನಿತ್ಯದ ಕೆಲಸಗಳನ್ನು ಮಾಡುತ್ತಾರೆ. ಆಗ ಕಾರ್ಯಕರ್ತೆಯು ಶಾಲಾಪೂರ್ವ ಶಿಕ್ಷಣಕ್ಕೆ ಮೊದಲಿಗಿಂತ ಹೆಚ್ಚು ಆದ್ಯತೆ ಕೊಟ್ಟು ಕಲಿಸುತ್ತಾರೆ. ಐಸಿಡಿಎಸ್ ಯೋಜನೆಯದಲ್ಲದ ಯಾವುದೇ ಹೆಚ್ಚುವರಿ ಕೆಲಸಗಳನ್ನು ಅಂಗನವಾಡಿ ನೌಕರರಿಗೆ ವಹಿಸಬಾರದು. ಅಂಗನವಾಡಿ ನೌಕರರಿಗೆ ಮಕ್ಕಳ ಜೊತೆಗೆ ಈಗ ಇರುವ ಆತ್ಮೀಯ ತಾಯ್ತನದ ಒಡನಾಟವನ್ನು ಹೆಚ್ಚಿಸಲು ಇನ್ನಷ್ಟು ತರಬೇತಿ ನೀಡುವ ಮೂಲಕ ಕೌಶಲ್ಯ ಬಲವರ್ಧನೆ ಮಾಡಬೇಕು; ಪ್ರಾಥಮಿಕ ಶಾಲೆಗಳ ಸಬಲಿಕರಣ ಕುರಿತು 2017 ರಲ್ಲಿ ನೀಡಿದ ವರದಿಯ ಅಂಗನವಾಡಿ ಕುರಿತ ಅಂಶಗಳನ್ನು ಸರ್ಕಾರ ಒಪ್ಪಬಾರದು ಮತ್ತು ಜಾರಿ ಮಾಡಕೂಡದು.
   ಶಾಸನ ಬದ್ಧ ಕನಿಷ್ಟ ಕೂಲಿ ರೂ. 18000 ನಿಗದಿ ಮಾಡಬೇಕು. ಆ ಮೂಲಕ ಅನುಭವದೊಂದಿಗೆ ಕಲಿಕೆ ಮತ್ತು ಪಾಲನೆ ಎರಡೂ ಉದ್ದೇಶ ಈಡೇರುತ್ತದೆ. ಅಂಗನವಾಡಿ ಕೇಂದ್ರಗಳನ್ನು ಶಾಲಾ ಪೂರ್ವ ಶಿಕ್ಷಣದ ಜೊತೆಗೆ ಶಿಶುಪಾಲನಾ ಕೇಂದ್ರಗಳಾಗಿ ಪರಿವರ್ತಿಸಿ, ಶಾಲೆಗಳ ಮಾದರಿಯಲ್ಲಿ ಪೂರ್ಣ ಪ್ರಮಾಣದಲ್ಲಿ ನಡೆಸಬೇಕು. ಇದಕ್ಕೆ ಕೊಡಬೇಕಾದ ಹಣಕಾಸು ಸಹಾಯವನ್ನು, ಮೂಲಸೌಕರ್ಯವನ್ನು, ಪ್ರೋತ್ಸಾಹವನ್ನು ಹೆಚ್ಚಿಸಬೇಕು. 1995 ರ ನಂತರ ಆಯ್ಕೆಯಾದವರು ಎಸ್.ಎಸ್.ಎಲ್.ಸಿ ಪಾಸಾದವರೇ ಆಗಿರುವುದರಿಂದ ಅವರಿಗೆ ಸೂಕ್ತ ಔಪಚಾರಿಕ ರೂಢಿಗತ ಶಿಕ್ಷಣದ ತರಬೇತಿ ಕೊಡಿ.
2. ರಾಜ್ಯದಲ್ಲಿ ಕಾನ್ವೆಂಟ್ ಹಾಗೂ ಶಾಲೆಗಳನ್ನು ನಡೆಸುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪರವಾನಗಿ ರದ್ದು ಮಾಡಬೇಕು. ಅಂಗನವಾಡಿಯಲ್ಲಿ ಪಡೆಯುತ್ತಿರುವ ಶಾಲಾಪೂರ್ವ ಶಿಕ್ಷಣದ ಆಧಾರದಲ್ಲಿ ಇಲ್ಲಿಂದಲೇ ಮುಂದಿನ ಪ್ರಾಥಮಿಕ ಹಂತದ ಶಿಕ್ಷಣ ಪಡೆಯಲು ಟಿಸಿ ಯನ್ನು ವರ್ಗಾಯಿಸುವ ಕ್ರಿಯೆ ಜಾರಿ ಮಾಡಬೇಕು. ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಓದುವವರಿಗೆ ಮಾತ್ರ ಸರ್ಕಾರಿ ಸೌಲಭ್ಯಗಳು ಎಂಬ ನೀತಿ ಜಾರಿಗೆ ತರಬೇಕು.
3. ಸರ್ಕಾರಿ ಶಾಲೆಗಳನ್ನು ಬಲಗೊಳಿಸಲು ವೈಜ್ಞಾನಿಕ ಕಣ್ಣೋಟದ ಇಚ್ಛಾಶಕ್ತಿ ಹೊಂದಬೇಕಿದೆ. ವಿವಿಧ ಶಿಕ್ಷಣ ತಜ್ಞರು ನೀಡಿರುವ ಸಲಹೆಗಳನ್ನು ಪರಿಗಣಿಸಿ ಶಿಕ್ಷಣಕ್ಕೆ ಜಿಡಿಪಿ ಮತ್ತು ಬಜೆಟ್ ಹಣ ಹೆಚ್ಚಿಗೆ ಮೀಸಲಿಡಿ. ಶಿಕ್ಷಣ ಇಲಾಖೆಯಲ್ಲಿ ಖರ್ಚು ಮಾಡುವ ಹಣದಲ್ಲಿ ಸ್ವಲ್ಪ ಭಾಗವನ್ನು ಈ ಮಕ್ಕಳಿಗೆ ಸಮವಸ್ತ್ರದ ಖರ್ಚಿಗಾಗಿ, ಮೂಲಸೌಕರ್ಯವೃದ್ಧಿಗೆ ಕೊಡಬಹುದು.
4. ಬದಲಾವಣೆ ಬಯಸುವ ಸಮಾಜದ ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಅಂಗನವಾಡಿ ಕೇಂದ್ರಗಳಿಗೆ ಎಲ್ಲಾ ರೀತಿಯ ಗುಣಾತ್ಮಕ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.
5. ಈ ಮೇಲಿನ ಎಲ್ಲಾ ಸಕಾರಣಗಳನ್ನು ಮುಂದಿಟ್ಟು ರಾಜ್ಯ ಸರ್ಕಾರದ ಬಜೆಟ್ ಪ್ರಸ್ತಾವನೆಯ ಅಂಶವನ್ನು ಕೈಬಿಟ್ಟು ಮತ್ತು ಅದರ ಆಧಾರದಲ್ಲಿ ಮಾಡಿದ 17-5-2019 ರ ಆದೇಶವನ್ನು ರದ್ದುಮಾಡಿ, ಅಂಗನವಾಡಿಯಲ್ಲೇ ಎಲ್.ಕೆ.ಜಿ ಮತ್ತು ಯುಕೆಜಿ ಪ್ರಾರಂಭಿಸಲು ಆದೇಶಿಸಬೇಕೆಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು ಸಂಯೋಜಿತ) ಉತ್ತರಕನ್ನಡ ಜಿಲ್ಲಾ ಸಮಿತಿಯ ಪರವಾಗಿ ಒತ್ತಾಯಿಸಲಾಯಿತು.

ಹಾವೇರಿ:

ಅಂಗನವಾಡಿ ಕೇಂದ್ರಗಳಲ್ಲಿ ಐಎಲು-ಗಎಲು ಪ್ರಾರಂಭಿಸಲು, ಬಾಕಿ ಗೌರವಧನ ಹಾಗೂ ಕೇಂದ್ರ ಸರ್ಕಾರದಿಂದ 2018 ಅಕ್ಟೋಬರ್‌ನಲ್ಲಿ ಹೆಚ್ಚಳವಾದ ಗೌರವಧನ ಬಿಡುಗಡೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ರಿ)ಸಿಐಟಿಯು ಸಂಯೋಜಿತ ಜಿಲ್ಲಾ ಸಮಿತಿಯಿಂದ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಬೃಹತ್ ಪ್ರತಿಭಟನೆ ನಡೆಸಿ

ಪುಟ 14 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**